# ಹಳ್ಳಿಯ ಬಾವಿ

(ಕಥಾಸಂಕಲನ)



ಎಚ್. ಎನ್. ರಾವ್ ಬ್ರದರ್ಸ್

ಬೆಂಗಳೂರು ೨

೧೯೫೦





ಬೆಲೆ: ಒಂದೂಕಾಲು ರೂಪಾಯಿ

ಮುದ್ರಕರು:
ಭಾರತೀ ಮುದ್ರಣಾಲಯ,
ಗೊಲ್ಲರಪೇಟೆ, ಬೆಂಗಳೂರು ಸಿಟಿ



ಕಳೆದ ೨೫ ವರ್ಷಗಳಿಂದ

ಸಾಹಿತ್ಯ, ಸಂಸ್ಕೃತಿಗಳ ಉತ್ಕರ್ಷೆಗಾಗಿ ದುಡಿದ

ಶ್ರೀ ಅ. ನ. ಕೃಷ್ಣರಾಯರ

ಸಾಹಿತ್ಯಸೇವಾರಜತೋತ್ಸವದ ಕಾಣಿಕೆ.

—ಲೇಖಕ—

# ಪರಿವಿಡಿ



---

[ಶ್ರೀ ಪ್ರೇಮ್‌ಚಂದರ ಈ ಕಥೆಗಳನ್ನು ಅನುವಾದಿಸಿ ಪ್ರಕಟಿಸಲು ಅ
ಯಿತ್ತ ಶ್ರೀ ಶ್ರೀಪತ್‌ರಾಯ್‌ರವರಿಗೂ ಮತ್ತು ಶ್ರೀ ಗುರುದಯಾಳ್ ಮಲ್ಲಿಕ್‌ರ
ನಾನು ಋಣಿಯಾಗಿದ್ದೇನೆ].

' ಧನ

# ಹಳ್ಳಿಯ ಬಾವಿ

"ಎಂತಹ ನಾತ ಬಡಿಯುತ್ತಿರುವ ನೀರು ತಂದಿದ್ದೀಯೆ ಗಂಗೆ!" ಎನ್ನುತ್ತಾ ಜೋಕು, ನೀರನ್ನು ಕುಡಿಯಲು ಪಾತ್ರೆಯನ್ನು ಎತ್ತಿಕೊಂಡ. "ಎಂತಹ ನಾತ, ಈ ನೀರನ್ನು ಕುಡಿಯಲಾರೆ, ದಾಹವನ್ನು ಅಡಗಿಸಿ ಕೊಳ್ಳಲಾರೆ!" ಎಂದವನು ನೀರನ್ನು ಕುಡಿಯಹತ್ತಿದ.

ಗಂಗೆ, ತನ್ನ ಗಂಡ ಜೋಕುವಿಗಾಗಿ ಪಾತ್ರೆಯ ತುಂಬಾ ನೀರನ್ನು ತಂದಿಡುತ್ತಿದ್ದಳು, ಬಾವಿ ದೂರದಲ್ಲಿತ್ತು. ಪುನಃ ಪುನಃ ಅಲ್ಲಿಯ ನೀರನ್ನು ತನ್ನ ಗುಡಿಸಲಿಗೆ ಅವಳು ತರಲಾಗುತ್ತಿರಲಿಲ್ಲ. ನೀರಿನಲ್ಲಿ ದೋಷವೇನೂ ಕಾಣುತ್ತಿರಲಿಲ್ಲ. ಹಾಗಾದರೆ, ಇದ್ದಕ್ಕಿದ್ದಹಾಗೆ ದೋಷವೆಲ್ಲಿಂದ ಬಂತು? ನೀರಿನಲ್ಲಿ ಯಾವುದೋ ಪ್ರಾಣಿ ಸತ್ತುಬಿದ್ದು, ಕೊಳೆತು ನಾರಿ ಕೆಟ್ಟ ವಾಸನೆ ಹರಡಿದ್ದಿರಬಹುದು.

ಹಣ ಸಾಲ ಕೊಟ್ಟು, ಹೆಚ್ಚು ಬಡ್ಡಿ ಸೆಳೆದು, ಶ್ರೀಮಂತನಾಗಿದ್ದ ಸಾಹು ಕಟ್ಟಿಸಿದ ಬಾವಿ ಹಳ್ಳಿಯ ಹೊರಭಾಗದಲ್ಲಿತ್ತು. ಗಂಗೆ ಅಲ್ಲಿಂದ ನೀರನ್ನು ಸೆಳೆದುಕೊಂಡು ಬರಲು ಅವನು ಆಸ್ಪದ ಕೊಡುತ್ತಿರಲಿಲ್ಲ.

ಗಂಗೆಯ ಗಂಡ ಜೋಕು, ಯಾವುದೋ ರೋಗದಿಂದ ಬಳಲುತ್ತಾ ಹಾಸಿಗೆ ಹಿಡಿದಿದ್ದ. ಬಾಯಾರಿ ಬಳಲುತ್ತಾಯಿದ್ದವನು, ಒಳ್ಳೆಯ ನೀರು ಕುಡಿದು ದಾಹವನ್ನು ಅಡಗಿಸಿಕೊಳ್ಳಲು ಆಶಿಸಿದ. ಕೊಳಕುನೀರಿನ ವಿನಹ ಅವನಿಗೆ ಸ್ವಚ್ಛ ಉದಕ ಸಿಗುವಂತಿರಲಿಲ್ಲ. ಕೊಳಕು ನೀರನ್ನು ಕುಡಿಯಲಾರ, ಒಳ್ಳೆಯ ನೀರಿನ ಹಂಬಲ ಬಿಡಲಾರ, ನೀರಡಿಕೆ ತೀರಿಸಿ ಕೊಳ್ಳಲಾರ — ಹೀಗಾಗಿ ಉಭಯಸಂಕಟದಿಂದ ಪರಿತಪಿಸುತ್ತಿದ್ದ. ನಿರ್ವಾಹವಿಲ್ಲದೆ ಅವನು ಗಂಗೆಯನ್ನು ಕೂಗುತ್ತಾ "ಮನೆಯಲ್ಲಿರುವ ಕೊಳಕುನೀರನ್ನೇ ತಾ, ಮೂಗು ಮುಚ್ಚಿಕೊಂಡು ಕುಡಿದು ನೀರಡಿಕೆ ಆರಿಸಿಕೊಳ್ಳುವೆ" ಎಂದ.

"ನಾರುತ್ತಿರುವ ನೀರನ್ನು ಹೇಗೆ ಕುಡಿಯುತ್ತೀರಿ? ಓಡಿಹೋಗಿ ದೂರದ ಬಾವಿಯಿಂದ ಒಳ್ಳೆಯ ನೀರನ್ನು ತರುವೆ" ಎಂದಳು ಗಂಗೆ.

ಜೋಕು ಆಶ್ಚರ್ಯದಿಂದ ತಲೆಯೆತ್ತಿ ಗಂಗೆಯನ್ನು ನೋಡುತ್ತಾ "ಎಲ್ಲಿಂದ ನೀರು ತರುವೆ?" ಎಂದು ಪ್ರಶ್ನಿಸಿದ.

ಹಳ್ಳಿಯಲ್ಲಿ ಸಾಹು ಕಟ್ಟಿಸಿದ ಬಾವಿಯಲ್ಲದೆ ಮತ್ತೊಂದು ಬಾವಿಯಿತ್ತು. ಅದು ಜಮೀನ್ದಾರ ಠಾಕೂರ ಕಟ್ಟಿಸಿದ ಬಾವಿ. ಇಲ್ಲಿಂದಲೂ ಗಂಗೆ ನೀರನ್ನು ಸೆಳೆದುಕೊಂಡು ಹೋಗುವಹಾಗಿರಲಿಲ್ಲ. ಠಾಕೂರ ಉಚ್ಚಜಾತಿಯ ಬ್ರಾಹ್ಮಣ. ಅವನು ಸಮಾಜಬಾಹಿರರಾದ ತುಚ್ಛರಿಗೆ ತನ್ನ ಬಾವಿಯಿಂದ ನೀರು ಕೊಂಡುಹೋಗಲು ಬಿಡುತ್ತಿರಲಿಲ್ಲ. ಜೋಕು ಇದೆಲ್ಲವನ್ನೂ ತಿಳಿದು ಗಂಗೆಗೆ ಸಮಾಧಾನ ಹೇಳಿದ.

"ದುಡುಕಬೇಡ ಗಂಗೆ, ಆ ಬ್ರಾಹ್ಮಣ ಶಪಿಸಿಯಾನು. ಠಾಕೂರನ ಬಾವಿಯಿಂದ ನೀರನ್ನು ಸೆಳೆದೆಯಾದರೆ ಅವನು ನಿನ್ನನ್ನು ಕೋಲಿನಿಂದ ಬಡಿದು ಸಾಯಿಸುವನು! ಸಾಹು, ಬಾವಿಯಿಂದ ನೀರನ್ನು ತಂದರೆ ಸಾಲದ ಹೊರೆ ಅವನು ಮತ್ತಷ್ಟು ಹೊರಿಸುತ್ತಾನೆ! ಅವನು ಬೆನ್ನಿನ ಮೂಳೆ ಮುರಿದಾನು. ಬಡವರ ನೋವು ಶ್ರೀಮಂತರಿಗೆ ತಿಳಿಯದು. ನಾವು ನೋವಿನಿಂದ ಗುಡಿಸಿಲಲ್ಲಿ ನರಳುತ್ತಿದ್ದಾಗ್ಯೂ ಯಾರೂ ನಮ್ಮ ಕಡೆ ನೋಡುವುದಿಲ್ಲ. ಇನ್ನು ಅವರ ಬಾವಿಯಿಂದ ನೀರು ಸೆಳೆದುತರಲು ಬಿಡುವರೆ?" ಎಂದು ಜೋಕು ಅತಿ ಸಂಕಟದಿಂದ ಹೇಳಿದ.

ಗಂಗೆ ಪ್ರತಿಯಾಗಿ ಏನೂ ಹೇಳಲಿಲ್ಲ. ನಾತ ಬಡಿಯುತ್ತಿದ್ದ ನೀರನ್ನು ಕುಡಿಯಲು ಬಿಡಲಿಲ್ಲ.

೨

ಆಗ ಒಂಬತ್ತು ಘಂಟೆ ರಾತ್ರಿ. ಮುಂಜಾವಿನಿಂದ ದುಡಿದುಬಂದಿದ್ದ ರೈತರು ಹಾಸಿಗೆ ಹಿಡಿದಿದ್ದರು. ಸೋಮಾರಿಗಳು ಕೆಲವರು ಠಾಕೂರನ ಮನೆಯ ಹತ್ತಿರ ಹರಟೆ ಕೊಚ್ಚುತ್ತಿದ್ದರು. ಠಾಕೂರ, ತಾನು ಹೇಗೆ ಪೋಲೀಸ್ ಅಧಿಕಾರಿಗೆ ಲಂಚಕೊಟ್ಟು ಕಾರ್ಯ ಸಾಧಿಸಿಕೊಂಡ ಬಗೆಯನ್ನೂ, ತಂತ್ರದಿಂದ ದಾಖಲೆಪತ್ರವನ್ನು ಪಡೆದುಕೊಂಡ ರೀತಿಯನ್ನೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ.

ಈ ಹೊತ್ತಿಗೆ ಕಳ್ಳಹೆಜ್ಜೆಯಿಟ್ಟು ಬಾವಿಯ ಹತ್ತಿರಕ್ಕೆ ಗಂಗೆ ಬರುತ್ತಿದ್ದಳು. ಹಣತೆಯ ಬೆಳಕು ಸ್ವಲ್ಪಸ್ವಲ್ಪ ಮಂಕಾಗಿ ಉರಿಯುತ್ತಿತ್ತು. ಸಮಯ ಕಾಯುತ್ತಿದ್ದ ಗಂಗೆ ಯೋಚಿಸುತ್ತ ಬಾವಿಯ ಹತ್ತಿರ ಬಂದಳು. "ಹಳ್ಳಿಯವರೆಲ್ಲಾ ಇಲ್ಲಿಂದ ನೀರನ್ನು ಸೆಳೆದುಕೊಂಡು ಹೋಗುತ್ತಾರೆ. ನಮಗೇಕೆ ಅಡ್ಡಿಮಾಡುತ್ತಾರೆ? ನಿರ್ಭಾಗ್ಯರಿಗೆ ಇಲ್ಲಿ ಅವಕಾಶವಿಲ್ಲವೆ? ಸಮಾಜ ಹೇಗೆ ತನ್ನ ಕ್ರೂರ, ಕಠಿಣ ಶಾಸನದಿಂದ ಬಂಧಿಸಿದೆ? ಉಚ್ಚಜಾತಿ-ತುಚ್ಛಜಾತಿ ಎಂದು ಯಾರು ನಿಶ್ಚಯಿಸಿದರು? ಎದೆಯ ಮೇಲೆ ಕಾಣುವ ದಾರ-ಜನಿವಾರ, ಉಚ್ಚ ಜಾತಿಯ ಚಿಹ್ನೆಯೆ? ಈ ಉಚ್ಚಜಾತಿ—ಠಕ್ಕು, ತಂತ್ರ ಇವುಗಳನ್ನು ಚೆನ್ನಾಗಿ ಕೈವಶ ಮಾಡಿಕೊಂಡಿದೆ. ಈ ಠಾಕೂರ-ಬಡ ಕುರುಬನಿಗೆ ಸೇರಿದ ಕುರಿಯನ್ನು ಹಾರಿಸಿ, ಅದರ ಮಾಂಸವನ್ನು ತನ್ನ ಹೊಟ್ಟೆಗೆ ತುಂಬಿಕೊಂಡ! ಆ ಪಂಡಿತ-ಅವನ ಮನೆ ಜೂಜಿನಕಟ್ಟೆಯಾಗಿಹೋಗಿದೆ! ಆ ಸಾಹುಜಿ-ತುಪ್ಪಕ್ಕೆ ಎಣ್ಣೆಯನ್ನು ಬೆರೆಸಿ ಮೋಸ ಮಾಡುತ್ತಿದ್ದಾನೆ! ಇವರೆಲ್ಲಾ ಉತ್ತಮರು-ಉಚ್ಚಜಾತಿಯವರು! ಹೇಗೆ ಉತ್ತಮರಾದರೋ ದೇವರೇ ಬಲ್ಲ! ತುಚ್ಛಜಾತಿಯವರಾದ ನಾವು ಇವರಿಗೆ ದುಡಿದು ಕೂಲಿ ಬೇಡಿದಾಗ, ನಮಗೆ ಸಿಗುವುದೇನು-ಬಾಯಿತುಂಬಾ ಬೈಗಳು! ಉಚ್ಚರ ಕಣ್ಣಿಗೆ ತುಚ್ಛರು ಬಿದ್ದರೆ ತೀರಿತು. ಮಾನವಸರ್ಪಗಳು ಕೆಂಡದಂತಹ ಕಣ್ಣುಬಿಟ್ಟು ನಮ್ಮನ್ನು ನುಂಗುವಂತೆ ಆರ್ಭಟಿಸುವುವು!" ಎಂದು ನಾನಾಪರಿ ಗಂಗೆ ತನ್ನಲ್ಲಿತಾನೇ ಯೋಚಿಸಿದಳು.

ಆಗ ಕೆಲವರು ನಡೆದುಬರುತ್ತಿರುವ ಸಪ್ಪಳ ಕೇಳಿಸಿತು. ಗಂಗೆಯ ಹೃದಯ ಭಯದಿಂದ ಹೆಚ್ಚು ಬಡಿದುಕೊಳ್ಳಲಾರಂಭಿಸಿತು. ಸೇದಲು ತಂದ ಹಗ್ಗ ಮತ್ತು ಬಿಂದಿಗೆಯನ್ನು ಬೆನ್ನುಹಿಂದೆ ಮುಚ್ಚಿಟ್ಟುಕೊಂಡು ಮರದ ನೆರಳಲ್ಲಿ ಅವಳು ಅವಿತುಕೊಂಡಳು. ಹಿಂದೆ ತಮ್ಮ ಗುಂಪಿಗೆ ಸೇರಿದ ಮೇಘ, ಧಣಿಯಲ್ಲಿ ಕೂಲಿ ಬೇಡಿದಾಗ-ಆ ನಿರ್ಲಜ್ಜ ಅವನನ್ನು ಕೋಲಿನಿಂದ ಬಡಿದು ರಕ್ತ ಕಾರುವಂತೆ ಸದೆಬಡಿದುದನ್ನು ನೆನೆದು, ಗಂಗೆ ತತ್ತರಿಸಿದಳು.

ಇಬ್ಬರು ಹೆಂಗಸರು ಬಾವಿಯಿಂದ ನೀರು ಒಯ್ಯಲು ಬಂದರು. ಅದರಲ್ಲೊಬ್ಬಳು "ಗಂಡಸರು ನಮ್ಮನ್ನು ಸುಮ್ಮನೆ ಕೂಡಲು ಬಿಡುವುದಿಲ್ಲ.

ಅವರು ನಮ್ಮನ್ನು ಜೀತದ ಆಳುಗಳೆಂದು ತಿಳಿದಿದ್ದಾರೆ. ಅವರು ಎಸೆಯುವ ಅನ್ನ-ಹಣಕ್ಕೆ ನಾವು ದುಡಿಯಬೇಕಾಗಿದೆ" ಎಂದಳು.

ಇನ್ನೊಬ್ಬಳು "ನಿಲ್ಲು, ನಿಲ್ಲು, ನಾನು ಇಲ್ಲಿ ದುಡಿದಹಾಗೆ ಮತ್ತೆಲ್ಲಿಯಾದರೂ ದುಡಿದಿದ್ದರೆ ಹೆಚ್ಚು ಸೌಖ್ಯಪಡುತ್ತಿದ್ದೆ. ನಮ್ಮ ದುಡಿತಕ್ಕೆ ಪುರಸ್ಕಾರವಿಲ್ಲ, ಪ್ರತಿಫಲ ಮೊದಲೇ ಇಲ್ಲ. ದುಡಿತಕ್ಕೆ ಪ್ರತಿಯಾಗಿ ಬೈಗಳು ಸಿಗುತ್ತಿವೆ!" ಎಂದಳು. ಆ ಅತೃಪ್ತಿ ಹೆಂಗಸರು ಮಾತನಾಡುವುದನ್ನು ಆಡಿ ಮುಗಿಸಿ, ನೀರು ಸೆಳೆದುಕೊಂಡು ಹೊರಟರು. ಮರೆಯಲ್ಲಿ ನಿಂತು ಎಲ್ಲವನ್ನೂ ಕೇಳಿಸಿಕೊಳ್ಳುತ್ತಲಿದ್ದ ಗಂಗೆ, ಬಾವಿಯ ಪ್ರದೇಶ ಬರಿದಾಗುವುದನ್ನೇ ಕಾಯುತ್ತಿದ್ದಳು. ಠಾಕೂರನೂ ಮಲಗಲು ಮನೆಯೊಳಗೆ ಹೊರಟ. "ಕೊನೆಗೆ ಬಾವಿಯ ಹತ್ತಿರ ಸುಳಿದಂತಾಯಿತು!" ಎಂದು ಗಂಗೆ, ವೃದ್ಧದೊರೆ ಸಂಜೀವನವನ್ನು ಹುಡುಕಿತರಲು ಹೊರಟಂತೆ, ಸ್ವಚ್ಛಜಲನಿಧಿಯ ಹತ್ತಿರಕ್ಕೆ ಬಂದು ಹರ್ಷಪಟ್ಟಳು.

ಬಿಂದಿಗೆಯ ಕೊರಳಿಗೆ ಹಗ್ಗ ಬಿಗಿದು ಬಾವಿಯೊಳಗೆ ಬಿಟ್ಟಳು. ಸೈನಿಕ ಶತ್ರುವನ್ನು ಹಿಡಿಯಲು, ಸ್ಥಳವನ್ನು ಆಕ್ರಮಿಸಲು ಎಚ್ಚರಿಕೆಯಿಂದ ಹೆಜ್ಜೆಯಿಡುವಂತೆ ನಾಲ್ಕೂ ದಿಕ್ಕನ್ನು ನೋಡುತ್ತ, ಅತಿ ಉತ್ಸಾಹದಿಂದ ನಾಲ್ಕೈದುಸಾರಿ ಹಗ್ಗವನ್ನು ಜಗ್ಗಿ, ಬಿಂದಿಗೆಯನ್ನು ಎಳೆಯಲಾರಂಭಿಸಿದಳು. ಅತಿಕ್ರಮಿಸಿ ಬಂದುದನ್ನು ಯಾರಾದರೂ ಕಂಡಲ್ಲಿ ತನ್ನನ್ನು ಪೂರೈಸುವರೆಂಬ ಭಯದಿಂದ ತತ್ತರಿಸಿದ ಗಂಗೆ, ಕೊನೆಗೂ ಧೈರ್ಯಮಾಡಿ ದೈವವನ್ನು ಪ್ರಾರ್ಥಿಸುತ್ತ ಹಗ್ಗ ಸೆಳೆಯುತ್ತಿದ್ದಳು.

ಇದ್ದಕ್ಕಿದ್ದಹಾಗೆ ಸಿಂಹ ಬಾಯನ್ನು ತೆರೆದಂತೆ, ಠಾಕೂರನ ಮನೆ ಬಾಗಿಲು ಪೂರಾ ತೆಗೆದುಕೊಂಡಿತು. ಗಂಗೆ ಭೀತಳಾಗಿ ಹಗ್ಗವನ್ನು ಬಿಟ್ಟುಬಿಟ್ಟಳು ಬಿಂದಿಗೆ ದೊಪ್ಪೆಂದು ಬಾವಿಯಲ್ಲಿ ಬಿದ್ದು ಶಬ್ದಮಾಡಿತು. "ಯಾರಲ್ಲಿ! ಯಾರಲ್ಲಿ?" ಎಂದು ಠಾಕೂರ ಬಾವಿಯ ಹತ್ತಿರಕ್ಕೆ ಬಿರುಸಾಗಿ ಹೆಜ್ಜೆಯಿಟ್ಟು ಬರುತ್ತಿದ್ದ. ಭಯದಿಂದ ಉಸಿರುಬಿಡುತ್ತ ಗಂಗೆ ಗುಡಿಸಿಲು ಕಡೆಗೆ ಓಡಿದಳು. ಅವಳು ಗುಡಿಸಿಲು ಪ್ರವೇಶಿಸುವುದರೊಳಗಾಗಿ ಜೋಕು ನಾತ ಬಡಿಯುತ್ತಿದ್ದ ನೀರನ್ನು ಬಾಯಿಗೆ ಸುರಿದುಕೊಳ್ಳುತ್ತಿದ್ದ!

# ನನ್ನ ಮೊದಲನೆಯ ಕೃತಿ

ಆಗ ನನಗೆ ಹದಿಮೂರು ವಯಸ್ಸು. ಹಿಂದೀ ಭಾಷೆ ನನಗಷ್ಟು ಪರಿಚಯವಾಗಿರಲಿಲ್ಲ. ಊರ್ದೂ ಭಾಷೆಯಲ್ಲಿ ರಚಿತವಾದ ಕಾದಂಬರಿಗಳೆಂದರೆ ನನಗೆ ಬಹು ಪ್ರಿಯವಾಗಿದ್ದವು. ಮೌಲಾನ ಷರಾರ್, ಪಂಡಿತ ರತನನಾಥ ಷರ್ಷಾ, ಮಿರ್ಜಾರುಸ್ವಾ, ಹರಡಾಯಿ ಮೌಲ್ವಿ ಮುಹಮ್ಮದಾಲಿ ಇವರುಗಳು, ಆ ಕಾಲದಲ್ಲಿ ಪ್ರಸಿದ್ಧ ಲೇಖಕರೆನಿಸಿದ್ದರು. ಈ ಕಾದಂಬರಿಕಾರರ ಕೃತಿಗಳ ಪೈಕಿ ಯಾವುದಾದರೂ ನನ್ನ ಕೈಗೆ ಸಿಕ್ಕಿತೆಂದರೆ ಸಾಕು, ನಾನು ಶಾಲೆ ಮರೆತು, ಮೊದಲಿನಿಂದ ಕೊನೆ ಮುಟ್ಟುವವರೆಗೆ ಓದಿ ಮುಗಿಸುತ್ತಿದೆ. ಆ ಕಾಲದಲ್ಲಿ, ಇಂಗ್ಲಿಷ್ ಭಾಷೆಯಲ್ಲಿ ಪ್ರಸಿದ್ಧವಾಗಿರುವ ರೈನಾಲ್ಡ್ಸ್ ಕಾದಂಬರಿಗಳಿಗೆ ವಿಶೇಷ ಬೇಡಿಕೆಯಿತ್ತು. ಈ ಕೃತಿಗಳ ಉರ್ದೂ ಭಾಷಾಂತರಗಳು ಸಿದ್ಧವಾಗಿ ಹೆಚ್ಚು ಹೆಚ್ಚು ಮಾರಾಟವಾಗುತ್ತಲಿತ್ತು. ಇವುಗಳೂ ನನಗೆ ಪ್ರಿಯವಾಗಿದ್ದವು. ಈ ಅನುವಾದ ಕೃತಿಯನ್ನೆಲ್ಲಾ ನಾನು ಬಿಡದೆ ಓದುತ್ತಲಿದ್ದೆ. ರತನನಾಥ ಷರ್ಷಾರವರು ಬೇಕಾದಷ್ಟು ಕೃತಿರಚನೆ ಮಾಡಿದ್ದರು. ಹೆಚ್ಚು ಓದುವ ಹಂಬಲವಿದ್ದ ನನಗೆ, ಇವುಗಳನ್ನೆಲ್ಲಾ ಪೂರೈಸಲಾಗಲಿಲ್ಲ.

ನನ್ನ ತಂದೆ ಆಗ ಗೋರಕಪುರದಲ್ಲಿದ್ದರು. ನಾನು ಎಂಟನೆ ಇತ್ತೆಯಲ್ಲಿ ಓದುತ್ತಿದ್ದೆ. ಓದುತ್ತಿದ್ದುದು ಮಿಷನ್ ಸ್ಕೂಲಿನಲ್ಲಿ. ಆಗ ಬುದ್ಧಿಲಾಲ್ ಎಂಬ ಪುಸ್ತಕ ಮಾರಾಟ ಮಾಡುವವನೊಬ್ಬನು ರೀಟಿ ಎಂಬಲ್ಲಿ ಅಂಗಡಿ ತೆರೆದಿದ್ದ. ಅವನ ಪುಸ್ತಕ ಭಂಡಾರದಲ್ಲಿದ್ದ ಕಾದಂಬರಿಗಳನ್ನು ನಾನು ಆಯ್ದು ಆಯ್ದು ಓದುತ್ತಲಿದ್ದೆ. ನಿತ್ಯವೂ ಪುಸ್ತಕಾಲಯಕ್ಕೆ ಹೋಗಿ ಬರುತ್ತಿದ್ದು, ಒಂದಾದನಂತರ ಒಂದನ್ನು ಆರಿಸಿ ಓದಿ ಮುಗಿಸುತ್ತಿದ್ದೆ. ಹೆಚ್ಚು ಕಾಲ ಅಂಗಡಿಯಲ್ಲಿ ನಾನು ಕಾಲವ್ಯಯ ಮಾಡುವ ಹಾಗಿರಲಿಲ್ಲ. ನಮ್ಮ ಶಾಲಾ ಪುಸ್ತಕಗಳಿಗೆ ಇತರರು ಬರೆದ ಟಿಪ್ಪಣಿ ಪುಸ್ತಕಗಳನ್ನು ಈ ಪುಸ್ತಕ ವ್ಯಾಪಾರಿಯಿಂದ ಪಡೆದುಕೊಂಡು, ನನ್ನ ಸಹಪಾಟಿಗಳಿಗೆ ಮಾರುತ್ತಲಿದ್ದೆ. ಈ ವ್ಯಾಪಾರ ಲಾಭದ ಪ್ರತಿಫಲ ನನಗೆ

ಮತ್ತೊಂದು ರೀತಿಯಲ್ಲಿ ಸಲ್ಲುತ್ತಿತ್ತು. ನನಗೆ ಬೇಕಾದ ಕಾದಂಬರಿಗಳ ಪ್ರತಿಯನ್ನು ಪುಸ್ತಕಾಲಯದಿಂದ ಮನೆಗೆ ಒಯ್ದು ಓದಿ ಹಿಂದಿರುಗಿಸಲು ವ್ಯಾಪಾರಿ ಅನುಮತಿಯಿತ್ತಿದ್ದ. ಕಾದಂಬರಿ ಕೋಶ ಮುಗಿಸಿದ ನಂತರ, ನಾನು ಅನುವಾದ ಕೃತಿಗಳನ್ನು ಓದಲು ಮೊದಲು ಮಾಡಿದೆ. ನವಲ ಕಿಶೋರ ಮುದ್ರಣಾಲಯದವರು ಛಾಪಿಸಿದ ಚಮತ್ಕಾರಿಕ ಕಾದಂಬರಿಗಳನ್ನು ಓದಿ ಮುಗಿಸಿದೆ. ಮುಗಿಸಲಾರದಷ್ಟು ದೊಡ್ಡ ದೊಡ್ಡ ಗ್ರಂಥಗಳು ಬೇಕಾದಷ್ಟು ದೊರೆತವು. ಹದಿನೇಳು ಭಾಗವಾಗಿ ವಿಂಗಡಿಸಿದ ಈ ನೀಳ್ಗತೆಯ ಪುಟಸಂಖ್ಯೆ, ಒಂದೊಂದೂ ಸುಮಾರು ಎರಡು ಸಾವಿರ ಪುಟಕ್ಕೂ ಮೀರಿದ್ದವು. ಈ ಮೇರೆ ಮೀರಿದ ಬರಹಗಳನ್ನು ಓದಿ ಮುಗಿಸಿದೆ, ಗ್ರಂಥಕಾರನ (ನನ್ನ) ಊಹಾಪ್ರಪಂಚ ಎಷ್ಟರಮಟ್ಟಿಗೆ ಹಬ್ಬಿತೆಂಬುದನ್ನು ವಾಚಕರೇ ಯೋಚಿಸಬೇಕು. ಈ ಬೃಹತ್ ಕಾದಂಬರಿಯನ್ನು ಮೌಲಾನಾ ಪೈಜಿಯೆಂಬ ಕವಿ ಫಾರಸೀ ಭಾಷೆಯಲ್ಲಿ ಅಕ್ಬರ್ ಚಕ್ರವರ್ತಿಗಾಗಿ ಬರೆದನೆಂದೂ ಹೇಳುತ್ತಾರೆ. ಈ ಬಗ್ಗೆ ಸತ್ಯವೆಷ್ಟೋ ತಿಳಿಯದು. ಬೃಹತ್ ಕಾದಂಬರಿ ವಿಸ್ತಾರವಾದ ಯಥಾರ್ಥವಾದ ವಿಶ್ವಕೋಶವೇ ಸರಿ. ಈ ಬೃಹತ್ ಕಥಾ ವಿಸ್ತಾರವನ್ನು ಯಾರಾದರೂ ಬರೆಯಲು ಕೂತರೂ ಸಹ, ತಮ್ಮ ಜೀವಿತ ಕಾಲದಲ್ಲಿ ಮುಗಿಸಲಾಗುತ್ತಿರಲಿಲ್ಲ. ಈ ಬೃಹತ್ ಕಾದಂಬರಿಯನ್ನು ಓದಿ ಮುಗಿಸಬೇಕೆಂದಿದ್ದ ಕಾಲದಲ್ಲಿ, ನನ್ನ ಬಂಧುಗಳೊಬ್ಬರು ಆಗಾಗ್ಗೆ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ಅವರು ಪ್ರಾಯಭರಿತರಾಗಿದ್ದರೂ ಮದುವೆಮಾಡಿಕೊಂಡಿರಲಿಲ್ಲ. ಭೂಮಿಕಾಣಿ ಅವರಿಗಿದ್ದಿತು. ಮನೆ ಬೆಳಗಲು ಗೃಹಿಣಿ ಮಾತ್ರ ಅವರಿಗೆ ಇರಲಿಲ್ಲ. ಈ ಲೋಪದಿಂದಲೋ ಏನೋ ಅವರಿಗೆ ತಮ್ಮ ಆಸ್ತಿಪಾಸ್ತಿಗಳ ಮೇಲೆ ಒಲವಿರಲಿಲ್ಲ. ತಮ್ಮ ಬಂಧುಗಳ ಪೈಕಿ ಯಾರಾದರೂ ಹೆಣ್ಣುಕೊಟ್ಟು, ತಮಗೆ ಮದುವೆಮಾಡಿಯಾರೆಂಬ ಆಶೆಪಟ್ಟಿದ್ದರು. ಈ ಶೋಧನಾಕಾರ್ಯಕ್ಕೆ ನೂರು ಇನ್ನೂರು ರೂಪಾಯಿ ಖರ್ಚುಮಾಡಲು ಅವರು ಸಿದ್ಧರಾಗಿದ್ದರು. ಇವರು ನನಗೆ ಚಿಕ್ಕಪ್ಪನಾಗಬೇಕಿತ್ತು. ದೃಢಕಾಯರಾಗಿ, ಅಗಲವಾದ ಮೀಸೆ ಹೊತ್ತವರಾಗಿ, ಮಾಸಲಬಣ್ಣದ ಮುಖಛಾಯೆಯಿಂದಿದ್ದ ಇವರಿಗೆ, ಮದುವೆಯಾಗದೆ ನಿಂತುದು ವಿಸ್ಮಯಕರವಾದ

ವಿಷಯುವೇ! ಚಿಕ್ಕಪ್ಪನವರಿಗೆ ಭಂಗಿ ಸೇದುವ ಚಟವಿದ್ದುದರಿಂದ ಸದಾ ಕಣ್ಣು ಕೆಂಡದಂತೆ ಕೆಂಪಾಗಿರುತ್ತಿದ್ದವು. ಇವರ ಧಾರ್ಮಿಕಶ್ರದ್ಧೆ ಒಂದು ಮಾದರಿಯಾಗಿತ್ತು. ಶಿವಾರಾಧನೆ, ಅಭಿಷೇಕ, ಸ್ನಾನ [illegible] ತ್ಯಾಗವನ್ನು ತಪ್ಪದೆ ನಡೆಸಿಕೊಂಡು ಬರುತ್ತಿದ್ದರು.

ಮದುವೆಯಾಗದೆ ಉಳಿದ ಹಲವರು ಹೇಗೆ ವರ್ತಿಸುವರೋ ಹಾಗೆಯೇ ಇವರೂ ವರ್ತಿಸಿಬಿಟ್ಟರು. ಚಮ್ಮಾರ ಹೆಣ್ಣಿನ ಕುಡಿನೋಟಕ್ಕೆ ಕ್ರಮೇಣ ಬಲಿಯಾಗಿಬಿಟ್ಟರು. ಚಿಕ್ಕಪ್ಪನವರ ಮನೆಯಲ್ಲಿ ಗೋವುಗಳನ್ನು ಮತ್ತು ಇತರ ಚಿಲ್ಲರೆ ಕೆಲಸಗಳನ್ನು ನೋಡಿಕೊಳ್ಳುತ್ತಾ ಒಬ್ಬಳು ಚಮ್ಮಾರ ಯುವತಿ ಇದ್ದಳು. ಸುಂದರವಾಗಿ, ಆಕರ್ಷಣೀಯಳಾಗಿ, ಗೆಲವಾಗಿದ್ದುದರಿಂದ ಈ ಹೆಣ್ಣು ಚಿಕ್ಕಪ್ಪನವರಿಗೆ ಸುರಹೊನ್ನೆಯಾಗಿ ಕಾಣಿಸಿಕೊಂಡಳು. ಪ್ರೇಮಭರದಲ್ಲಿ, ವೈವಾಹಿಕ ಜೀವನದ ಸಂಪತ್ತು ಕಾಣುವ ಕುತೂಹಲದಲ್ಲಿದ್ದ ಚಿಕ್ಕಪ್ಪನವರು, ಚಮ್ಮಾರ ಹೆಣ್ಣಿಗೆ ಹೆಚ್ಚು ಹೆಚ್ಚು ಹಣ ಕೊಡಲಾರಂಭಿಸಿದರು. ಇದೆಲ್ಲವೂ ಆಕರ್ಷಣೆಮಾಡಿ ಕೊಳ್ಳಲು ಹೂಡಿದ ಆಟವೆಂದು ಚತುರೆಯಾದ ಆ ಹೆಣ್ಣು ಬಹು ಬೇಗ ಗ್ರಹಿಸಿಕೊಂಡಳು. ಒಲವು, ಬೆಡಗು ವೃದ್ಧಿಯಾಗಲೆಂದೋ, ತನ್ನ ಶೋಭಾರಾಶಿ ಬೆಳಗಲೆಂದೋ, ಹೆಣ್ಣು ತಲ್ಲೀನಳಾಗಿದ್ದಾಗ; ಮನೆಯ ಇತರ ಕೆಲಸಗಳು ನಡೆಯದೆ ಉಳಿದುಬಿಟ್ಟವು. ಮನೆಯ ಹತ್ತಿರ, ಚಿಕ್ಕಪ್ಪನವರ ಬಳಿ ಮುಂಜಾನೆಯೋ ಅಥವಾ ಸಂಜೆಯೋ ಒಂದು ಭಾರಿ ಕಟಾಕ್ಷ ಬೀರಿ, ಕಣ್ಣು ಕಣ್ಣು ತಪ್ಪಿಸಿ ಮರೆಯಾಗುವ ಆಟ ಸಹಾ ನಡೆಯಿತು. ಈ ಪ್ರಣಯ ವ್ಯಾಪಾರ ನಡೆಯುತ್ತಿದ್ದಾಗ, ಹೆಣ್ಣು ಪೂರಾ ಶೃಂಗಾರ ಬೆಳವಣಿಗೆಯಲ್ಲಿದ್ದು ಕೆಲಸವನ್ನು ಅಲಕ್ಷ್ಯಮಾಡಿಬಿಟ್ಟಾಗ, ಚಿಕ್ಕಪ್ಪನವರೇ ಗೋವುಗಳ ರಕ್ಷಣೆ ನೋಡಿಕೊಳ್ಳಬೇಕಾಯಿತು. ಹೃದಯದಲ್ಲಿ ಹುಟ್ಟಿದ ಪ್ರೇಮಾಂಕುರ ಬೆಳೆಯುತ್ತಲಿದ್ದಿತು. ಹೋಲಿ ಹಬ್ಬದಲ್ಲಿ, ಮನೆಯ ಕೆಲಸಗಾರರಿಗೆ ಬಹುಮಾನರೂಪವಾಗಿ ಏನಾದರೂ ಕೊಡುವ ಪದ್ಧತಿಯಿತ್ತು. ಆ ವರ್ಷ ಚಮ್ಮಾರ ಹೆಣ್ಣಿಗೆ ಒಂದು ಸೊಗಸಾದ ಸೀರೆಯನ್ನು ಚಿಕ್ಕಪ್ಪನವರು ಕಳುಹಿಸಿಕೊಟ್ಟರು. ಈ ಸೀರೆಯ ಬೆಲೆ ಪ್ರತಿ ವರ್ಷವೂ ಕೊಡುತ್ತಿದ್ದ ಬಹುಮಾನದ ಮೂರು ನಾಲ್ಮಡಿ

ವಸೌಲ್ಯಕ್ಕಿಂತ ಹೆಚ್ಚಿನದಾಗಿದ್ದಿತು. ಈ ವಿಶೇಷ ಬಹುಮಾನ ಬಲವಸೆಯನ್ನು ಸೆಳೆದುಕೊಳ್ಳಲು ಕೊಟ್ಟ ಹಣವಾಯಿತೆನ್ನಬಹುದು. ಈ ವಿಚಾರ ಮುಂದುವರಿದು, ಚಮ್ಮಾರ ಹೆಣ್ಣು ಕೊನೆಗೆ ಚಿಕ್ಕಪ್ಪನವರ ಪ್ರೇಯಸಿಯಾಗಿ ಬಿಟ್ಟಳು.

ಒಂದು ಸಂಜೆ ಚಮ್ಮಾರ ಕುಲದವರು, ಹಳ್ಳಿಯಲ್ಲಿ ಪಂಚಾಯಿತಿ ಕೂಡುವ ಸ್ಥಳದಲ್ಲಿ ಸಭೆ ಸೇರಿದರು. ಈ ಜನಗಳಿಗೆ, ಚಿಕ್ಕಪ್ಪನವರನ್ನು ಕಂಡರೆ ಭಯವಿರಲಿಲ್ಲ. ಅವರ ಸಿರಿ, ಭೂಮಿ, ಬೆದರಿಕೆಗೆ ಯಾರೂ ಬೆದರುತ್ತಿರಲಿಲ್ಲ. ಚಿಕ್ಕಪ್ಪ ಮತ್ತು ಅವರ ತಂದೆ (ಹೆಸರಾದ ಅನೀತಿವಂತರು) ಇವರ ಗುಣವಿಮರ್ಶೆ ಮಾಡಿಕೊಳ್ಳುತ್ತಾ, ಕೆಲಸಗಾರರ ಹೆಂಡಂದಿರು ಮತ್ತು ಹೆಣ್ಣುಮಕ್ಕಳ ಕಡೆಗೆ ಪಾಪದೃಷ್ಟಿಯಿಂದ ಚಿಕ್ಕಪ್ಪ ನೋಡುತ್ತಿದ್ದುದನ್ನು ತಮ್ಮೊಳಗೆ ಮಾತನಾಡಿಕೊಳ್ಳುತ್ತಿದ್ದರು. ಅವರಿಗೆ, ಕಾಮುಕನಾದ ನನ್ನ ಚಿಕ್ಕಪ್ಪನನ್ನು ತಡೆಯಲು ಒಂದೂ ಉಪಾಯ ತೋರಲಿಲ್ಲ. ಹದಗೆಟ್ಟುಹೋಗಿ ಮುಂದೆ ವಿಪರೀತ ತೊಂದರೆಯಾಗುವುದೆಂದು ಭೀತಿಪಟ್ಟ ಈ ಜನರಿಗೆ, ಹಾದಿ ಸಿಕ್ಕಿತಂತೆ. ಚಿಕ್ಕಪ್ಪ, ಎಂದೆಂದಿಗೂ ಕೆಟ್ಟ ವರ್ತನೆಗೆ ಕೈಹಾಕದಂತೆ ಬುದ್ಧಿ ಕಲಿಸಲು ಚಮ್ಮಾರರು ತೀರ್ಮಾನಿಸಿದರು. ಕೇಡು ತಪ್ಪಿಸಲು, ಕೊಡೆತದಿಂದ ಪೆಟ್ಟು ಹಾಕುವುದೊಂದೇ ಉಪಾಯ. ಈ ಉಪಾಯದಿಂದ ಕೆಲಮಟ್ಟಿಗೆ ಉತ್ತಮ ಪರಿಣಾಮವಾಗುವುದು. ಕಲಂಕ ತೊಡೆದು ಹಾಕಿ ಗೌರವ ಕಾಪಾಡಿಕೊಳ್ಳಲು, ರಕ್ತಪಾತ ಮಾಡುವುದು ಧರ್ಮವೆಂದು ಈ ಜನರು ತಿಳಿದಂತಿತ್ತು.

ಮರುದಿನ ಸಂಜೆ ಚಂಪಾ, ಮನೆಗೆಲಸದ ಹೆಣ್ಣು ಮನೆಯೊಳಗೆ ಬಂದಕೂಡಲೇ ಚಿಕ್ಕಪ್ಪ ಒಳಕೋಣೆಯ ಬಾಗಿಲನ್ನು ಹಾಕಿಬಿಟ್ಟರು.

ಈ ಸಮಯವನ್ನೇ ನಿರೀಕ್ಷಿಸುತ್ತಿದ್ದ ಚಮ್ಮಾರರು, ಹೊರಬಾಗಿಲನ್ನು ಬಲವಾಗಿ ತಳ್ಳಲಾರಂಭಿಸಿ ತೆಗೆಯುವಂತೆ ಒತ್ತಾಯಮಾಡಿದರು. ಈ ವಿಷಯ ತಿಳಿಯದೆ, ತನ್ನ ಬಾಡಿಗೆದಾರರ ಪೈಕಿ ಯಾರಾದರೂ ಕಾಣಲು ಬಂದಿರುವರೆಂದು, ಬಾಗಿಲುಹಾಕಿರುವುದನ್ನು ತಿಳಿದು ಅವರು ಹೊರಟು ಹೋಗುವರೆಂದು ಚಿಕ್ಕಪ್ಪ ಊಹಿಸಿದರು. ಗುಂಪು ಸೇರಿ ಗಲಭೆಮಾಡು

ತ್ತಿದ್ದುದನ್ನು ಕೇಳಿದಾಗ ದಿಕ್ಕು ತೋರದಂತಾದರು. ಕೀಲಿಯ ಸಂದಿನಿಂದ ಗಲಭೆಮಾಡುತ್ತಿದ್ದವರನ್ನು ನೋಡಲು, ಸುಮಾರು ಇಪ್ಪತ್ತೈದು ಮಂದಿ ಚಮ್ಮಾರರು ಕೈಯಲ್ಲಿ ಕಟ್ಟಿಗೆ ಹಿಡಿದು, ಕೂಗುತ್ತಾ ಬಾಗಿಲನ್ನು ಒಡೆದು ಒಳಗೆ ಪ್ರವೇಶಿಸಿಬರಲು ಯತ್ನಿಸುತ್ತಿರುವಂತೆ ಅವರಿಗೆ ಕಂಡಿತು. ಚಿಕ್ಕಪ್ಪನವರಿಗೆ ಯಾವ ಉಪಾಯವೂ ತೋರಲಿಲ್ಲ, ಚಂಪಾಳನ್ನು ಬಚ್ಚಿಡಲೂ ಸಾಧ್ಯವಾಗಲಿಲ್ಲ. ಅವರಿಗೆ ತಾವು ಎಂತಹ ಕಠಿಣ ಪರಿಸ್ಥಿತಿಯಲ್ಲಿ ಸಿಕ್ಕಿಬಿದ್ದಿರುವರೆಂದು ಚೆನ್ನಾಗಿ ತಿಳಿಯಿತು. ತಾವು ಮೆಚ್ಚಿದ ಒಲುವೆಯಿಂದ ಇಂತಹ ಕಷ್ಟ ಬರುವುದೆಂದು ಅವರು ನೆಚ್ಚಿರಲಿಲ್ಲ. ಹೆಣ್ಣು ಹೀಗೆ ಕಷ್ಟಕ್ಕೆ ಗುರಿಮಾಡುವಳೆಂದು ತಿಳಿದಿದ್ದರೆ, ಜಾಗರೂಕನಾಗಿರುತ್ತಿದ್ದೆನಲ್ಲಾ! ಎಂದು ಬಹಳ ಯೋಚಿಸಿದರು. ಅವರ ಒಲವೆ ಚಂಪಾ, ಕೆಣಕಿ ಹಾಸ್ಯಮಾಡುತ್ತಾ "ನಿಮಗೆ ಹೇಗೂ ನಷ್ಟವಾಗದು. ನನ್ನ ಗೌರವ ಲೋಪವಾಗುವುದು ಖಂಡಿತ. ನನ್ನನ್ನು ಜೀವಸಹಿತ ಬಿಟ್ಟುಗೊಡುವುದಿಲ್ಲ. ನಿಮ್ಮನ್ನು ಮೊದಲೇ ಕೈಮುಗಿದು ಬೇಡಿಕೊಂಡು, ಬಾಗಿಲು ಹಾಕಬೇಡಿ ಎಂದು ಕೇಳಿಕೊಂಡೆ. ನೀವು ಪ್ರವೃತ್ತರಾಗಿ ನನ್ನ ಬೇಡಿಕೆಯನ್ನು ತಳ್ಳಿಹಾಕಿದಿರಿ. ಇದರಿಂದ ನಿಮಗೆ ತಕ್ಕ ಪ್ರತಿಫಲ ಸಿಗುವುದಲ್ಲದೆ, ನಿಮ್ಮ ಮೋರೆಗೆ ನೀವೇ ಕಪ್ಪುಬಳಿದುಕೊಳ್ಳುವಿರಿ" ಎಂದಳು.

ಪಾಪ! ಚಿಕ್ಕಪ್ಪ ಇಂತಹ ಕಠಿಣ ಸನ್ನಿವೇಶದಲ್ಲಿ ಎಂದೂ ಸಿಕ್ಕಿಕೊಂಡಿರಲಿಲ್ಲ. ಯಾರಾದರೂ ಬೇರೆಯವರಿಗೆ, ಈ ಕಠಿಣ ಪರಿಸ್ಥಿತಿಯಿಂದ ಪಾರಾಗಲು ನೂರಾರು ಸಾಧನೋಪಾಯಗಳು ಸಿಗುತ್ತಿದ್ದವು. ಚಿಕ್ಕಪ್ಪನಿಗೆ ಈ ಧೋರಣೆ ಎಲ್ಲಿಂದ ಬರಬೇಕು? ಮನೆಯ ನಡು ಅಂಗಳದಲ್ಲಿ ನಿಂತು ಅವರು ಮಂತ್ರ ಪಠಿಸಲಾರಂಭಿಸಿದರು.

ಬಾಗಿಲ ಬಡಿತ ಮಿತಿಮೀರಿತು. ಇಡೀ ಹಳ್ಳಿಯ ಜನರೆಲ್ಲಾ ಅಲ್ಲಿ ಸೇರಿದಂತೆ ಕಂಡಿತು. ಬ್ರಹ್ಮ, ಠಾಕೂರ, ಕಾಯಸ್ತ ಜಾತಿಯ ಜನರು ಇಲ್ಲಿ ಏನು ವಿನೋದ ನಡೆಯುವುದಿದೆಯೋ ನೋಡಿ, ಪಾಪಿಗೆ ಪಾಠ ಕಲಿಸಲು ಸೇರಿದರು. ಒಂದು ಗಂಡು-ಹೆಣ್ಣು ನಾಲ್ಕುಗೋಡೆಯ ಮರೆಯಲ್ಲಿ ಅಡಗಿಕೊಂಡರೆ ಅದರಲ್ಲಿ ಸೋಜಿಗ ವಿಚಾರವೇನಿದೆ? ಮನುಜ ಎಷ್ಟೇ ವಿನಯಶೀಲನಿರಲಿ, ಉಚ್ಚಮನೆತನದವನಿರಲಿ, ಅಂತಹವನು ಹೇಯಕಾರ್ಯ ನಡೆಸಿದರೆ ಸಾರ್ವಜನಿಕರು ಹೇಗೆ ಕ್ಷಮಿಸಿಯಾರು?

ಹಳ್ಳಿಯ ಜನರು ಮರಗೆಲಸದವನಿಗೆ ಹೇಳಿ ಕಳುಹಿಸಿ, ಬಾಗಿಲನ್ನು ಮುರಿಸಿ, ಅಡಗಿದ್ದ ಪಾಪಿಯನ್ನು ಹುಡುಕತೊಡಗಿದರು. ಚಿಕ್ಕಪ್ಪ ಗೋಗ್ರಾಸ ತುಂಬಿದ ಕೋಣೆಯಲ್ಲಿ ಜನರ ಕೈಗೆ ಸಿಕ್ಕಿಬಿಟ್ಟ. ಚಂಪಾ ಮನೆಯಂಗಳದಲ್ಲಿ ನಿಂತು ಅಳುತ್ತಿದ್ದಳು. ಬಾಗಿಲು ತೆರೆದೊಡನೆಯೇ ಅವಳು ಭಯದಿಂದ ಓಡಿಹೋದಳು. ಯಾರೂ ಅವಳನ್ನು ಅಟ್ಟಿ ಹಿಂಬಾಲಿಸಿ ಹೋಗಲಿಲ್ಲ, ಹಿಂಸೆ ಪಡಿಸಲಿಲ್ಲ. ಚಿಕ್ಕಪ್ಪ ಎಲ್ಲಿ ಹೋದಾರು? ಹಳ್ಳಿಯ ಜನರು ಅಂಗಳದಲ್ಲಿ ತಮಗೆ ಸುಲಭವಾಗಿ ದೊರಕಿದ ಕಟ್ಟಿಗೆ, ಜೋಡು ಮತ್ತು ಯಾವ ಯಾವ ಸಾಧನದಿಂದಲೋ ಚಿಕ್ಕಪ್ಪನನ್ನು ಚೆನ್ನಾಗಿ ಬಡಿದು ಥಳಿಸಿಬಿಟ್ಟರು. ಜ್ಞಾನತಪ್ಪಿ ಅವರು ಬಿದ್ದುಬಿಟ್ಟಮೇಲೆ ಸತ್ತುಹೋದರೆಂದು ತಿಳಿದು ಹಳ್ಳಿಯವರು ಹೊರಟುಹೋದರು. ಚಿಕ್ಕಪ್ಪ ಒಂದು ವೇಳೆ ಬದುಕಿದರೂ, ಹೆಚ್ಚುಕಾಲ ಹಳ್ಳಿಯಲ್ಲಿ ಜೀವಿಸಿರಲಾರರೆಂದೂ, ಅವರ ಜಮೀನು ಬೇರೊಬ್ಬರ ಕೈವಶವಾಗುವುದೆಂದೂ ಜನ ಮಾತನಾಡಿಕೊಳ್ಳುತ್ತಾ ಹೊರಟುಹೋದರು.

ಈ ಘಟನೆಯ ಮಹತ್ವ ನಮಗೆ ಹೇಗೋ ಮುಟ್ಟಿತು. ಆಗ ನನಗೆ ಬಹಳ ಆನಂದವಾಯಿತು. ಚಿಕ್ಕಪ್ಪನಿಗೆ ಹಳ್ಳಿಯವರಿಂದ ದೊರೆತ ಸನ್ಮಾನ ಚಿತ್ರವನ್ನು ನಾನು ನೆನೆಸಿಕೊಂಡು ನಲಿದಾಡಿದೆ.

ಒಂದು ತಿಂಗಳ ಕಾಲ ಚಿಕ್ಕಪ್ಪ ಎದ್ದೇಳಲು ವಿಶ್ರಾಂತಿ ತೆಗೆದುಕೊಂಡು, ಕಾಕಂಬಿ ಮತ್ತು ಹುಣಸೆಗೊಜ್ಜು ಮಿಶ್ರಮಾಡಿದ ಪಾನಕ ಕುಡಿಯುತ್ತಾ ಸುಧಾರಿಸಿಕೊಂಡರು. ಎದ್ದು ಓಡಾಡುವ ಮಟ್ಟಿಗಾದಮೇಲೆ ನಮ್ಮ ಊರಿಗೆ ಒಂದು ತಡವೆ ಬಂದರು. ಅವರು ಬಂದುದು, ನ್ಯಾಯಸ್ಥಾನದಲ್ಲಿ ಹಳ್ಳಿಯವರು ಅವರಮೇಲೆ ಕೈಮಾಡಿ ಹಿಂಸಿಸಿದರೆಂದು ಫಿರ್ಯಾದುಮಾಡಲು ಎಂದು, ನನಗೆ ತಿಳಿಯಿತು.

ಚಿಕ್ಕಪ್ಪ ತಾನು ನಡೆಸಿದ ಅಕೃತ್ಯ ನೆನೆದು ಪಶ್ಚಾತ್ತಾಪಪಟ್ಟಿದ್ದರೆ, ನಿಜವಾಗಿ ನಾನು ಕನಿಕರ ಪಡುತ್ತಿದ್ದೆ. ಅವರು ಹಾಗೆಂದಿಗೂ ನೆನೆಯಲಿಲ್ಲ. ವಿಷಾದ ಸೂಚಿಸಲೂ ಇಲ್ಲ ಮೊದಲಿನಂತೆ ರೊಚ್ಚಿನ ಮನುಷ್ಯರಂತೆಯೇ ಇದ್ದರು. ನನಗೂ ಇವರಿಂದ ಪೀಡೆ ತಪ್ಪಲಿಲ್ಲ. ಕಾದಂಬರಿಗಳನ್ನು ಓದುತ್ತಾ ಆಟದ ಮೇಲೆ ಹೆಚ್ಚು ಗಮನವಿಡುತ್ತಿದ್ದ ನನ್ನನ್ನು ಬೆದರಿಸಿ, ತಂದೆಯವರೊಂದಿಗೆ ಆರೋಪಣೆ ಮಾಡುವುದಾಗಿ ಹುಬ್ಬುಹಾರಿಸಿದರು.

ಅವರ ಹುಬ್ಬಿನ ಕಣ್ಣಿಗೆ ಹೆದರುತ್ತಿದ್ದೆನಾದರೂ ನನ್ನಲ್ಲಿ ಅವರನ್ನು ಅಲ್ಲಗೆಳೆಯಲು, ಅಪಮಾನಗೊಳಿಸಲು, ಯಥಾರ್ಥವಾದ ಗುಣಚರಿತ್ರೆಯ ವಿಷಯಗಳಿದ್ದವು. ಬರಹಗಾರನಾದ ನನಗೆ ಕಥಾರಚನೆಗೆ ಯೋಗ್ಯವಾದ ವಸ್ತು ದೊರಕಿತು. ಚಿಕ್ಕಪ್ಪನ ಗುಣನಿರೂಪಣೆಯನ್ನು ತೆಗೆದುಕೊಂಡು, ನಾಟಕವೊಂದನ್ನು ರಚಿಸಿ, ನನ್ನ ಸ್ನೇಹಿತರ ಮುಂದೆ ಓದಿ ತೋರಿಸಿದೆ. ಕೇಳಿದವರೆಲ್ಲಾ ತುಂಬಾ ಸಂತೋಷಿಸಿದರು. ಇದರಿಂದ ಪ್ರೋತ್ಸಾಹ ಸಿಕ್ಕಿದಂತಾಯಿತು. ಈ ನಾಟಕ ಕೃತಿಯನ್ನು ಸ್ಪಷ್ಟವಾಗಿ ಬರೆದು, ಚಿಕ್ಕಪ್ಪ ಮಲಗುತ್ತಿದ್ದ ಹಾಸಿಗೆ ದಿಂಬಿನ ಕೆಳಗಿಟ್ಟು, ನಾನು ಎಂದಿನಂತೆ ಶಾಲೆಗೆ ಹೊರಟುಬಿಟ್ಟೆ. ನನ್ನ ಈ ವರ್ತನೆಯಲ್ಲಿ ಭಯವೂ ಕುತೂಹಲವೂ ಏಕಕಾಲದಲ್ಲಿ ಕಂಡವು. ಚಿಕ್ಕಪ್ಪ ಓದಿ ಏನು ಹೇಳುವರೋ ಎಂದು ಕುತೂಹಲ ನನ್ನನ್ನು ಬಾಧಿಸಿತು. ಆ ದಿನ ನನಗೆ ಪುಸ್ತಕದ ಮೇಲೆ ಗಮನವಿರಲಿಲ್ಲ. ಮನೆಯಲ್ಲಿ ನಡೆಯುವ ಚಮತ್ಕಾರಿಕ ನಾಟಕದ ಕಡೆ ಒಲವಿದ್ದಿತು. ಶಾಲೆಯಿಂದ ಮನೆಯ ಬಳಿಗೆ ಬಂದೆ. ಮನೆಯ ಮುಂದೆ ಸ್ವಲ್ಪ ಹೊತ್ತು ನಿಂತೆ. ಚಿಕ್ಕಪ್ಪ ಬಲವಾಗಿ ನನ್ನನ್ನು ಹೊಡೆಯಬಹುದೆಂದು ಹೆದರಿದೆ. ಆಗ ನನಗೆ ಸ್ಪಷ್ಟವಾಗಿ ತೋರಿತೇನೆಂದರೆ—ಅವರು ನನ್ನ ಕೆನ್ನೆಗೆ ಒಂದು ಏಟು ಹೊಡೆದಾರು. ಸುಮ್ಮನೆ ಕಾರಣವಿಲ್ಲದೆ, ಇತರ ಮಂಕುಹುಡುಗರಂತೆ ಏಟು ತಿನ್ನುವ ಪ್ರಾಣಿ ನಾನಲ್ಲವೆಂದು ಧೈರ್ಯದಿಂದ ಮನೆಯೊಳಗೆ ಕಾಲಿಟ್ಟೆ.

ವಿರಾಮವಾಗಿ ಮಲಗಿ, ನಿದ್ರಿಸುತ್ತಿದ್ದ ಚಿಕ್ಕಪ್ಪ ಹಾಸಿಗೆಯ ಮೇಲಿರಲಿಲ್ಲ. ಮನೆಯೊಳಗಿದ್ದರೆ? ಇಲ್ಲ. ಕೋಣೆಯಲ್ಲೆಲ್ಲಾ ಹುಡುಕಾಡಿದೆ. ಎಲ್ಲಿಯೂ ಸಿಗಲಿಲ್ಲ. ಚಿಕ್ಕಪ್ಪನ ಉಡುಗೆ ವಸ್ತ್ರಗಳು, ಮೋಜು ಸಹಾ ಕಾಣಿಸಲಿಲ್ಲ. ಮನೆಯಲ್ಲಿ, ಚಿಕ್ಕಪ್ಪ ಎಲ್ಲಿರುವರೆಂದು ಕೇಳಿದೆ. ಚಿಕ್ಕಪ್ಪ, ಹಳ್ಳಿಯಲ್ಲಿ ಅತ್ಯಾತುರದ ಕೆಲಸ ಬಿದ್ದುದರಿಂದ ಊಟವನ್ನು ಸಹಾ ಮಾಡದೆ ಪ್ರಯಾಣಮಾಡಿಬಿಟ್ಟರೆಂದು ತಿಳಿಸಿದರು.

ನನ್ನ ಕೃತಿ, ಮೊದಲನೆಯ ಕೃತಿಯ ಶೋಧನೆ ಪೂರಾ ಮಾಡಿದೆ. ಎಲ್ಲಿಯೂ ಅದು ನನಗೆ ಸಿಗಲಿಲ್ಲ. ಚಿಕ್ಕಪ್ಪ ಅದನ್ನು ಅಗ್ನಿಗೆ ಆಹುತಿಯಾಗಿ ಕೊಟ್ಟುಬಿಟ್ಟರೋ ಅಥವಾ ತಮ್ಮೊಂದಿಗೆ ಅದನ್ನು ಸ್ವರ್ಗಕ್ಕೆ ಒಯ್ದರೋ ತಿಳಿಯಲಾರದವನಾದೆ.

# ಡೋರಾ

ಕ್ಷಯದ ಆಸ್ಪತ್ರೆಯಲ್ಲಿ ಎಂಟು ಜನ ರೋಗಿಗಳಿದ್ದರು. ಕ್ಷಯರೋಗಿಗಳು ಹೆಚ್ಚು ಚಾಂಚಲ್ಯಚಿತ್ತದವರು. ಈ ರೋಗಿಗಳ ದೇಹದ ಉಷ್ಣ ಸ್ವಲ್ಪ ಹೆಚ್ಚುಕಡಿಮೆಯಾಗುತ್ತಲಿರುತ್ತದೆ. ಕ್ಷಯಕ್ರಿಮಿಗಳಿಗೆ ಒಂದು ತರಹೆಯ ಅಪೂರ್ವಲಕ್ಷಣವಿದೆ. ಈ ಕ್ರಿಮಿಗಳು ರೋಗಿಯನ್ನು ನಿಧಾನವಾಗಿ ಕೊಲ್ಲುತ್ತಿರುತ್ತದೆ. ಅದೇ ವೇಳೆಯಲ್ಲಿ ರೋಗಿ ಇನ್ನೂ ಬದುಕಿರಬೇಕೆಂಬ ಅವನ ಆಸೆಯನ್ನು ಹೆಚ್ಚು ಮಾಡುತ್ತಿರುತ್ತದೆ. ಕ್ರಿಮಿಗಳಿಂದ ನಡೆಯುವ ಮೋಸದ ಆಟಕ್ಕೆ ಸಿಕ್ಕಿ, ರೋಗಿಗಳು ಭಯಭ್ರಾಂತರಾಗಿ ಕರಗುತ್ತಲಿರುತ್ತಾರೆ. ಕ್ಷಯರೋಗಿ ಎಷ್ಟೇ ಧೈರ್ಯಸ್ಥನಿರಲಿ, ಅವನು ಅಂತ್ಯದಲ್ಲಿ ನಿರಾಶನಾಗಿ ತಾನು ಉಳಿಯುವುದು ಅಸಂಭವವೆಂದು ತಿಳಿದುಕೊಳ್ಳುತ್ತಾನೆ. ಈ ಎಲ್ಲಾ ಆಶಾನಿರಾಶೆಯ ನಾಟಕದ ಮುಕ್ತಾಯ ಕ್ಷಯಕ್ರಿಮಿಗಳಿಂದಾಗುವುದು ಖಂಡಿತ.

ಕ್ರಿಮಿಯಾ (ರಷ್ಯ) ಕ್ಷಯದ ಆಸ್ಪತ್ರೆಯಲ್ಲಿ ನಡೆದ ಕಥೆಯನ್ನು ನಾನು ಹೇಳುತ್ತಲಿದ್ದೇನೆ. ಅಲ್ಲಿ ಎಂಟು ಜನ ರೋಗಿಗಳಿದ್ದರು. ಈ ರೋಗಿಗಳನ್ನು ನೋಡಿಕೊಳ್ಳಲು ಡೋರಾ ಎಂಬ ಹೆಂಗಸಿದ್ದಳು. ಅವಳ ಪೂರ್ವ ವಿಚಾರ ತಿಳಿದಿರಲಿಲ್ಲ. ಒಂದೊಂದು ಸಾರಿ ಅವಳು, ತಾನು ಇಸ್ಟೋನಿಯಾ ಕಡೆಯಿಂದಲೋ ಅಥವಾ ಕೆರಿಲಿಯಾ ಕಡೆಯಿಂದಲೋ ಬಂದವಳೆಂದು ಹೇಳಿಕೊಳ್ಳುತ್ತಿದ್ದಳು. ಅವಳ ನಡತೆ, ಉಚ್ಚಾರ ಪರಿಶೀಲಿಸಿದರೆ; ಟಾರೈಡ್ ಕಡೆಯಿಂದ ಬಂದವಳೆಂದು ಗೊತ್ತಾಗುತ್ತಿತ್ತು. ಎಲ್ಲಿಂದ ಬಂದಳೋ ಹಾಗಿರಲಿ, ಅವಳು ಎತ್ತರವಾದ ದಪ್ಪನೆಯ ಗಡಸು ಹೆಂಗಸು. ಚಲನೆ ತೀವ್ರವಾಗಿದ್ದು, ಒಳ್ಳೆಯ ಕೆಲಸಗಾರಳಂತೆ ಆಸ್ಪತ್ರೆಯಲ್ಲಿ ಓಡಾಡುತ್ತಿದ್ದಳು.

ಡೋರಾ ವಿದ್ಯಾವಂತಳಲ್ಲ, ಆದರೆ ಅತಿ ದಡ್ಡಳೆನಿಸಿಕೊಂಡಿದ್ದಳು. ರೋಗಿಗಳು ಇವಳನ್ನು "ಡೋರಾ" ಎಂದು ಕರೆಯದೆ, "ಡೂರಾ" ಎಂದು ಕರೆಯುತ್ತಾ ಹಾಸ್ಯಮಾಡುತ್ತಿದ್ದರು. "ಡೂರಾ" ಎಂದರೆ, ರಷ್ಯಾ

ಭಾಷೆಯಲ್ಲಿ ಶುದ್ಧ ಹೆಡ್ಡಿ ಎಂದರ್ಥ. "ಹೆಡ್ಡಿ" ಎಂದು ಜನರು ಬೆಟ್ಟು ತೋರಿ ಕರೆದರೂ ಡೋರಾ ಕೋಪಗೊಳ್ಳುತ್ತಿರಲಿಲ್ಲ. ನಗುಮೊಗದಿಂದಲೇ ಅಡ್ಡಾಡುತ್ತಿದ್ದಳು. ಡೋರಳಿಗೆ ಮಿತಿಮೀರಿದ ಸಹನೆಯಿದ್ದಿತು. ಈ ದಡ್ಡಿಯೆನಿಸಿದ ಹೆಂಗಸಿನ ಹೃದಯದಲ್ಲಿ ಎಂತಹ ನಿರ್ಮಲವಾದ ಪ್ರೀತಿ ಯಿದ್ದಿತು, ಇವಳು ಎಂತಹ ಸ್ಥಿರಮನಸ್ಸಿನವಳು ಎನ್ನುವುದನ್ನು ಈ ಕಥೆ ಸ್ಪಷ್ಟಪಡಿಸುತ್ತದೆ.

ಬಡಕಲಾದ ರೋಗಿಗಳು ಹೆಜ್ಜೆಯಿಡಲಾರದೆ ತೆವಳಿಕೊಂಡು ಡೋರಾ ಹತ್ತಿರ ಬರುತ್ತಿದ್ದರು. ರೋಗಿಗಳನ್ನು ದಯೆಯಿಂದ ಕಾಣು ತ್ತಿದ್ದ ಡೋರಾ "ತೆವಳಿಕೊಂಡು ಬರಬೇಡಿ, ಹಾಗೆ ತೆವಳಿಕೊಂಡು ಬರು ವುದು ಕಷ್ಟದು" ಎಂದೂ, ರೋಗಿಗಳನ್ನು ಸರಿಸಿಬಿಡುತ್ತಿದ್ದಳು.

ಡೋರಾ ಅನೇಕರಿಗೆ ಪ್ರೀತಿಪಾತ್ರಳಾಗಿ ಕಂಡಿದ್ದಳು. ಅವಳ ಅತುಳ ಶಕ್ತಿ, ದಕ್ಷತೆ, ಸರಳನಡತೆ, ನಡೆವಳಿಕೆ ಇತರರಿಗೆ ತುಂಬಾ ಮೆಚ್ಚುಗೆ ಯಾಗಿತ್ತು. ಎಲ್ಲರೂ ಈ ಮುಗುದೆಯನ್ನು ಮದುವೆಯಾಗಲು ಮುಂಬರಿ ಯುತ್ತಿದ್ದರು. ತನ್ನನ್ನು ಜೀವಗಾತಿಯನ್ನಾಗಿ ಮಾಡಿಕೊಳ್ಳಲು ಬಯಸಿ ದಂತಹ ಜನರನ್ನು ಕಂಡು ಡೋರಾ ಮರದಂತೆ ಸೆಟೆದು ನಿಲ್ಲುತ್ತಿದ್ದಳು. ಸಿರಿವಂತ ತನ್ನ ಸಿರಿಯನ್ನು ಭದ್ರವಾಗಿ ಎಲ್ಲಿಡಬೇಕೆಂದು ತಿಳಿದುಕೊಳ್ಳು ತ್ತಾನೆ. ಚಲುವೆ ತನ್ನ ಮನಸ್ಸಿಗೊಪ್ಪಿದ ಪ್ರಿಯನನ್ನು ಜಾಣತನದಿಂದ ಆರಿಸಿಕೊಳ್ಳುತ್ತಾಳೆ. ಅತಿ ಹೆಡ್ಡಳಾದ ಡೋರಾ ಪ್ರೇಮಿಸಿದವರನ್ನು ತಿರಸ್ಕರಿಸಿ, ಕಾಲಮೀರಿದಮೇಲೆ ತನ್ನ ಹೆಡ್ಡತನವನ್ನು ನೆನೆದು ಹೇಗೆ ಗೋಳಾಡಿದಳೆಂಬುದನ್ನು ತಿಳಿಯೋಣ.

ಡೋರಾ ಯಾರನ್ನೂ ಅಪೇಕ್ಷಿಸದೆ, ಯಾವ ಚಾಪಲ್ಯಕ್ಕೂ ಬಲಿ ಯಾಗದೆ ದಡ್ಡತನದಿಂದಲೇ ಆಸ್ಪತ್ರೆಯಲ್ಲಿದ್ದಳು. ಚಳಿಗೆ ನಡುಗುತ್ತ, ಬೇಗೆಗೆ ಬಳಲುತ್ತ ಕ್ಷಯದ ಆಸ್ಪತ್ರೆಯಲ್ಲಿ ಕಾಲದೂಡುತ್ತಾ ನಿಂತಳು. ರಾತ್ರಿ ರೋಗಿಗಳನ್ನು ಮಲಗಿಸಿದಮೇಲೆ, ತನ್ನ ಕೆಂಪು ರೋಜಾಬಣ್ಣದ ಕೈವಸ್ತ್ರವನ್ನು ತಲೆಗೆ ಕಟ್ಟಿಕೊಂಡು, ಆಸ್ಪತ್ರೆಯ ಮಾಳಿಗೆಯಮೇಲೆ ನಿಂತು, ಆಕಾಶವನ್ನು ನೋಡುತ್ತಾ "ಕ್ರಿಸ್ತನೇ! ಜಗತ್‌ರಕ್ಷಕನೇ! ದೀನದಯಾಳುವೇ!" ಎಂದೆನ್ನುತ್ತಾ ಪ್ರಾರ್ಥಿಸುತ್ತಿದ್ದಳು.

ಕವಿತೆಯಮೇಲಾಗಲೀ ಪುಷ್ಪದಮೇಲಾಗಲೀ ಅವಳಿಗೆ ಒಲವಿದ್ದಂತೆ ಕಾಣುತ್ತಿರಲಿಲ್ಲ. ಮನುಷ್ಯರನ್ನು ಲೆಕ್ಕಿಸದೆಯಿದ್ದ ಡೋರಾ, ನಯವಸ್ತುಗಳನ್ನು ನೋಡಿ ಪ್ರೀತಿಸುವಳೇನು? ಒಮ್ಮೆ ಕ್ಷಯರೋಗ ಪೀಡಿತಳಾದ ಪಾದ್ರಿಯ ಹೆಂಡತಿ ಜ್ವರದ ತಾಪದಲ್ಲಿದ್ದು, ವಿಕಾರವಾಗಿ ನೀಲಾಕಾಶದ ಸೊಬಗನ್ನೂ, ಚಲುವಾದ ತಾರೆಯನ್ನೂ ನೆನೆಸಿ ಸ್ಮರಣೆ ಮಾಡಿದಾಗ, "ಆಕಾಶ......................ಅದು ಒಂದು ಸುರಳಿ ಬಿಚ್ಚಿದ ದೋಸೆ" ಎಂದು ಹೇಳಿ, ನರಳುತ್ತಿದ್ದ ಆ ಹೆಂಗಸಿಗೆ ಉತ್ಸಾಹಭಂಗ ಮಾಡಿದಳು.

ಒಂದು ದಿನ, ಎಂಟು ಜನವಿದ್ದ ಆಸ್ಪತ್ರೆಗೆ ಒಂಬತ್ತನೆಯ ರೋಗಿ ಬಂದು ಸೇರಿಕೊಂಡ. ಬಹಳ ಕಷ್ಟದಿಂದ ಉಸಿರೆಳೆಯುತ್ತಾ ಮಹಡಿಯ ಮೆಟ್ಟಲನ್ನು ಹತ್ತಲಾರದೆ, ಆಸರೆಯ ಕಂಬ ಹಿಡಿದು ನಿಂತುಕೊಂಡು, ಡೋರಾವಿಗೆ ಕೇಳುವಂತೆ "ನಾನೆಂತಹ ಸೊಗಸುಗಾರ!" ಎಂದನು. ಈ ರೋಗಿಯು ಆಡಿದ ಮಾತಿನಲ್ಲಿ ದುಃಖವೂ ಸಂತೋಷವೂ ಕೂಡಿತ್ತು. ಅವನು ಸ್ಥೂಲಕಾಯಳಾದ ಡೋರಾವನ್ನು, ಅವಳ ಉಬ್ಬಿದ ಎದೆಯನ್ನು ಕಂಡು ಹಿಗ್ಗಿ; ತನ್ನ ಬಡಕಲು ಶರೀರವನ್ನು ಹಳಿದುಕೊಂಡ.

"ಹಾ ನೀನೆಂತಹ ಶಕ್ತಿವಂತಳು! ನಾನು ಎಂದಿನಂತೆ ಸುಧಾರಿಸಿಕೊಂಡು ಎದ್ದೇಳಲು ನೀನು ಸಹಾಯಮಾಡುವೆಯಾ?" ಎಂದವನು, ಡೋರಾಳನ್ನು ಕೇಳಿದ.

"ಅನುಮಾನವೇಕೆ? ಖಂಡಿತವಾಗಿಯೂ ಸಹಾಯಮಾಡುವೆ" ಎಂದು ಡೋರಾ ಅವನಿಗೆ ಸಮಾಧಾನ ಹೇಳಿದಳು.

ಹೊಸದಾಗಿ ಬಂದ ರೋಗಿಯ ಹೆಸರು ಫಿಲಿಪಾಪ್. ಇವನೊಬ್ಬ ಕಪ್ಪನೆಯ ಕುರೂಪಿ ಮನುಷ್ಯ. ಗೂಬೆಯ ಮೂಗಿನಂತೆ ಇವನ ಬಾಗಿದ ಮೂಗು ಅಸಹ್ಯವಾಗಿ ಕಾಣುತ್ತಿತ್ತು, ಇವನ ಸ್ವರೂಪ ಹೇಗಾದರಿರಲಿ, ಇವನು ಆಸ್ಪತ್ರೆ ಸೇರಿದಂದಿನಿಂದ ಡೋರಾಳ ವರ್ತನೆ ತೀರಾ ಬದಲಾಯಿಸಿ ಹೋಯಿತು. ರೋಗಿಗಳನ್ನು ಶ್ರದ್ಧೆಯಿಂದ ಕಾಣುತ್ತಿದ್ದ ಡೋರಾ [illegible]ಲಾರಂಭಿಸಿದಳು. ರೋಗಿಗಳ ಪೈಕಿ ಯಾರಾದರೂ ಏನಾದರೂ ಬಯಸಿ ಬೇಡಿಕೊಂಡಲ್ಲಿ, ಕೋಪದಿಂದ ಕೂಗಾಡುತ್ತಿದ್ದಳು. ಡೋರಾ ಕಿವಿಯಿಂದ ಕೇಳುವ, ಕಣ್ಣಿನಿಂದ ನೋಡುವ ಜೀವಶಕ್ತಿಯನ್ನು ಕಳೆದು

ಕೊಂಡವಳಂತೆ ಎಲ್ಲಾ ರೋಗಿಗಳನ್ನು ತೊರೆದು, ಹೊಸದಾಗಿ ಬಂದು ಸೇರಿಕೊಂಡ ಫಿಲಿಪಾಪ್‌ನ ಕೋಣೆ ಸೇರಿಬಿಡುತ್ತಿದ್ದಳು.

ಫಿಲಿಪಾಪ್ ಮೃತ್ಯುವಿನ ಹಾದಿಯನ್ನು ನಿಧಾನವಾಗಿ ಹಿಡಿಯು ತ್ತಿದ್ದ. ಉಸಿರೆಳೆಯುವುದೇ ಅವನಿಗೆ ಕಷ್ಟವಾಗಿದ್ದಿತು. ಕೆಮ್ಮುತ್ತಾ, ಯಾವುದೋ ಗೀತಾಚರಣವನ್ನು ಹಾಡಿಕೊಳ್ಳುತ್ತಾ ದಿನ ಕಳೆಯುತ್ತಿದ್ದ. ಅವನಿಗೆ ಒಂದು ಹೆಚ್ಚಿನ ಉತ್ಸಾಹವಿತ್ತು, ಅವನೊಬ್ಬ ಹುಚ್ಚು ಸಾಹಸಿ, ನಿರ್ಭೀತಿಯುವ. "ಕ್ಷಯರೋಗವೆನ್ನುವುದು ಅಬದ್ಧ ಕಂತೆ. ದಿನ, ರಾತ್ರಿ, ಹುಟ್ಟು, ಪ್ರೇಮ, ಜ್ಞಾನ, ಸಾವು ಇವೆಲ್ಲ ಏನು? ವಿಪರೀತಾರ್ಥ! ಇವೆಲ್ಲಾ ವಿಚಿತ್ರಾವತಾರ. ಇವೆಲ್ಲಾ ನೆನೆದರೆ, ಇಪ್ಪತ್ತಾರು ವರ್ಷದವ ನಾದ ನನಗೆ ಆಶ್ಚರ್ಯವೆನಿಸುತ್ತದೆ. ನನಗೆ ಮತ್ತು ಡೋರಾಗೆ................" ಎಂದು, ಅವನು ನಿಲ್ಲಿಸಿ ನಿಲ್ಲಿಸಿ ಮಾತನಾಡುತ್ತಿದ್ದ.

ಈ ರೋಗಿಯ ಕೋಣೆಯಿಂದ ಪಾತ್ರೆಗಳ ಕಲಕಲ ಸಪ್ಪಳ ಕೇಳಿ ಬರುತ್ತಲಿತ್ತು. ಡೋರಾ ತನಗೆ ಫಿಲಿಪಾಪ್ ಏನು ಆಜ್ಞೆ ಮಾಡುವನೋ ಎಂದು ಎಚ್ಚರಿಕೆಯಿಂದ ಕಣ್ಣುಗಳನ್ನು ಬಿಟ್ಟುಕೊಂಡು ನಿಂತಿರುತ್ತಿದ್ದಳು. ಫಿಲಿಪಾಪ್ ಡೋರಾಳನ್ನು ಕರೆಯುತ್ತಾ "ನನ್ನ ಮುದಿ ಆನೆಯೇ, ನನಗಾಗಿ ಕೆಲವು ದ್ರಾಕ್ಷಿಹಣ್ಣುಗಳನ್ನು ಒಯ್ದುಬಾ" ಎಂದು ಕೇಳುತ್ತಿದ್ದ. ಫಿಲಿಪಾಪ್ ಕ್ಷಯದಿಂದ ನರಳುತ್ತಿರುವವನಹಾಗೆ ತೋರದೆ, ಯಾವುದೋ ಹೃದಯ ಘಾತಕ್ಕೆ ಕಾರಣನಾಗಿ ಕನಲುತ್ತಿರುವಂತೆ ತೋರುತ್ತಿತ್ತು. ಇವನು ಆಸ್ಪತ್ರೆ ಸೇರಿದ ಅರವತ್ತೊಂಬತ್ತನೆಯ ದಿನ ಪ್ರಾಣಬಿಟ್ಟ. ಕಟ್ಟ ಕಡೆಯ ಸನ್ನಿವೇಶದಲ್ಲಿ, ಸ್ಮರಣೆ ತಪ್ಪಿದಾಗ ಅವನು "ಫೀಮಾ................ ಜೀವಪರ್ಯಂತ ನಿನ್ನ ಪ್ರೀತಿಸಿದೆ................ನಿನ್ನನ್ನೇ ಪ್ರೀತಿಸಿದೆ ಫೀಮಾ ಪ್ರಿಯತಮೆ" ಎನ್ನುತ್ತಾ ಕಣ್ಣು ಮುಚ್ಚಿದ.

ಫಿಲಿಪಾಪ್ ಹಾಸಿಗೆಯ ಬಳಿ ನಾನು ನಿಂತಿದ್ದೆ. ಅವನ ಮಗ್ಗುಲಲ್ಲಿ ನಿಂತು ಡೋರಾ ತನ್ನ ದೊಡ್ಡ ಕೈಯಿಂದ ಒಣಗಿದ ಅವನ ತಲೆ ಕೂದ ಲನ್ನು ನೇವರಿಸುತ್ತಿದ್ದಳು. ಅವಳ ಒಗಲಲ್ಲಿ ಗಂಟೊಂದಿತ್ತು. "ಇವನೇನು ಹೇಳುತ್ತಿದ್ದಾನೆ? ಫೀಮಾ ಎನ್ನುವವಳು ಯಾರು?" ಎಂದು ಕೆರಳಿ ಪ್ರಶ್ನಿಸಿದಳು.

"ಯಾರೇನು? ಫೀವಾ ಇವನು ಪ್ರೀತಿಸಿದ ಹೆಣ್ಣಿನ ಹೆಸರಿರ ಬಹುದು."

"ಇಲ್ಲ! ಇರಲಾರದು. ಇವನು ನನ್ನನ್ನು ಪ್ರೀತಿಸುತ್ತಿದ್ದಾನೆ. ಇಲ್ಲಿಗೆ ಬಂದಂದಿನಿಂದ ನನ್ನನ್ನು ಪ್ರೀತಿಸುತ್ತಿದ್ದಾನೆ" ಎಂದು ಗಟ್ಟಿಯಾಗಿ ಅವಳು ಕೂಗಾಡಿದಳು.

ಫಿಲಿಪಾಪ್ ಚಿತ್ತವಿಭ್ರಮೆಯಿಂದ ಗೊಣಗುತ್ತಿದ್ದ. ಡೋರಾ ತನ್ನ ಬಗಲಲ್ಲಿಟ್ಟುಕೊಂಡಿದ್ದ ಗಂಟನ್ನು ನನ್ನ ಕಾಲ ಬಳಿ ಬಿಸಾಡಿ "ಇವೆಲ್ಲಾ ಇವನ ಬಟ್ಟೆಗಳು" ಎಂದು ಸದ್ದುಮಾಡದೆ ಕೋಣೆಬಿಟ್ಟು ಹೊರಟು ಹೋದಳು. ನಿರಾಶಳಾಗಿ, ಕಳಾವಿಹೀನಳಾಗಿ ಡೋರಾ ಹೊರಟ ಇಪ್ಪತ್ತು ನಿಮಿಷಗಳಾದಮೇಲೆ, ಫಿಲಿಪಾಪ್ ಪ್ರಾಣಬಿಟ್ಟ. ಕೊನೆಯು ಸಾರಿ ಏನೋ ಹೇಳುವುದಕ್ಕೆ ಯತ್ನಿಸಿ, ಪ್ರಯಾಸಪಟ್ಟು ಕಲ್ಲಿನಂತೆ ಜಡವಾಗಿ ಮಲಗಿಬಿಟ್ಟ.

ಡೋರಾಳನ್ನು ಹುಡುಕಿಕೊಂಡು ನಾನು ಹೊರಟೆ. ಅವಳು ವಿಶಾಲವಾದ ಸಮುದ್ರ ಮತ್ತು ನೀಲಾಕಾಶದ ಕಪ್ಪು ಕಲೆಯುವ ದಿಗಂತ ವನ್ನು ನೋಡುತ್ತಾ ನಿಂತುಕೊಂಡಿದ್ದಳು. ನಾನು ಅವಳನ್ನು ಎಚ್ಚರಿಸಿದೆ. ನನ್ನ ಕಡೆ ಅವಳು ತಿರುಗಿ ನೋಡಿದಾಗ ಡೋರಾ ಎಂತಹ ನಿಷ್ಠುರ ಸ್ವಭಾವದವಳೆಂದು ನನಗೆ ತಿಳಿಯಿತು.

"ಫಿಲಿಪಾಪ್ ಸತ್ತುಹೋದ. ಅವನ ಮೊಗವನ್ನು ಮುಚ್ಚಿ ಹೊರಗೆ ಮಲಗಿಸು" ಎಂದೆ.

"ನಾನು ಮಲಗಿಸುವುದಿಲ್ಲ. ಇಂತಹ ಮನುಷ್ಯರಗೊಡವೆಯೇ ನನಗೆ ಬೇಡ. ಎಂತಹ ಮನುಷ್ಯನಿವನು!..................ನನ್ನನ್ನು ಪ್ರೀತಿ ಸುವನೆಂದು ಹೇಳುತ್ತಿದ್ದವನು, ಬೇರೆ ಯಾರನ್ನೋ ನೆನೆಯುತ್ತಾ............ ಮೋಸಮಾಡುವುದೇ!"

"ನಿಜ, ಅವನು ಸಾಯುವಾಗ ಆಡಿದ ಮಾತುಗಳೆಂದು ನಿನಗೆ ತಿಳಿಯಲಿಲ್ಲವೆ?"

"ಆದರೇನು? ನಾನೇನು ಕುರುಡಳೇ? ಎಲ್ಲರೂ ಸಾಯುವುದು ಖಂಡಿತ. ಅವನು ಮೋಸಮಾಡಿದುದೇಕೆ? ಯಾವ ಹೆಂಗಸನ್ನೂ ತಾನು

೨

ಗೀಸು ಮಾಧವನನ್ನು "ಸಾಕಷ್ಟು ಕಟ್ಟಿಗೆ ಸಿಕ್ಕಿದೆಯೋ" ಎಂದು ಕೇಳಿದ.

"ಸಿಕ್ಕಿದೆ. ಶವವನ್ನು ಮುಚ್ಚಲು ಬಟ್ಟೆ ಮಾತ್ರ ಬೇಕಾಗಿದೆ" ಎಂದ ಮಾಧವ.

"ಹಾಗಾದರೆ ಬಾ, ಸಾಧಾರಣ ಬೆಲೆಯ ಬಟ್ಟೆಯನ್ನು ಕೊಳ್ಳೋಣ" ಎಂದು ಗೀಸು, ಮಾಧವನೊಂದಿಗೆ ಹೊರಟ.

"ಸಾಧಾರಣವಾದದ್ದು ಸಾಕು. ನಾವು ಶವವನ್ನು ಮಣ್ಣು ಮಾಡುವುದೆಂದರೆ ಸಂಜೆಯೇ ಆದೀತು. ಕಡಿಮೆ ಬೆಲೆಯ ಬಟ್ಟೆಯನ್ನು ನಾವು ಕೊಂಡು ಬಂದೆವೆಂದು ಯಾರೂ ತಿಳಿಯಲಾಗುವುದಿಲ್ಲ."

"ಹೊಸ ಬಟ್ಟೆಯಿಂದ ಹೆಣವನ್ನು ಸುತ್ತುವ ಕೆಟ್ಟ ಪದ್ಧತಿ ಎಲ್ಲಿಂದ ಬಂತೋ! ಸತ್ತವಳಿಗೆ, ಜೀವಮಾನದಲ್ಲಿ ಹರಕು ಬಟ್ಟೆಯೂ ದೊರಕಿರಲಿಲ್ಲ".

"ಈಗ ಕೊಳ್ಳುವ ಹೊಸ ಬಟ್ಟೆಯೂ ಬೆಂಕಿಯಲ್ಲಿ ಹಾಳಾಗುವುದು".

"ಈಗ ಸಿಕ್ಕಿದ ಐದು ರೂಪಾಯಿ ಮುಂಚೆಯೇ ಸಿಕ್ಕಿದ್ದರೆ ಅವಳ ಚಿಕಿತ್ಸೆಗಾಗಿ ಖರ್ಚು ಮಾಡಬಹುದಿತ್ತು."

ಒಬ್ಬರ ಮಾತಿಗೆ ಒಬ್ಬರು, ಹೆಚ್ಚು ಹೆಚ್ಚು ಅಪೇಕ್ಷೆಪಡುತ್ತಿರುವಂತೆ ತೋರಿತು. ಅಂಗಡಿಯಿಂದ ಅಂಗಡಿಗೆ ಅಲೆಯುತ್ತಾ, ಎಲ್ಲಾ ಬಗೆಯ ಹತ್ತಿ, ರೇಷ್ಮೆಯ ಬಟ್ಟೆಯನ್ನು ನೋಡುತ್ತಾ, ಅವರು ಯಾವುದನ್ನೂ ಕೊಳ್ಳದೆ, ಸಂಜೆಯುವರೆಗೆ ಸುತ್ತಾಡಿದರು. ಹೀಗೆ ಅಲೆದಾಡಿದವರು, ಸಂಜೆಯಾಗುತ್ತಲೇ, ಸಾರ್ವಜನಿಕರು ಕೂಡುತ್ತಿದ್ದ ಪಾನಮಂದಿರದ ಹತ್ತಿರಕ್ಕೆ ಬಂದು ಕಣ್ಣು ಕಣ್ಣು ಬಿಟ್ಟು ನೋಡತೊಡಗಿದರು, ಇದೆಲ್ಲವೂ ಮೊದಲೇ ಎಣಿಕೆಹಾಕಿಕೊಂಡು ಬಂದ ಕೆಲಸದಂತೆ ಕಾಣಿಸುತ್ತಿತ್ತು. ಗೀಸು ಸಾರಾಯಿಮಾರುವವನ ಹತ್ತಿರ ಹೋಗಿ, "ನಮಗೊಂದು ಸೀಸೆ" ಎಂದು ಸೀಸೆ ಸಾರಾಯಿ ಕೊಂಡು ತಂದ.

ಸ್ವಲ್ಪ ಬಿಸಿ ಮುರುಕನ್ನೂ ಹುರಿದ ಮೀನನ್ನೂ ಕೊಂಡು, ಅವರು ಪಾನಮಂದಿರದ ಮುಂದೆ ಸಮಾಧಾನದಿಂದ ಕುಳಿತು ಕುಡಿಯತೊಡಗಿದರು.

ಕುಡಿದು, ಮತ್ತೇರಿದಮೇಲೆ, ಮೊದಲಾಡಿದ ಹಾಗೆ ಗೀಸು ಶವಕ್ಕೆ ಹೊದಿಸುವ ಬಟ್ಟೆ ತೀರಾ ವ್ಯರ್ಥವೆಂದು ಮತ್ತೊಂದುಸಾರಿ ಹೇಳಿದ.

ಮಾಧವ ಆಕಾಶದ ಕಡೆಗೆ ನೋಡುತ್ತಾ, ತಾನು ಮಾಡುತ್ತಿರುವ ಅಧರ್ಮಕೆಲಸವನ್ನು ದೇವರು ನೋಡುತ್ತಿರುವನೋ ಎನ್ನುವಂತೆ "ಪ್ರಪಂಚವೇ ಹೀಗೆ; ಬ್ರಾಹ್ಮಣರಿಗೆ ಸಾವಿರಾರು ರೂಪಾಯಿಯನ್ನು ಜನರು ಸುಮ್ಮನೆ ಕೊಡಲು ಮನಸ್ಸುಮಾಡುವರೇನು? ಸತ್ತವರಿಗೆ ತಮ್ಮ ದಹನಕ್ಕಾಗಿ ಹಣ ವೆಚ್ಚವಾಯಿತೆಂದು ತಿಳಿಯಲೂ ಸಾಧ್ಯವಿಲ್ಲ" ಎಂದು ಮಾತನಾಡಿದ.

"ಹಣವಂತರಿಗೆ ವ್ಯರ್ಥವಾಗಿ ಕೊಡಲಿಕ್ಕೆ ಬೇಕಾದಷ್ಟು ಹಣ ವಿರುತ್ತದೆ. ಅವರು ಬೇಕಾದಷ್ಟು ಚೆಲ್ಲಲಿ. ನಮ್ಮಲ್ಲೇನಿದೆ?" ಎಂದ ಗೀಸು.

"ಜನರು ಶವವನ್ನು ಸುತ್ತಲು ಬಟ್ಟೆಯೆಲ್ಲಿ? ಎಂದು ಕೇಳಿ, ಟೀಕಿಸಿದರೆ ಉತ್ತರವೇನುಕೊಡುತ್ತೀಯೆ?" ಎಂದು ಮಾಧವ ಪ್ರಶ್ನಿಸಿದ.

ಗೀಸು ನಗುತ್ತಾ "ಸೊಂಟಕ್ಕೆ ಸೇರಿಸಿಕೊಂಡ ಹಣ ಜಾರಿ ಎಲ್ಲಿಯೋ ಬಿದ್ದುಹೋಯಿತೆಂದೂ, ಕಷ್ಟಪಟ್ಟು ಎಷ್ಟು ಹುಡುಕಿದರೂ ಸಿಕ್ಕಲಿಲ್ಲ ವೆಂದೂ ಹೇಳೋಣ. ಅವರು ಈ ಮಾತನ್ನು ಮೊದಲು ನಂಬಲಾರರು. ನಮ್ಮನ್ನು ಪ್ರಶ್ನಿಸಿ, ಟೀಕಿಸುವವರೇ ಕೊನೆಗೆ ಹೆಚ್ಚು ಹಣ ನಮಗೆ ಕೊಡುತ್ತಾರೆ."

ಮಾಧವ, ತಂದೆಯ ಈ ಮಾತನ್ನು ಕೇಳಿ, ಹೊಸ ಹುರುಪಿನಿಂದ ಮುಂದೆ ಅದೃಷ್ಟ ಲಭಿಸಲಿದೆಯೆಂದು ಸಂತೋಷದಿಂದ, "ಅವಳು ಒಳ್ಳೆ ಯುವಳಾಗಿದ್ದಳು. ನಮಗಾಗಿ ಕಷ್ಟಪಟ್ಟು ದುಡಿದು ಸತ್ತುಹೋದಳು" ಎಂದು, ಕನಿಕರದಿಂದ ನುಡಿದ.

ಈ ಹೊತ್ತಿಗೆ ಅರ್ಧಸೀಸೆಯಷ್ಟು ಸಾರಾಯಿ ಮುಗಿದಿತ್ತು. ಗೀಸು, ಹತ್ತಿರದಲ್ಲಿಯೇ ಮಾರುತ್ತಿದ್ದ ದೋಸೆ ಉಪ್ಪಿನಕಾಯಿಯನ್ನು ಕೊಂಡು ತಂದ. ಇನ್ನು ಒಂದು ರೂಪಾಯಿ ಎಂಟಾಣೆ ಮಾತ್ರವೇ ಅವನಲ್ಲಿ ಉಳಿದಿತ್ತು. ಅರಣ್ಯರಾಜ, ಚಿಕ್ಕ ಪ್ರಾಣಿಗಳಮೇಲೆ ಬಿದ್ದು ತನ್ನ ಹಸಿವಿನಾತುರವನ್ನು ತೀರಿಸಿಕೊಳ್ಳುವಂತೆ, ತಂದೆ-ಮಗ ತಿಂಡಿಯಮೇಲೆ ಮನಸ್ಸಿಟ್ಟು, ಸತ್ತವಳನ್ನು ನೆನೆಯದೆ, ಹೃದಯವಿಹೀನರಂತೆ ತಿನ್ನುತ್ತಾ

ಕುಳಿತುಬಿಟ್ಟರು. ಉದಾರಮನಸ್ಸಿನಿಂದ ಗೀಸು, "ನಾವು ತೃಪ್ತಿಯಾಗು ವಷ್ಟು ತಿಂದೆವು; ಸತ್ತವಳ ಆತ್ಮಕ್ಕೆ ಇನ್ನು ತೃಪ್ತಿಯಾಗುವುದು ಖಂಡಿತ" ಎಂದು, ನಿಶ್ಚಯದ ತೀರ್ಮಾನ ಹೇಳಿಬಿಟ್ಟ. ಮಾಧವ, ತಂದೆ ಹೇಳು ತ್ತಿರುವುದು ನಿಜವೆನ್ನುವಂತೆ ತಲೆದೂಗುತ್ತ ಕುಳಿತುಬಿಟ್ಟ. ಆಗ ಅವನು ದೇವರನ್ನು ನೆನೆದು, "ಓ ದೊರೆಯೆ! ಎಲ್ಲರ ಹೃದಯದಲ್ಲಿ ಕಾಣಿಸಿ ಕೊಳ್ಳುವ ಗುಪ್ತವಿಚಾರಗಳನ್ನು ನೀನು ತಿಳಿಯುವೆ. ಸತ್ತವಳಿಗೆ ಶಾಂತಿ ದೊರಕಲಿ, ಅವಳು ಸ್ವರ್ಗವೇರಲಿ, ದಯೆತೋರು. ನಾವು ನಮ್ರಭಾವ ದಿಂದ ಪ್ರಾರ್ಥಿಸುತ್ತಿದ್ದೇವೆ. ನಾವು ಎಂದಿಗೂ ಇಂತಹ ಅಪೂರ್ವವಾದ ತಿನಸುಗಳನ್ನು ತಿಂದು ಸಂತಸಪಡಲೇ ಇಲ್ಲ" ಎಂದು ಮೊರೆಯಿಟ್ಟ.

ಮಾಧವನ ಮನಸ್ಸಿಗೆ ಏನೋ ತೋರಿದಂತಾಯಿತು. "ತಂದೆಯೆ, ನಾವೂ ಒಂದುದಿನ ಸಾಯುವರಲ್ಲವೇ?" ಎಂದು ಕೇಳಿದ. ಗೀಸು ಇಂತಹ ಅನಿಷ್ಟವಿಷಯಗಳ ಬಗ್ಗೆ ತನ್ನ ಅಭಿಪ್ರಾಯ ಸೂಚಿಸಲು ಇಷ್ಟ ಪಡಲಿಲ್ಲ. ಸೊಗಸಾದ ತಿನಿಸನ್ನು ತಿಂದು ತೇಗಿ ಆನಂದಪಡುತ್ತಿರುವಾಗ, ಜೀವ ಮರುಕಳಿಸಿ ಮರೆಯಾಗುವ ವಿಚಾರವೆತ್ತಿ ಮಾತನಾಡಲು ಅವನಿಗೆ ಬಾಯಿ ಬರಲಿಲ್ಲ.

ಮಾಧವ ಪುನಃ ಮಾತನಾಡಿದ. "ಸ್ವರ್ಗದಲ್ಲಿ, ಅವಳು ತನ್ನ ಶವವನ್ನು ಬಟ್ಟೆಯಿಂದ ಸುತ್ತಿ ಏಕೆ ಮಣ್ಣುಮಾಡಲಿಲ್ಲವೆಂದು ಕೇಳಿದರೆ; ನಾವೇನು ಹೇಳುವುದು?" ಎಂದು ಕೇಳಿದ.

"ಏನು ಹೇಳುವುದು!" ಎಂದು ಗೀಸು ಕಣ್ಣು ಕಣ್ಣುಬಿಟ್ಟು ಕೂಗಿದ.

"ಅವಳು ಹಾಗೆ ಕೇಳುವುದು ಖಂಡಿತವೆಂದು ನನಗೆ ತೋರುತ್ತದೆ" ಎಂದ ಮಾಧವ.

ಗೀಸು ಸ್ವಲ್ಪ ವ್ಯಗ್ರನಾಗಿ "ಅವಳಿಗೆ ಸರಿಯಾದ ವ್ಯವಸ್ಥೆಯಾಗುವು ದಿಲ್ಲವೇಕೆ? ನನಗೆ ಜ್ಞಾನವಿಲ್ಲವೆ? ಅರವತ್ತುವರ್ಷ ಬದುಕಿ ಬಾಳಿದ ನನಗೆ, ಅವಳಿಗೆ ಯೋಗ್ಯವಾದ ಬಟ್ಟೆಯನ್ನು ಒದಗಿಸಲಿಕ್ಕಾಗುವುದಿಲ್ಲವೆ?" ಎಂದ.

ತಂದೆಯ ಮಾತಿನಲ್ಲಿ ವಿಶ್ವಾಸದ ರೇಖೆಯನ್ನು ಕಾಣದ ಮಾಧವ, "ಯಾರು ಒದಗಿಸಿಕೊಡುತ್ತಾರೆ? ನೀನು ಇದ್ದುದನ್ನೆಲ್ಲಾ ಈಗಾಗಲೇ ಖರ್ಚುಮಾಡಿಬಿಟ್ಟೆ. ನಾನು ತಾನೆ ಅವಳು ಕೇಳುವ ಪ್ರಶ್ನೆಗಳಿಗೆಲ್ಲಾ

ಉತ್ತರ ಹೇಳಬೇಕಾಗುವವನು! ನಾನೇ ತಾನೆ ಅವಳನ್ನು ಮದುವೆಯಾಗಿ ಮುಂದಲೆಗೆ ಕುಂಕುಮವನ್ನಿಟ್ಟವನು!" ಎಂದ.

ಅತಿ ಕೋಪದಿಂದ ಗೀಸು, "ಅವಳಿಗೆ ಉಚಿತವಾಗಿ ವಸ್ತ್ರ ದೊರೆಯುವುದರಲ್ಲಿ ಸಂದೇಹವೇ ಇಲ್ಲ" ಎಂದು ತಿದ್ದಿ ಮಾತನಾಡಿದ.

"ಯಾರು ಕೊಡುತ್ತಾರೆ? ನೀನೇಕೆ ಎಲ್ಲವನ್ನೂ ನನಗೆ ಹೇಳಬಾರದು" ಎಂದು ಮಾಧವ ಒತ್ತಾಯಪಡಿಸಿದ.

"ಹಿಂದೆ ನಮಗೆ ಸಹಾಯಮಾಡಿದವರೇ ಮುಂದೆಯೂ ಸಹಾಯ ಮಾಡುತ್ತಾರೆ. ಆದರೆ, ಈಗ ಹಣವನ್ನು ಮಾತ್ರ ನಮ್ಮ ಕೈಗೆ ಕೊಡುವುದಿಲ್ಲ." ಎಂದ ಗೀಸು.

ರಾತ್ರಿ ಉರುಳಿತು. ನೀಲಾಕಾಶದಲ್ಲಿ ತಾರೆಗಳು ಹೆಚ್ಚು ಹೆಚ್ಚು ಬೆಳಗುತ್ತಲಿತ್ತು. ಪಾನಮಂದಿರದಲ್ಲಿ ಸಂತೋಷ ಸಂಭ್ರಮ ಕಡಿಮೆಯಾಗುತ್ತ ಬಂದಿತು. ಕೆಲವರು ಸಂತೋಷದಿಂದ ತಮ್ಮನ್ನು ತಾವೇ ಹೊಗಳಿಕೊಳ್ಳುತ್ತಿದ್ದರು, ಕೆಲವರು ಹಾಡುತ್ತಿದ್ದರು, ಇನ್ನು ಕೆಲವರು ತಮ್ಮ ಪಾನದ ಬಟ್ಟಲನ್ನು ಅದಲು ಬದಲು ಮಾಡಿಕೊಂಡು, ತಮಗೆ ಪ್ರಿಯರೆನಿಸಿದ ಸ್ನೇಹಿತರನ್ನು ಅಪ್ಪಿಕೊಳ್ಳುತ್ತಿದ್ದರು. ಪಾನಮಂದಿರ ಕ್ರೀಡಾಭವನವೆನಿಸಿತ್ತು. ಅಂದಿನ ಹವೆಯಲ್ಲಿಯೂ ಒಂದು ತರಹೆಯ ಮತ್ತು ಕಂಡಿತ್ತು. ಇದಕ್ಕೆಲ್ಲ ಪಾನಮಂದಿರದ ವಾತಾವರಣವೇ ಕಾರಣ. ತಮ್ಮ ಇಡೀ ದಿನದ ದುಡಿತ ಮರೆತು, ಬೇಸರ ಕಳೆದು, ಮೋದದಲ್ಲಿ ಮೆರೆಯಲು, ಪಾನಾಸಕ್ತರು ಅಲ್ಲಿ ಸೇರುತ್ತಿದ್ದರು. ಬೇಸರ ಕಳೆಯಲು ಅವರು ಅಲ್ಲಿಗೆ ಬರುವುದು ಹಾಗಿರಲಿ, ಕುಡಿದಮೇಲೆ ಅವರು ಬದುಕಿದ್ದೇವೆಯೇ ಅಥವಾ ಸತ್ತಿದ್ದೇವೆಯೇ ಎಂದು ತಿಳಿದುಕೊಳ್ಳಲು ಕೂಡ ಅರಿತುಕೊಳ್ಳಲಾರದವರಾದರು.

ಮಾಧವ ತಾನು ತೃಪ್ತಿಯಾಗುವಷ್ಟು ಕುಡಿದು, ತಿನ್ನುವಷ್ಟು ತಿಂದು, ಇನ್ನೂ ಭರ್ತಿಯಿದ್ದ ಎಲೆಯನ್ನು ದೂರದಲ್ಲಿ ನಿಂತು ತನ್ನನ್ನೇ ನೋಡುತ್ತಿದ್ದ ಭಿಕ್ಷುಕನಿಗೆ ಕೊಟ್ಟುಬಿಟ್ಟ. ಬಡವನಿಗೆ ನೀಡಿ ಸಂತೋಷಪಡಿಸುವ ಸುಯೋಗ, ಮಾಧವನಿಗೆ ಲಭಿಸಿದುದು ಅಂದೇ. ಗೀಸು ಬಡವನ ಬೆನ್ನು ತಟ್ಟುತ್ತಾ "ತಿನ್ನು, ಹೊಟ್ಟೆಯ ತುಂಬಾ ತಿನ್ನು. ನೀನು ತೃಪ್ತಿಪಟ್ಟರೆ,

ಸತ್ತವಳ ಆತ್ಮಕ್ಕೂ ತೃಪ್ತಿಯಾದೀತು. ನೀನು ತಿಂದು ಅವಳನ್ನು ಮನದಣಿಯ ಹರಿಸು" ಎನ್ನುತ್ತಿದ್ದ.

ಆಕಾಶದ ಕಡೆಗೆ ನೋಡುತ್ತಾ ಮಾಧವ, "ಅವಳು ಖಂಡಿತವಾಗಿ ಸ್ವರ್ಗಕ್ಕೆ ಹೋಗುವಳು. ಹೋಗಿ ಅಲ್ಲಿ ರಾಣಿಯಂತೆ ಅಲಂಕರಿಸುವಳು" ಎಂದ. ಉತ್ಸಾಹದಿಂದ ಲೋಲಾಡುತ್ತಿದ್ದ ಗೀಸು, "ಅವಳು ನಿಜವಾಗಿ ಸ್ವರ್ಗವೇರುವಳು. ಅವಳು ಜೀವಿತಕಾಲದಲ್ಲಿ ಯಾರಿಗೂ ಕಷ್ಟವೀಯಲಿಲ್ಲ. ಅವಳು ಸತ್ತಮೇಲೆ ನಾವು ಒಂದು ಘಂಟೆಯ ಕಾಲ ಸಂಭ್ರಮ ಪಡುತ್ತಾ ಜಗತ್ತನ್ನೇ ಮರೆತಿದ್ದೆವು. ದೊಡ್ಡ ಹೊಟ್ಟೆಯ ಜನರು, ಬಡವರನ್ನು ಸುಲಿದು, ಗಂಗೆಯಲ್ಲಿ ಮಿಂದು, ಪಾಪವನ್ನು ಕಳೆದು ಸ್ವರ್ಗವೇರುತ್ತಾರೆ. ಹೀಗೆ ನಡೆದಿರುವಾಗ, ಅವಳಿಗೆ ಅಲ್ಲಿ ಠಾವಿಲ್ಲವೇನು?" ಎಂದ.

ಈ ಹೊಸಮಾತು, ದುಃಖಛಾಯೆಯನ್ನು ಅರಳಿಸಿತು.

ಮಾಧವ "ಅವಳು ಇಡೀ ಜೀವ ಕಷ್ಟಪಟ್ಟಳು. ಪ್ರಸವಕಾಲದಲ್ಲಿ ತೀರಾ ನೋವನ್ನನುಭವಿಸಿದಳು" ಎಂದು ನೆನೆಯುತ್ತಾ ಘಟ್ಟಿಯಾಗಿ ಅಳಲಾರಂಭಿಸಿದ.

ಗೀಸು ಮಗನನ್ನು ಸಂತೈಸುತ್ತಾ "ಈ ಲೋಕದಲ್ಲಿ ಜೀವಿಸಿ, ದುಃಖಪಡುವ ಬದಲಾಗಿ ಕುತ್ತಿನಿಂದ ಪಾರಾಗಿಹೋದಳೆಂದು ಸಂತೋಷಪಡದೆ, ದುಃಖಿಸುವೆಯೇಕೆ?" ಎಂದು ಪ್ರೋತ್ಸಾಹಿಸುತ್ತಾ ಮಾತನಾಡಿದ.

ಇಬ್ಬರೂ ಇದ್ದಕ್ಕಿದ್ದಹಾಗೆ ಸಂತೋಷದಿಂದ ಹಾಡಲಾರಂಭಿಸಿದರು. "ಓ ಜಗತ್ ಪಿತನೆ! ನಮ್ಮ ಕಡೆಗೇಕೆ ಕಣ್ಣು ಮಿಟುಕಿಸುತ್ತಿರುವೆ" ಎಂದು ಹಾಡಿ, ಕುಣಿಯಲಾರಂಭಿಸಿದರು.

ಪಾನದ ಅಮಲು ತುತ್ತ ತುದಿಯೇರಿತು. ಏರಿತದ ಹೊಸದರಲ್ಲಿ ಅವರು ಹಾಡಿದರು, ಕುಣಿದರು; ಮತ್ತೇರಿದಾಗ ಏನೇನೋ ಅಭಿನಯ ಸಂಜ್ಞೆ ತೋರಿ, ಎಲ್ಲವನ್ನೂ ಮುಗಿಸಿ, ನಡುರಸ್ತೆಯಲ್ಲಿ ಪ್ರಜ್ಞಾಶೂನ್ಯರಾಗಿ ಬಿದ್ದುಬಿಟ್ಟರು.

# ಸೊಸೆ

ಠಾಕೂರ ಬಿನೀಮಾಧವಸಿಂಗ್ ಗೌರೀಪುರದ ಜಮೀನ್ದಾರ. ಇವನ ಹಿರಿಯರು, ಗೌರೀಪುರದಲ್ಲಿ ದೇವಾಲಯ, ಸತ್ರ, ಕೊಳ ಮುಂತಾದುವನ್ನು ಕಟ್ಟಿಸಿ, ಜನೋಪಕಾರಮಾಡಿ ಮನೆತನದ ಗೌರವ ಕಾಪಾಡಿಕೊಂಡಿದ್ದರು. ಹಿರಿಯರ ಕಾಲದಲ್ಲಿ, ಮನೆಯಮುಂದೆ ದಿವ್ಯವಾಗಿ ಅಲಂಕಾರಮಾಡಿದ ಆನೆಗಳಿರುತ್ತಿದ್ದವು. ಸೇರುಗಟ್ಟಲೆ ಹಾಲುಕರೆಯುವ ಗೋವುಗಳಿರುತ್ತಿದ್ದವು. ಬಿನೀಮಾಧವನಕಾಲಕ್ಕೆ, ಈ ವೈಭವವೆಲ್ಲಾ ಮಾಯವಾಯಿತು. ಹಿಂದಿನ ವೈಭವ ಸ್ಮರಣೆಗೆಂದು, ಒಂದು ಬಡಕಲು ಗೋವುಮಾತ್ರ ಅವನ ಬಳಿ ಉಳಿಯಿತು.

ಠಾಕೂರ ಬಿನೀಮಾಧವ, ಅರ್ಧಕ್ಕೂ ಹೆಚ್ಚಿನಷ್ಟು ಸಿರಿಯನ್ನು ವಕೀಲರಿಗೆ ತೆತ್ತು ಬರಿಗೈಮಾಡಿಕೊಂಡಿದ್ದ. ಅವನ ಉತ್ಪನ್ನ, ಕೇವಲ ವರ್ಷಕ್ಕೆ ಒಂದುಸಾವಿರ ರೂಪಾಯಿ ಮಟ್ಟಕ್ಕೆ ಇಳಿಯಿತು. ಬಿನೀಮಾಧವನಿಗೆ ಶ್ರೀಕಂಠಸಿಂಗ್, ಲಾಲ್‌ಬಿಹಾರಿಸಿಂಗ್ ಎಂಬಿಬ್ಬರು ಗಂಡುಮಕ್ಕಳಿದ್ದರು. ಶ್ರೀಕಂಠಸಿಂಗ್, ಅಲಹಾಬಾದಿನಲ್ಲಿ ಕೆಲಸ ಮಾಡುತ್ತಿದ್ದ. ಬಿನೀಮಾಧವ, ಮನೆತನದ ಗೌರವ, ಅಧಿಕಾರ ಕಾಯ್ದುಕೊಂಡು ಹಳ್ಳಿಯಲ್ಲಿದ್ದ (ಗೌರೀಪುರದಲ್ಲಿ). ಲಾಲ್‌ಬಿಹಾರಿಸಿಂಗ್ ದೃಢಕಾಯ ಯುವಕ. ದಿನಂಪ್ರತಿ, ಎರಡುಸೇರು ಹಾಲು ಕುಡಿದು ಜೀರ್ಣಿಸಿಕೊಳ್ಳುವುದೇ ಇವನ ವೈಶಿಷ್ಟ್ಯವಾಗಿದ್ದಿತು. ಶ್ರೀಕಂಠಸಿಂಗ್, ಎರಡಕ್ಷರದ ಪ್ರಶಸ್ತಿ ಚಿಹ್ನೆ. ಬಿ. ಎ. ತನ್ನ ಹೆಸರಿನ ಕೊನೆಯಲ್ಲಿ ಅಂಟಿಸಿಕೊಳ್ಳುವ ಪ್ರಯತ್ನದಲ್ಲಿ, ದೇಹದಣಿಸಿ ಸೊರಗಿಹೋಗಿದ್ದ. ಶ್ರೀಕಂಠನಿಗೆ, ವೈದ್ಯಕೀಯ ಮೂಲಿಕೆ ಗ್ರಂಥಿಗಳಲ್ಲಿ ಆಸಕ್ತಿ ಹೆಚ್ಚು. ಅನೇಕ ಶೋಧನೆ ನಡೆಸಿ, ಲಾಹೋರು, ಕಲಿಕತ್ತೆಯಲ್ಲಿದ್ದ ಇತರ ವೈದ್ಯರೊಂದಿಗೆ, ತಾನು ಶೋಧಿಸಿದ ವಿಚಾರಗಳನ್ನು ಕುರಿತು ಪತ್ರವ್ಯವಹಾರ ನಡೆಸುತ್ತಿದ್ದ.

ಶ್ರೀಕಂಠ, ಆಧುನಿಕ ವಿದ್ಯಾಭ್ಯಾಸದ ಹಿಡಿತಕ್ಕೆ ಸಿಕ್ಕಿಬಿದ್ದಿದ್ದರೂ, ಪಾಶ್ಚಾತ್ಯ ನಡೆವಳಿಕೆಯನ್ನು ಅಲ್ಲಗೆಳೆಯುತ್ತಿದ್ದ. ಹಿಂದೂ ಹಿಂದೂತ್ವದ

ಮೇಲೆ ಇವನ ಅಭಿಮಾನ ಹೆಚ್ಚಿದ್ದಿತು. ಇವನ ಸುಧಾರಿತ ನಡೆವಳಿಕೆಯನ್ನು ಮೆಚ್ಚಿ, ಹಳ್ಳಿಯುವರು ಗೌರವದಿಂದ ಕಾಣುತ್ತಿದ್ದರು. ಈ ಆಧುನಿಕ ಪಂಡಿತ, ದಸರೆಯಃಕಾಲದಲ್ಲಿ ಹಳ್ಳಿಯುವರೊಂದಿಗೆ ಕಲೆಯುತ್ತಿದ್ದ. ಅವರು ಆಡುತ್ತಿದ್ದ ರಾಮಾಯಣ ನಾಟಕ ಸನ್ನಿವೇಶದಲ್ಲಿ ತಾನೂ ಪಾತ್ರವಹಿಸುತ್ತಿದ್ದ. ಹಬ್ಬ ಹುಣ್ಣಿಮೆಗಳಲ್ಲಿ ಪೂರ್ಣವಾಗಿ ಇತರರೊಂದಿಗೆ ಭಾಗಿಯಾಗುತ್ತಿದ್ದ. ಆಧುನಿಕ ಗಂಡು–ಹೆಣ್ಣುಮಕ್ಕಳು, ವಿವಾಹಾನಂತರ ಬೇರೆ ಸಂಸಾರಹೂಡಿ, ಬಂಧುವರ್ಗದವರನ್ನು ದೂರಮಾಡಿ ಹೋಗುತ್ತಿದ್ದುದನ್ನು ಘಂಟಾಘೋಷವಾಗಿ ಖಂಡಿಸುತ್ತಿದ್ದ. ಈ ದುಷ್ಟಪದ್ಧತಿ, ಸಮಾಜಕ್ಕೆ, ಸಂಸ್ಕೃತಿಗೆ ವಿರೋಧವೆಂದು ವಾದಿಸುತ್ತಿದ್ದ. ಒಕ್ಕೂಟ ಸಂಸಾರ ಮಂಡನೆಯನ್ನು, ಹಳ್ಳಿಗರು ಒಪ್ಪುತ್ತಿರಲಿಲ್ಲ. ಶ್ರೀಕಂಠನ ಈ ಮಂಡನೆಯನ್ನು ತಿರಸ್ಕರಿಸುತ್ತಾ, ಹಲವರು ದ್ವೇಷಬೆಳೆಸುತ್ತಿದ್ದರು. ಇವರಷ್ಟೇ ಅಲ್ಲ; ಶ್ರೀಕಂಠನ ಹೆಂಡತಿಯೂ ಸಹ ಈ ಅಭಿಮತವನ್ನು ಬಹಿರಂಗವಾಗಿ ಅಲ್ಲಗಳೆಯುತ್ತಿದ್ದಳು. ತಾನು ಗಂಡನೊಡನೆ ಪ್ರತ್ಯೇಕವಾಗಿ ಸಂಸಾರಹೂಡಬೇಕೆಂಬ ಆಭಿಲಾಷೆ ಅವಳಿಗಿರಲಿಲ್ಲ. ತನಗೆ, ಹೆಚ್ಚಾಗಿ ಅಡಿಗೆಮನೆಯಲ್ಲಿ ಹೆಚ್ಚುಸ್ವಾತಂತ್ರ್ಯವಿಲ್ಲವೆಂದವಳು, ಗಂಡನ ವಾದವನ್ನು ಸಮರ್ಥಿಸುತ್ತಿರಲಿಲ್ಲ.

ಆನಂದಿ, ಶ್ರೀಕಂಠಸಿಂಗನ ಹೆಂಡತಿ. ಗೌರವಸ್ಥ ಮತೆತನದವಳು. ಅವಳ ತಂದೆ ಭೂಪಸಿಂಗ್ ಮೊದಲು ಶ್ರೀಮಂತನಾಗಿದ್ದ. ಶ್ರೀಮಂತ ಭೂಪಸಿಂಗನ ಮನೆಯಲ್ಲಿ ಐಶ್ವರ್ಯವಿದ್ದಂತೆ; ದೊಡ್ಡಸ್ತಿಕೆಗೆ ತಕ್ಕಹಾಗೆ ಆನೆ, ನಾಯಿಗಳಿರುತ್ತಿದ್ದವು. ಖರ್ಚಿನಹಾದಿ ಮಿತಿಮೀರಿದ್ದರಿಂದ, ಅವನು ಕಡಿಮೆಮಟ್ಟಕ್ಕೆ ಇಳಿಯಬೇಕಾಯಿತು. ದುಂದುಗಾರನೆನಿಸಿದ ಭೂಪನಿಗೆ, ಗಂಡುಸಂತಾನವಿರಲಿಲ್ಲ. ಏಳುಜನ ಹೆಣ್ಣುಮಕ್ಕಳಿದ್ದರು. ಮೊದಲನೆಯ ಮೂರು ಮಕ್ಕಳಿಗೆ, ತನ್ನ ಗೌರವಕ್ಕೆ ತಕ್ಕಂತೆ ವೈಭವದಿಂದ ಅವನು ಮದುವೆಮಾಡಿದ. ಸಾಲದಹೊರೆ ಇಪ್ಪತ್ತುಸಾವಿರಕ್ಕೇರಿದಾಗ, ಎಚ್ಚೆತ್ತು ಕೈಬಿಗಿಮಾಡತೊಡಗಿದ. ನಾಲ್ಕನೆಯ ಮಗಳು ಆನಂದಿಯ ವಿವಾಹ ವಿಚಾರ ಬಂತು. ಆಗವನು ಧರ್ಮಸಂಕಟಕ್ಕೆ ಒಳಗಾದ. ಆನಂದಿ, ಭೂಪನ ಅಚ್ಚುಮೆಚ್ಚಿನ ಮಗಳು, ಎಲ್ಲರ ಪೈಕಿ ಅತಿ ಚಲುವೆ,

ಬುದ್ಧಿಶಾಲಿನಿ. ಇಂತಹವಳನ್ನು ಸರಿಯಾದ ವರನಿಗೆ ಕೊಡಬೇಕೆಂದು ಆವನ ಇಚ್ಛೆ. ಆನಂದಿ, ತಾನು ಬಡಗೂಸಾದಳೆಂದು ಭಾವಿಸಬಾರದೆಂದು ಎಚ್ಚರಿಕೆಯಿಂದಿದ್ದ. ಇವೆರಡರ ನಡುವೆ ಸಿಕ್ಕಿ, ಬಿಡುಗಡೆ ಕಾಣದೆ ಯೋಚಿಸುತ್ತಿದ್ದ.

ಒಂದುದಿನ ಭೂಪಸಿಂಗ್ ಜಮೀನ್ದಾರನ ಬಳಿ, ಚಂದಾ ಎತ್ತಲು ಶ್ರೀಕಂಠಸಿಂಗ್ ಬಂದಿದ್ದ. ಈ ಯುವಕನ ಸುಸಂಸ್ಕೃತಚರ್ಯೆಯನ್ನು ಮೆಚ್ಚಿ, ಭೂಪ ಆನಂದಿಯನ್ನು ಇವನಿಗೆ ಕೊಡಲು ಗೊತ್ತುಮಾಡಿಕೊಂಡ. ಕೊನೆಗೆ ಆನಂದಿ, ಶ್ರೀಕಂಠಸಿಂಗನ ಸತಿಯಾಗಿ; ಪತಿಯೊಡನೆ ಹೊಸ ಮನೆಗೆ ಬಂದಳು. ನೂತನವಾತಾವರಣ ಅವಳನ್ನು ಬೆರಗುಮಾಡಿತು. ಪತಿಯ ಮನೆಯಲ್ಲಿ ಹೆಚ್ಚು ಜನಗಳಿರಲಿಲ್ಲ. ಗೋಡೆಗಳಮೇಲೆ ಚಿತ್ರಪಟಗಳಿರಲಿಲ್ಲ. ಹೂವಿನಿಂದ ತುಂಬಿದ ತೋಟ ಹೊಸಮನೆಯಲ್ಲಿ ಕಾಣಿಸಲಿಲ್ಲ. ಆದರೂ, ಅವಳು ಹೊಸಮನೆಯ ವಾತಾವರಣಕ್ಕೆ ತಕ್ಕಂತೆ ಸರಿಹೊಂದಿಕೊಂಡಳು. ತಂದೆಮನೆಯಲ್ಲಿ ತಾನು ಸುಖಸಂಪತ್ತಿನಿಂದ ಬೆಳೆದಳೆಂಬುದನ್ನು ಸ್ವಲ್ಪವೂ ತೋರ್ಪಡಿಸದೆ ಇರತೊಡಗಿದಳು.

ಒಂದುದಿನ, ಲಾಲ್‌ಬಿಹಾರಿಸಿಂಗ್ ಎರಡು ಗುಬ್ಬಿಮರಿಗಳನ್ನು ತಂದು ಅತ್ತಿಗೆಯ ಕೈಗಿತ್ತು, ಪರಮಾನ್ನ ಮಾಡುವಂತೆ ಹೇಳಿದ. ಮೈದುನನ ಕೋರಿಕೆಯಂತೆ, ಆನಂದಿ ಪರಮಾನ್ನ ಸಿದ್ಧಮಾಡಿಟ್ಟಳು. ಆದಿನ ಮನೆಯಲ್ಲಿ ಸ್ವಲ್ಪವೇ ತುಪ್ಪ ಉಳಿದಿದ್ದರಿಂದ; ಅನ್ನಕ್ಕೆ ಹೆಚ್ಚು ತುಪ್ಪ ಹಾಕಲಾಗಲಿಲ್ಲ. ಲಾಲ್‌ಬಿಹಾರಿ ಊಟಕ್ಕೆ ಬಂದು ಕುಳಿತವನು, ಪರಮಾನ್ನವನ್ನು ಕೈಯಲ್ಲಿ ಹಿಡಿದು ನೋಡಿದ. ಸಾಕಷ್ಟು ತುಪ್ಪ ಹಾಕಿರಲಿಲ್ಲವಾಗಿ ಕಂಡುದುದರಿಂದ ಕೋಪದಿಂದ ಅವನು "ಮನೆಯಲ್ಲಿ ತುಪ್ಪವಿರಲಿಲ್ಲವೇನು?" ಎಂದು ಕೇಳಿದ. "ಮನೆಯಲ್ಲಿದ್ದುದಷ್ಟು ಮಾತ್ರವೇ ಅನ್ನಕ್ಕೆ ಹಾಕಿದೆ" ಎಂದಳು, ಆನಂದಿ.

"ಎರಡು ದಿನದಹಿಂದೆ ತಂದ ತುಪ್ಪ ಮುಗಿದುಹೋಯಿತೇನು?" ಎಂದು ಮತ್ತೆ ಬಿಹಾರಿ ಪ್ರಶ್ನಿಸಿದ.

"ಈದಿನ ಅರ್ಧಪೌಂಡಿನಷ್ಟುಮಾತ್ರ ತುಪ್ಪವಿದ್ದಿತು."

ಹಸಿದುಬಂದು ಊಟಕ್ಕೆ ಕುಳಿತ ಲಾಲ್‌ಬಿಹಾರಿಯ ಸಹನೆ ಮೀರಿತು. ಕೋಪದಿಂದ ಅವನು ಉರಿಯತೊಡಗಿದ. ಒಣಗಿದಕಟ್ಟಿಗೆ ಒಲೆಯಲ್ಲಿ ಚಟಚಟನೆ ಉರಿಯುವಂತೆ, "ನಿಮ್ಮಪ್ಪನ ಮನೆಯಲ್ಲಿ ಸದಾ ತುಪ್ಪದ ಹೊಳೆ ಹರಿಯುತ್ತಲೆ ಇರಬಹುದು" ಎಂದು; ಅತ್ತಿಗೆಯನ್ನು ನಿಂದಿಸಿಮಾತನಾಡಿದ.

ಮದುವೆಯಾದ ಹೆಂಗಸು, ಬೈಗಳನ್ನು ಮತ್ತು ಏಟನ್ನು ಸಹಿಸಿಯಾಳು. ತವರುಮನೆಯ ವಿಚಾರವೆತ್ತಿ ನಿಂದಿಸಿ, ಅವಹೇಳನಮಾಡುವವರನ್ನುಮಾತ್ರ ಅವಳು ಸುಮ್ಮನೆಬಿಡುವುದಿಲ್ಲ. ಮೈದುನ ಆಡಿದ ಚುಚ್ಚಿನಮಾತನ್ನು ಕೇಳಿ ಕೆರಳಿದ ಆನಂದಿ, "ನಮ್ಮಪ್ಪನ ಮನೆಯಲ್ಲಿ ಕಟ್ಟಿಗೆಸೀಳುವವರು, ನೀರುಸೇದುವವರು ಮೊದಲಾಗಿ ಎಲ್ಲರೂ ದಿನಂಪ್ರತಿ ಒಂದು ಪೌಂಡು ತುಪ್ಪ ತಿನ್ನುತ್ತಾರೆ" ಎಂದಳು.

ಅತ್ತಿಗೆ ಆಡಿದ ಎದುರುಮಾತು ಕೇಳಿ ಲಾಲ್‌ಬಿಹಾರಿ ಸಿಡಿದೆದ್ದು, "ನಿನ್ನ ನಾಲಿಗೆಯನ್ನು ಸೆಳೆಯಬೇಕೆನಿಸುತ್ತದೆ" ಎಂದು ಕೂಗಾಡಿ, ಅನ್ನದ ತಟ್ಟೆಯನ್ನು ಎಸೆದು ಹುಯಿಲೆಬ್ಬಿಸಿದ.

ಕೋಪದಿಂದ ಕೆಂಪಾದ ಆನಂದಿ, "ಯಜಮಾನರು ಈ ಸಂದರ್ಭದಲ್ಲಿರಬೇಕಾಗಿತ್ತು. ಅವರೆದುರಿಗೆ ನೀವು ನಾಲಿಗೆಯನ್ನು ಸೆಳೆಯಬಹುದಿತ್ತು" ಎಂದಳು.

ಲಾಲ್‌ಬಿಹಾರಿ ಕೋಪವನ್ನು ಅಡಗಿಸಿಕೊಳ್ಳಲಾರದೆಹೋದ. ಕೋಪವೇರಿ ಕೆಂಡವಾಗಿದ್ದಾಗ ಅವನು, ತನ್ನ ಹೆಂಡತಿಯನ್ನು ಪೂರಾ ಥಳಿಸಿದ್ದ. ತನ್ನೊಡನೆ ಪ್ರತಿವಾದಿಸುತ್ತಾ, ಅವಹೇಳನಮಾಡುತ್ತಿದ್ದ ಆನಂದಿಯನ್ನು ನೋಡಿ ಸಹಿಸಲಾರದೆ, ತಾನು ಮೆಟ್ಟಿಕೊಂಡಿದ್ದ ಮರದಮೆಟ್ಟನ್ನು ಹಿರಿದು, ಅವಳ ಕಡೆಗೆ ಒಗೆದು, "ನಿನ್ನನ್ನೂ ನಿನ್ನ ಯಜಮಾನನನ್ನೂ ಒಂದು ಕೈ ನೋಡಿಯೇಬಿಡುವೆ" ಎಂದು ಛಲದಿಂದ ಗರ್ಜಿಸಿದ.

ಆನಂದಿ ಏಟನ್ನು ಸಹಿಸಿಕೊಂಡಳು. ತಲೆಗೆಬೀಳುವ ಪೆಟ್ಟು, ಕೈಗೆಬಿದ್ದು ಹಗರಣವಾಯಿತು. ಕೋಪದಿಂದ, ನೋವಿನಿಂದ ನರಳುತ್ತಾ, ತರತರನೆ ಗಾಳಿಗೆ ಎಲೆಯಾಡುವಂತೆ ನಡುಗುತ್ತಾ, ಕೋಣೆ ಸೇರಿ

ಬಿಟ್ಟಳು. ಅಂದು ತನಗಾದ ಅವಮಾನವನ್ನು ಅವಳು ಸಹಿಸಿಕೊಳ್ಳ ಬೇಕಾಯಿತು. ಗುಣವಂತನಾದ ತನ್ನ ಪತಿಗೆ ಕುಂದು ಬಾರದಿರಲೆಂದು ಅವಳು ಅವಮಾನವನ್ನು ನುಂಗಿಕೊಂಡಳು.

ಶ್ರೀಕಂಠಸಿಂಗ್, ಅಲಹಾಬಾದಿನಿಂದ ಹಳ್ಳಿಯಮನೆಗೆ ಪ್ರತಿ ಶನಿವಾರ ಬಂದುಹೋಗುತ್ತಿದ್ದ. ಆನಂದಿ, ಬಿಹಾರಿ ಇವರಿಬ್ಬರ ಜಗಳ ನಡೆದುದು ಗುರುವಾರ. ಆನಂದಿ, ಶನಿವಾರದವರೆಗೆ, ಪತಿ ಹಿಂದಿರುಗಿ ಬರುವವರೆಗೆ, ಆಹಾರಮುಟ್ಟದೆ ಅವನ ಆಗಮನವನ್ನೇ ಕಾಯುತ್ತಿದ್ದಳು.

ಶನಿವಾರ ಶ್ರೀಕಂಠಸಿಂಗ್ ಹಳ್ಳಿಗೆ ಬಂದ. ಅವನು ಬರುವ ವೇಳೆಗಾಗಲೇ ಸಂಜೆಯಾಗಿತ್ತು. ಹಳ್ಳಿಯವರೊಂದಿಗೆ ಅವನು ಕೋರ್ಟ್, ಕಛೇರಿ ಮೊದಲಾದ ವಿಷಯಗಳನ್ನೆತ್ತಿ ಮಾತನಾಡಿ ಮುಗಿಸುವುದರೊಳಗೆ, ರಾತ್ರಿ ಹತ್ತುಘಂಟೆಯಾಗಿತ್ತು. ಹೊತ್ತು ಮೀರಿಬಂದವನು ಊಟದ ಮನೆಯಕಡೆಗೆ ಬರುತ್ತಿದ್ದ. ಲಾಲ್‌ಬಿಹಾರಿ ಅಣ್ಣನನ್ನು ಕುರಿತು, "ಇನ್ನುಮುಂದೆ ಅತ್ತಿಗೆಗೆ ಬಾಯಿಹಿಡಿದು ಮಾತನಾಡಬೇಕೆಂದು ಎಚ್ಚರಿಸು, ಇಲ್ಲದಿದ್ದಲ್ಲಿ ಕೇಡಾದೀತು!" ಎಂದ. ಈ ಮಧ್ಯೆ ಬಿನೀಮಾಧವಸಿಂಗ್, "ಸೊಸೆಯಾಗಿ ಮನೆಗೆ ಬಂದವಳು, ಗಂಡಸರನ್ನು ಗೌರವದಿಂದ ಕಾಣ ಬೇಕು" ಎಂದು, ಸೇರಿಸಿದ.

ಲಾಲ್‌ಬಿಹಾರಿ "ಅತ್ತಿಗೆ ಗೌರವಸ್ಥಮನೆತನದವಳು, ನಾವೂ ಗೌರವಸ್ಥರೆ!" ಎಂದು, ಬಿನೀಮಾಧವನಾಡಿದ ಮಾತಿಗೆ ತನ್ನ ಮಾತನ್ನು ಸೇರಿಸಿದ.

ವಿಚಾರ ತಿಳಿಯದ ಶ್ರೀಕಂಠಸಿಂಗ್ ಯೋಚಿಸುತ್ತಾ, "ನಡೆದುದಾದರೂ ಏನು? ಮೊದಲು ನನಗೆ ಹೇಳಿ" ಎಂದ.

ಲಾಲ್‌ಬಿಹಾರಿ, "ಏನೂ ಇಲ್ಲ. ಕಾರಣವಿಲ್ಲದೆ ಅತ್ತಿಗೆ ರೇಗಾಡಿದಳು. ಅವಳಿಗೆ ನಮ್ಮ ಮನೆಯಲ್ಲಿ ಗೌರವಾದರಗಳು ಸಲ್ಲುತ್ತಿಲ್ಲವಂತೆ" ಎಂದ.

ಶ್ರೀಕಂಠ ಊಟ ಮುಗಿಸಿ ತನ್ನ ಕೋಣೆಗೆ ಬಂದ. ಕೋಪಗೊಂಡಿದ್ದ ಆನಂದಿ ಅಲ್ಲಿ ಕುಳಿತಿದ್ದಳು. ಶ್ರೀಕಂಠ ಅವಳನ್ನು "ಎಲ್ಲವೂ ಚೆನ್ನಾಗಿರುವುದಷ್ಟೆ?" ಎಂದು ಪ್ರಶ್ನಿಸಿದ. ಆನಂದಿ ಮಾತನಾಡಲಿಲ್ಲ.

ಪುನಃ ಶ್ರೀಕಂಠ, "ಕೆಲವು ದಿನಗಳಿಂದ ನೀನು ಮನೆಯಲ್ಲಿ ಬೆಂಕಿ ಕಾರುತ್ತಿರುವಂತಿದೆ" ಎಂದ.

ಗಂಡನು, ಇತರರೊಂದಿಗೆ ಸೇರಿ, ತನ್ನನ್ನು ಹಳಿಯುತ್ತಿರುವುದನ್ನು ನೋಡಿದ ಆನಂದಿಯ ಶಕ್ತಿ ಕುದಿಯತೊಡಗಿತು. "ನಿಮ್ಮೊಂದಿಗೆ ವಿಷವನ್ನು ಹರಡಿದ ಮನುಷ್ಯ ಇಲ್ಲಿದ್ದಲ್ಲಿ, ಅವನಿಗೆ ಸರಿಯಾದ ಪಾಠ ಕಲಿಸುತ್ತಿದ್ದೆ!" ಎಂದಳು.

ಶಾಂತಸ್ವರದಿಂದ ಶ್ರೀಕಂಠ "ಅಷ್ಟು ಬಿರುಸಾಗಿ ಮಾತನಾಡಬೇಡ, ನಡದುದೇನು? ಎಲ್ಲವನ್ನೂ ಮೊದಲು ಹೇಳು" ಎಂದ.

"ಏನು ಹೇಳಲಿ; ಎಲ್ಲವೂ ನನ್ನ ದುರಾದೃಷ್ಟ! ಆಳಾಗಿ ದುಡಿಯಲಾರದಂತಹವನು ಸಹಾ, ಮೆಟ್ಟಿನಿಂದ ನನ್ನನ್ನು ಹೊಡೆದು ಅವಮಾನಗೊಳಿಸುತ್ತಿರಲಿಲ್ಲ!" ಎಂದಳು.

"ವಿಷದವಾಗಿ ಹೇಳಬಾರದೇಕೆ? ನನಗೆ ಯಾವವಿಚಾರವೂ ಗೊತ್ತಿಲ್ಲ." ಆನಂದಿ, ಮನೆಯಲ್ಲಿ ನಡೆದ ರಾದ್ಧಾಂತವನ್ನೆಲ್ಲಾ ಗಂಡನಿಗೆ ವಿವರಿಸಿದಳು.

ಎಲ್ಲವನ್ನೂ ಕೇಳಿದ ಶ್ರೀಕಂಠ, "ಎಂತಹ ಉದ್ಧಟನಿವನು! ಎಷ್ಟು ಸೊಕ್ಕು ಇವನದು!" ಎಂದು ಉಚ್ಚರಿಸಿದ.

ಆನಂದಿ ಗಂಡನಿಗೆ ಹೇಳುವುದನ್ನೆಲ್ಲಾ ಹೇಳಿ ಮುಗಿಸಿ, ಸ್ತ್ರೀಸ್ವಭಾವ ಸಹಜರೀತಿಯಂತೆ ರೋಧಿಸಲಾರಂಭಿಸಿದಳು. ತಾಳ್ಮೆಯಿಂದ ಶ್ರೀಕಂಠ ಯೋಚನೆಮಾಡುತ್ತಿದ್ದ. ಅವನ ಯೋಚನೆಗೆ ಪೋಷಣೆಯಾಗಿ ಸತಿಯ ಕಂಬನಿ ಕೂಡಿಕೊಂಡಿತು. ರಾತ್ರಿಯೆಲ್ಲಾ ಸಮಾಧಾನವಿಲ್ಲದೆ, ನಿದ್ರಿಸದೆ, ಅತ್ತಿಂದಿತ್ತ ಹೊರಳಾಡಿ ಕಳೆದ. ಮುಂಜಾನೆ, ಬಿನೀಮಾಧವನ ಮುಂದೆ ನಿಂತು, "ಇನ್ನು ಈ ಮನೆಯಲ್ಲಿ ನಾನಿರಲು ಸಾಧ್ಯವಿಲ್ಲ" ಎಂದು ತಿಳಿಸಿಬಿಟ್ಟ.

ಬೇರೆಬೇರೆ ಸಂಸಾರ ಹೂಡುವ ಪದ್ಧತಿಯನ್ನು ಜರಿಯುತ್ತಿದ್ದ ಶ್ರೀಕಂಠ, ಬೇರೆ ಸಂಸಾರ ಹೂಡೋಣ ಎಂದು ಯೋಚಿಸುತ್ತಾ, ತಾನು ತಂದೆಯೊಡನೆ ಇರಲು ಸಾಧ್ಯವಿಲ್ಲವೆಂದು ಹೇಳಿಕೊಳ್ಳುತ್ತಿದ್ದ. ಈ ಉದಾಹರಣೆಯಿಂದ, ಬೋಧಿಸುವುದು ಅತಿಸುಲಭ, ಅನುಸರಿಸುವುದು ಅತಿಕಷ್ಟ ಎಂಬುದು ಸ್ಪಷ್ಟವಾಯಿತು.

ಶ್ರೀಕಂಠ ಇದ್ದಕ್ಕಿದ್ದಹಾಗೆಯೇ ಮಾರ್ಪಾಡಾದುದನ್ನು ಕಂಡು ಆಶ್ಚರ್ಯದಿಂದ, "ಏಕೆ? ಏನಾಯಿತು?" ಎಂದು, ಬಿನೀಮಾಧವ ಕೇಳಿದ.

ಶ್ರೀಕಂಠ, "ನನಗೂ ಆತ್ಮಗೌರವವಿದೆ. ಮನೆಯಲ್ಲಿ ನ್ಯಾಯ ಧರ್ಮಕ್ಕೆ ಪುರಸ್ಕಾರವಿಲ್ಲದಂತಿದೆ. ಹಿರಿಯರನ್ನು ಗೌರವಿಸುವ ಬದಲು, ಅವಮಾನಮಾಡುವ ಕೆಲಸ ನಡೆದಿದೆ. ನಾನು, ಮತ್ತೊಬ್ಬನ ಆಳಾಗಿ ದುಡಿಯುತ್ತಿರುವುದರಿಂದ, ಈ ಹಳ್ಳಿಯ ಮನೆಯಲ್ಲಿ ಸದಾ ಇರಲಾರೆ. ನಾನು ಇಲ್ಲಿಲ್ಲದ ಸಮಯದಲ್ಲಿ, ನನ್ನ ಹೆಂಡತಿಗೆ ಮೆಟ್ಟನಿಂದ ಪೆಟ್ಟು ಬಿತ್ತು. ಕಠಿನಮಾತನ್ನು ಕೇಳಿ ಸಹಿಸಬಲ್ಲೆ, ದಯಾರಹಿತವರ್ತನೆ ನಾನು ನಾನು ಸಹಿಸಲಾರೆ" ಎಂದ.

ಬಿನೀಮಾಧವ ಶಾಂತವಾಗಿ ಎಲ್ಲವನ್ನೂ ಕೇಳಿದ. ಗಂಭೀರದಿಂದ, ಗೌರವದಿಂದ ಸಹಜವಾಗಿ ಮಾತನಾಡುತ್ತಿದ್ದ ಮಗನ ಮಾತನ್ನು ಕೇಳುತ್ತಾ; ಉಪಾಯಗಾಣದೆ, "ಬುದ್ಧಿವಂತನಾದ ನೀನು ಹೀಗೇಕೆ ಮಾತನಾಡುತ್ತಿದ್ದೀಯ! ಹೆಂಗಸಿನ ಮಾತಿಗೆ ಕಿವಿಗೊಡಬೇಡ. ಹೆಂಗಸರೇ ಸಂಸಾರಕ್ಕೆ ಧಕ್ಕೆ ತರುವಂತಹವರು" ಎಂದು ಬುದ್ಧಿಹೇಳಿದ.

"ಹಿಂದೆ ನಾನು ಒಟ್ಟುಸಂಸಾರ ಒಳ್ಳೆಯದೆಂದು ಪ್ರತಿಪಾದಿಸುತಿದ್ದೆ ನಿಜ. ಪಶುವರ್ತನೆ ನನ್ನಿಂದ ಸಹಿಸಲಾಗುವುದಿಲ್ಲ. ಹೆಂಡತಿಯ ಗೌರವ ಮರ್ಯಾದೆ ಕಾಪಾಡಿಕೊಳ್ಳುವ ಭಾರ ನನ್ನದು. ಲಾಲ್ ಬಿಹಾರಿಯ ಕ್ರೂರವರ್ತನೆ ನೆನೆದು, ಅವನನ್ನು ದಂಡಿಸುವೆನೆಂದು ತಿಳಿಯಬಾರದು" ಎಂದ ಶ್ರೀಕಂಠ.

ಬಿನೀಮಾಧವ ಸ್ವಲ್ಪ ಗಡುಸುಧ್ವನಿಯಲ್ಲಿ, "ಲಾಲ್‌ಬಿಹಾರಿ ನಿನ್ನ ಸಹೋದರ. ಅವನು ಹಾದಿತಪ್ಪಿ ನಡೆದಾಗ; ಅವನ ಕಿವಿಹಿಂಡಿ ಬುದ್ಧಿಹೇಳುವುದು ನಿನ್ನ ಕೆಲಸ" ಎಂದ.

"ಲಾಲ್‌ಬಿಹಾರಿ ನನ್ನ ಸಹೋದರನಲ್ಲ; ನಾನು ಹಾಗೆಂದು ಭಾವಿಸಲಾರೆ" ಎಂದ ಶ್ರೀಕಂಠ.

"ಈ ಮಾತನ್ನು ನೀನು ನಿನ್ನ ಹೆಂಡತಿಯ ಸೂಚನೆ ಮೇರೆ ಹೇಳುತ್ತಿರುವೆ" ಎಂದ ಬಿನೀಮಾಧವ.

"ಹಾಗಲ್ಲ; ಇವನ ದುರ್ನಡತೆ, ಸೊಕ್ಕು ನೋಡಿ ಹೇಳುತ್ತಿರುವೆ" ಎಂದ ಶ್ರೀಕಂಠ.

ಬಿನೀಮಾಧವ, ಶ್ರೀಕಂಠ ಸ್ವಲ್ಪಹೊತ್ತು ಗಂಭೀರವಾಗಿ ಕುಳಿತರು. ಲಾಲ್‌ಬಿಹಾರಿಯ ವರ್ತನೆ, ಖಂಡನೀಯವಾದುದೆಂದು ಒಪ್ಪಿಕೊಳ್ಳಲು ಬಿನೀಮಾಧವ ಸಿದ್ಧನಿರಲಿಲ್ಲ. ಈ ಹೊತ್ತಿಗೆ ಹಳ್ಳಿಯ ಜನರು ಬಿನೀಮಾಧವನಿದ್ದ ಸ್ಥಳಕ್ಕೆ ಬಂದು ಸೇರಿದರು. ಹೊಗೆಬತ್ತಿ ಸೇದಲು ಬಂದುದಾದರೂ, ಮನೆಯಲ್ಲಿ ರೂಪತಾಳಿದ ರಾದ್ಧಾಂತ ಎಲ್ಲಿಗೆ ಮುಗಿಯುವುದೋ ನೋಡುವಾ ಎಂದವರು ಸೇರಿದರು. ಸಮ್ಮತ, ಸೌಹಾರ್ದವಿದ್ದ ಬಿನೀಮಾಧವನ ಮನೆಯಲ್ಲಿ ಗಲಭೆಯಾದುದು ಅವರಿಗೆ ಒಳ್ಳೆಯದೆನಿಸಿತು. ಬಿನೀಮಾಧವನ ಏಳಿಗೆಯನ್ನು ಸಹಿಸಲಾರದ ಕುಹಕಿಗಳು, ಶ್ರೀಕಂಠ ತಂದೆಯ ಹಿಡಿತಕ್ಕೆ ಪೂರಾ ಸಿಕ್ಕಿಬಿದ್ದಿರುವುದನ್ನು ಬಹಿರಂಗವಾಗಿ ಆಡಿಕೊಳ್ಳುತ್ತಿದ್ದರು. ಬಿನೀಮಾಧವ ಇದೆಲ್ಲವನ್ನೂ ಸೂಕ್ಷ್ಮವಾಗಿ ಗ್ರಹಿಸಿ, ತನ್ನ ಇಡೀಮನೆಯ ವಿಚಾರ ನೆರೆಹೊರೆಯರ ಬಾಯಿಗೆಬಿದ್ದು ರೂಪತಾಳುತ್ತಿದ್ದುದನ್ನು ತಡೆಯಲು, "ಶ್ರೀಕಂಠ ನಾನೂ ನೀನೂ ದೂರದಲ್ಲಿಲ್ಲ, ಬಿಹಾರಿಯ ವರ್ತನೆ ಖಂಡನೀಯವಾದುದೇ ನಿಜ. ಅವನನ್ನು ಹೇಗಾದರೂ ನೀನು ಶಿಕ್ಷಿಸಿ ದಾರಿಗೆ ತರಬಹುದು" ಎಂದು ಪ್ರಕರಣವನ್ನು ಮುಗಿಸಿದ.

ಶ್ರೀಕಂಠ ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಪ್ರಶಸ್ತಿಗಳಿಸಿಗೊಂಡವ ಅಷ್ಟೆ, ಅನುಭವ ಶಿಕ್ಷಣದಲ್ಲಿ ತರಬೇತಾಗಿರಲಿಲ್ಲ. ಅವನು ತಂದೆ, ತಮ್ಮ, ಹೆಂಡತಿ, ಇವರ ನಡುವೆ ಎದ್ದು ಹಾಯ್ದುಹೋದ ಗಲಭೆಯನ್ನು ತಿಳಿದು, ಸುಧಾರಿಸಿ, ತೀರ್ಮಾನಿಸಿಕೊಳ್ಳದೇ ಹೋದ. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ತಮ್ಮ ವಾದವನ್ನೇ ಹಿಡಿದು ಸಮರ್ಥಿಸುತ್ತಾ ನಡೆಯುವಂತೆ, ತಾನು ಬೇರೆಹೋಗುವುದನ್ನೇ ಹಿಡಿದು ವಾದಿಸುತ್ತಾ ನಡೆದ.

"ಮಗೂ! ಬುದ್ಧಿವಂತರು ಹುಚ್ಚರ ಮಾತಿಗೆ ಕಿವಿಗೊಡರು. ಲಾಲ್‌ಬಿಹಾರಿ ಯುವಕ–ದುಡುಕಿ. ನೀನು ಸುಧಾರಿಸಿದವನು, ಅವನನ್ನು ನೀನು ಕ್ಷಮಿಸಬೇಕಾದುದು ಧರ್ಮ" ಎಂದ ಬಿನೀಮಾಧವ.

ಶ್ರೀಕಂಠ ತನ್ನ ಸಮರ್ಥನೆಯನ್ನು ನಡಿಸಲು ಇಷ್ಟಪಡಲಿಲ್ಲ. "ಈ ಮನೆಯಲ್ಲಿ ನಾನಿರಬೇಕು ; ಇಲ್ಲವೆ ಲಾಲ್‌ಬಿಹಾರಿ ಇರಬೇಕು, ಇಬ್ಬರೂ ಒಟ್ಟಗೆ ಇಲ್ಲಿರಲಾರೆವು" ಎಂದ.

ತಂದೆ ಮತ್ತು ಅಣ್ಣನ ಈ ಸಂಭಾಷಣೆಯನ್ನು ಮರೆಯಲ್ಲಿ ನಿಂತು ಲಾಲ್‌ಬಿಹಾರಿ ಕೇಳುತ್ತಿದ್ದ. ಅಣ್ಣ ಶ್ರೀಕಂಠ, ತನ್ನನ್ನು ದೂರಮಾಡಿ ಹೋಗುವನೆಂದು ಹೇಳುತ್ತಿದ್ದುದನ್ನು ಕೇಳಿ ಬಿಹಾರಿ ಬಲು ನೊಂದ. ಶ್ರೀಕಂಠಸಿಂಗನಿಗೆ ತಮ್ಮನಮೇಲೆ ಬಹಳ ಅಭಿಮಾನವಿತ್ತು. ಒಂದು ಸಾರಿ ಬಿಹಾರಿ ಕುಸ್ತಿ ಪಂದ್ಯಾಟದಲ್ಲಿ ಗೆದ್ದು ವಿಜಯಶಾಲಿಯಾದಾಗ, ಅವನನ್ನು ಶ್ರೀಕಂಠ ಬಲು ಹೆಮ್ಮೆಯಿಂದ ಆಲಂಗಿಸಿಕೊಂಡು, ಅವನ ಸಹಪಾಠಿಗಳಿಗೆಲ್ಲಾ ಹಣವನ್ನೆರಚಿ ಪ್ರೋತ್ಸಾಹಿಸಿದುದನ್ನು ಬಿಹಾರಿ ಮರೆತಿರಲಿಲ್ಲ. ಶ್ರೀಕಂಠ ತಾನು ಖಂಡಿತವಾಗಿ ದೂರಹೋಗುವನೆಂದು ನುಡಿದುದನ್ನು ಕೇಳಿ, ತಡೆಯಲಾರದೆ ಲಾಲ್‌ಬಿಹಾರಿ ಕಣ್ಣೀರು ಕರೆಯುತ್ತಾ, ಪಶ್ಚಾತ್ತಾಪದಿಂದ, ಅತ್ತಿಗೆಯಿದ್ದ ಕೋಣೆಯ ಬಳಿಗೆ ಬಂದು "ಅಣ್ಣ ನನ್ನ ಮೊಗವನ್ನು ಇನ್ನೆಂದಿಗೂ ನೋಡುವುದಿಲ್ಲವೆಂದು ಖಂಡಿತವಾಗಿ ಹೇಳುತ್ತಿದ್ದಾನೆ. ಮುಂಚಿತವಾಗಿ ನಾನೇ ಮನೆಯಿಂದ ದೂರ ಹೊರಟು ಹೋಗುವೆ. ನಾನು ಮಾಡಿದ ಅಪರಾಧಕ್ಕಾಗಿ ನಿಮ್ಮಲ್ಲಿ ಕ್ಷಮೆಬೇಡಿ ಹೋಗಬೇಕೆಂದು ಬಂದಿರುವೆ" ಎಂದು ಹೇಳಿ, ಮುಂದೆ ಮಾತನಾಡಲಾರದೆ, ಕದಡಿದ ಅಂತಃಕರಣವನ್ನು ತೋರಲಾರದೆ ನಿಂತುಕೊಂಡ.

ಲಾಲ್‌ಬಿಹಾರಿ ತಲೆತಗ್ಗಿಸಿ ಕೋಣೆಯಬಳಿ ನಿಂತಿದ್ದಾಗ, ಕೆಂಡದಂತೆ ಕಣ್ಣು ಕೆಂಪು ಮಾಡಿಕೊಂಡಿದ್ದ ಶ್ರೀಕಂಠ, ತಮ್ಮನನ್ನು ಲೆಕ್ಕಿಸದೆ ಒಳಗೆ ಪ್ರವೇಶಿಸಿದ.

ಆನಂದಿ, ಲಾಲ್‌ಬಿಹಾರಿಯ ಪರಿವರ್ತನೆ, ಪಶ್ಚಾತ್ತಾಪವನ್ನು ಗಂಡನಿಗೆ ಹೇಳಿದಳು. ರಾದ್ಧಾಂತವಿಚಾರವನ್ನು ಗಂಡನಿಗೆ ಹೇಳಿ, ಅವನು ಕೋಪಗೊಳ್ಳುವಂತೆ ಮಾಡಿದುದು ತನ್ನ ತಪ್ಪೆಂದು ಆನಂದಿಗೆ ತಿಳಿಯಿತು. ಗಂಡ ಬೇರೆ ಸಂಸಾರಹೂಡುವನೆಂದು ಹಠತೊಟ್ಟಮೇಲೆ, ನಿಜವಾಗಿಯೂ ಆನಂದಿಗೆ ಕೇಡೆನಿಸಿತು. ಸಹನೆಮೀರಿ, ಎಲ್ಲೆಮೀರಿ ಎಂದೂ ವರ್ತಿಸದ ತನ್ನಗಂಡ, ತನ್ನನ್ನು ಅಲಹಾಬಾದಿಗೆ ಎಲ್ಲಿ ಒಯ್ಯುವನೋ

ಎಂದವಳಿಗೆ ಭಯವಾಯಿತು. ಬಿಟ್ಟದಂತೆ ಬೆಳೆದ ಗಲಭೆಯನ್ನು ಪೂರಾ ಅಳಿಸಿಬಿಡಲು ಆನಂದಿಯೇ ದಾರಿ ಕಂಡುಕೊಂಡಳು. ಲಾಲ್‌ಬಿಹಾರಿ ಕಣ್ಣೀರು ಕರೆಯುತ್ತಾ, ಪಶ್ಚಾತ್ತಾಪದಿಂದ ಅಳುತ್ತಿದ್ದಾಗ, ಅವನೊಂದಿಗೆ ಸೇರಿ ಆನಂದಿ ಎಲ್ಲಾ ಒಡಕು ಅಳಿಸಿಹೋಗಲೆಂದು ರೋಧಿಸಲಾರಂಭಿಸಿದಳು. ಗಂಡನನ್ನು ಕುರಿತು ಅಳುಮೊಗದಿಂದಲೇ, "ಬಿಹಾರಿ ಅಳುತ್ತಿದ್ದಾನೆ" ಎಂದು ಸೂಚಿಸಿದಳು.

"ಅಳುತ್ತಿರಲಿ!" ಎಂದು ಕಠಿಣವಾಗಿ ಶ್ರೀಕಂಠ ನುಡಿದುಬಿಟ್ಟ.

"ನಿಮ್ಮೊಡನೆ ಗಲಭೆ ನಡೆದ ಸಂಗತಿ ಹೇಳಬಾರದಿತ್ತು. ಹೋಗಲಿ; ಬಿಹಾರಿಯನ್ನು ಒಳಗೆ ಕರೆಯಿರಿ" ಎಂದಳು, ಆನಂದಿ.

"ಇಲ್ಲ! ಕರೆಯುವುದಿಲ್ಲ" ಎಂದ ಶ್ರೀಕಂಠ.

"ಈಗ ಅವನನ್ನು ಒಳಗೆ ಕರೆಯದಿದ್ದರೆ; ಮುಂದೆ ಪಶ್ಚಾತ್ತಾಪ ಪಡಬೇಕಾದೀತು! ಅವನ ಹೃದಯಕ್ಕೆ ನಿಮ್ಮ ಮಾತು ಪೂರಾ ನಾಟಿ ಬಿಟ್ಟಿದೆ. ಮನೆಯಿಂದ ದೂರ ಹೊರಟುಹೋದಾನು! ಬೇಗ ಅವನನ್ನು ಒಳಗೆ ಕರೆಯಿರಿ!" ಎಂದು ಆನಂದಿ, ಗಂಡನನ್ನು ಒತ್ತಾಯಪಡಿಸಿದಳು.

ಏನು ಹೇಳಿದರೂ, ಹಠವಾದಿ ಶ್ರೀಕಂಠ ಸಗ್ಗಲಿಲ್ಲ. ಉಪಾಯ ತೋರದೆ, ಕೋಣೆಯ ಬಾಗಿಲಬಳಿ ನಿಂತಿದ್ದ ಬಿಹಾರಿ, "ಅಣ್ಣನಿಗೆ ನನ್ನ ನಮಸ್ಕಾರವನ್ನು ಹೇಳಿಬಿಡಿ, ನನ್ನ ಮೊಗವನ್ನು ಎಂದೆಂದಿಗೂ ನೋಡುವುದಿಲ್ಲವೆಂದು ಹೇಳುತ್ತಿದ್ದಾನೆ, ನಾನೇ ನನ್ನ ಮೊಗವನ್ನು ತೋರದೆ ದೂರ ಹೋಗಿಬಿಡುವೆ" ಎಂದು ಹೆಜ್ಜೆಯಿಡುತ್ತಾ ಹೇಳಿದ.

ಆನಂದಿ, ಲಾಲ್‌ಬಿಹಾರಿಯನ್ನು ಬಿಟ್ಟುಗೊಡಲಿಲ್ಲ. ಅವನ ಭುಜದ ಮೇಲೆ ಕೈಯಿಟ್ಟು ನಿಲ್ಲಿಸಿದಳು. ಬಿಹಾರಿ, "ಇಲ್ಲ ಬಿಡಿ; ನಾನು ಹೋಗುವೆ!" ಎಂದು ಅಳುತ್ತ ಹೇಳಿದ.

"ಎಲ್ಲಿಗೆ ಹೋಗುವೆ?" ಎಂದು ಕೇಳಿದಳು ಆನಂದಿ.

"ನನ್ನನ್ನು ಯಾರೂ ಕಾಣದ ಜಾಗಕ್ಕೆ!" ಎಂದ ಬಿಹಾರಿ.

"ಅಲ್ಲಿಗೆ ಹೋಗಲು ನಾನು ಬಿಟ್ಟುಕೊಡುವುದಿಲ್ಲ!" ಎಂದಳು ಆನಂದಿ.

"ನಿಮ್ಮೊಂದಿಗೆ ಈ ಮನೆಯಲ್ಲಿರಲು ನಾನು ಯೋಗ್ಯನಲ್ಲ!" ಎಂದ ಬಿಹಾರಿ.

"ಇಲ್ಲಿಂದ ಮುಂದೆ ಕಾಲಿಡುವುದಿಲ್ಲವೆಂದು ವಚನಕೊಡುವವರೆಗೆ ಬಿಡಲಾರೆ" ಎಂದಳು ಆನಂದಿ.

"ಅಣ್ಣ ನನ್ನನ್ನು ಕ್ಷಮಿಸಿದನೆಂದು ಹೇಳುವವರೆಗೆ ನಿಮಗೆ ನಾನು ವಚನಕೊಡಲಾರೆ" ಎಂದ ಬಿಹಾರಿ.

"ನಿನ್ನಲ್ಲಿ ನನಗೆ ಯಾವ ವಿಧವಾದ ಅಸೂಯೆಯಿಲ್ಲ, ಹೋಗಬೇಡ" ಎಂದು ಆನಂದಿ, ಬಿಹಾರಿಗೆ ಸಮಾಧಾನ ಹೇಳಿದಳು.

ಶ್ರೀಕಂಠನ ಹೃದಯ ಕನಿಕರದಿಂದ ಪರಿವರ್ತಿಸಿತು. ಅವನು ಕೋಣೆಯಿಂದ ಹೊರಗೆ ಬಂದು, ಲಾಲ್‌ಬಿಹಾರಿಯನ್ನು ಬಲವಾಗಿ ಬಾಚಿ ತಬ್ಬಿಕೊಂಡ. ಅಣ್ಣ-ತಮ್ಮದಿರು ಘಟ್ಟಿಯಾಗಿ ತಬ್ಬಿಕೊಂಡು, ಪರಸ್ಪರ ಕಣ್ಣೀರು ಸುರಿಸಿದರು. ಅಳುತ್ತ ಅಳುತ್ತ, ಲಾಲ್‌ಬಿಹಾರಿ, "ಅಣ್ಣ! ನನ್ನನ್ನು ಯಾವರೀತಿಯಲ್ಲಾದರೂ ಶಿಕ್ಷಿಸು ಬಾಧಕವಿಲ್ಲ; ಮೊಗವನ್ನು ಮಾತ್ರ ಎಂದೆಂದಿಗೂ ನೋಡುವುದಿಲ್ಲವೆಂದು ಹೇಳಬೇಡಿ" ಎಂದು ಬೇಡಿಕೊಂಡ.

"ನಡೆದುದನ್ನು ಮರೆಯೋಣ! ತೊರೆಯೋಣ! ದೇವರು ಎಂದೆಂದಿಗೂ ಇಂತಹ ಕ್ಲೇಶಕರವಾದ ಪ್ರಸಂಗ ತಾರದಿರಲೆಂದು ಕೋರೋಣ!" ಎಂದು, ಶ್ರೀಕಂಠ ತಮ್ಮನಿಗೆ ಸಮಾಧಾನಹೇಳಿದ.

ಬೆನೀಮಾಧವ ಆಗ ಮನೆಯೊಳಗೆ ಬಂದು, ಅಣ್ಣ-ತಮ್ಮದಿರು ಪರಸ್ಪರ ಬಾಹುಬಂಧನದಲ್ಲಿದ್ದು, ಸಂತೋಷಪಡುತ್ತಿದ್ದುದನ್ನನೆ ನೋಡಿ, "ಆನಂದಿ, ಉಚ್ಛಮನೆತನದ ಹೆಣ್ಣುಮಗಳು ವರ್ತಿಸುವಂತೆ ನೀನು ವರ್ತಿಸಿದ್ದೀಯೆ; ಇತರರು ನಾಶಮಾಡುವುದನ್ನು ಹೆಣ್ಣುಮಕ್ಕಳು ವೃದ್ಧಿಪಡಿಸುತ್ತಾರೆಯೆನ್ನುವುದು ನಿಜ" ಎಂದು, ಪ್ರಶಂಸಿಸಿ ಮಾತನಾಡಿದ.

ಗೌರೀಪುರದಲ್ಲಿ ಆನಂದಿ ಎಲ್ಲಾ ತಾಯಿ-ಅತ್ತೆಯರ ಮಾದರಿಯಾಗಿ, ಪುತ್ತಳಿಯಾಗಿ ಗೌರವಗಳಿಸಿಕೊಂಡಳು.

# ಮುಗಿಯದ ಕಾಗದ

ಪಾರ್ವತಿ, ಆಗ ತಾನೇ ವಿಶ್ರಾಂತಿಪಡೆಯುತ್ತಿದ್ದಳು. "ಅಕ್ಕಾ! ನನಗೊಂದು ಕಾಗದ ಬಂದಿದೆ. ಬರಹ ನೋಡಿದರೆ ಭಾವ ಬರೆದಂತಿದೆ!" ಎನ್ನುತ್ತಾ, ಪಾರ್ವತಿಯ ಚಿಕ್ಕತಮ್ಮ ಗೋಪಿ ಕಾಗದವನು ಒಗೆದ.

"ಕಾಗದ ಬಂದಿದೆಯೋ; ನಿಮ್ಮ ಭಾವ ಬರೆದಿದ್ದಾರೆಯೋ!" ಎನ್ನುತ್ತಾ, ಪಾರ್ವತಿ ಅದನ್ನು ಕೈಗೆತ್ತಿಕೊಂಡಳು. ಅಕ್ಕನಾಡಿದ ಮಾತು, ಅವಳ ಮೊಗದಲ್ಲಿ ಮಿಂಚಿ ಮೂಡಿದ ಆಶ್ಚರ್ಯರೇಖೆಯನ್ನು ಗೋಪಿ ಕಂಡುಕೊಂಡ. ಅವಳಿಗೆ ಮದುವೆಯಾಗಿ ಆರುವರ್ಷವಾಗಿತ್ತು. ಆರು ವರ್ಷದಲ್ಲಿ ಒಂದುಸಾರಿಯಾದರೂ ಪತಿದೇವ ಸತಿಗೆ ಪತ್ರ ಬರೆದಿರಲಿಲ್ಲ. ಪಾರ್ವತಿ, ತಾಯಿಮನೆಗೆ ಹೆರಿಗೆಗಾಗಿ ಬಂದವಳು, ಒಂದು ಗಂಡು ಮಗುವನ್ನು ಹೆತ್ತಳು. ಆವಳ ಚೊಚ್ಚಿಲಮಗನಿಗೆ ಒಂದು ವರ್ಷ ತುಂಬಿತು. ಪಾರ್ವತಿಯ ತಾಯಿ, ಮಗಳ ಮೇಲಿನ ಪ್ರೀತಿಯಿಂದಲೋ ಅಥವಾ ಮಗಳು ಎಳೆಗೂಸೊಂದಿಗೆ ಕಷ್ಟಪಡುವುದು ಬೇಡವೆಂತಲೋ ಮಗಳನ್ನು ತನ್ನ ಬಳಿಯಲ್ಲಿಯೇ ನಿಲ್ಲಿಸಿಕೊಂಡಿದ್ದಳು. ಸತಿ, ತನ್ನಿಂದ ದೂರವಾಗಿ ತಾಯಿಮನೆಯಲ್ಲಿ ಹೆಚ್ಚುದಿನ ಉಳಿದುಕೊಂಡುದುದಕ್ಕೆ ಪತಿ ದೇವನೂ ಆಕ್ಷೇಪಿಸಲಿಲ್ಲ. ಈ ಬಗ್ಗೆ ಸುದ್ದಿಯನ್ನು ಕುರಿತು ಪಾರ್ವತಿಗೂ ಬರೆದಿರಲಿಲ್ಲ. ಪಾರ್ವತಿ ಬಹು ದಿನಗಳವರೆಗೆ ಯಾವ ಗೋಜನ್ನೂ ಹಚ್ಚಿಕೊಳ್ಳದೆ, ತವರು ಮನೆಯಲ್ಲಿ ನಿಂತುಬಿಟ್ಟಳು. ಈ ನಡುವೆ ಪತಿ ದೇವ ಮಾವನವರಿಗೆ ಆಗಾಗ್ಗೆ ಕಾಗದ ಬರೆಯುತ್ತಿದ್ದರು. ಈ ಕಾಗದಗಳ ಓಡಾಟ, ಪರಸ್ಪರ ಯೋಗಕ್ಷೇಮ ವಿಚಾರ ಕುರಿತು ಮುಗಿಸಿದಂತಹವು ಗಳಾಗಿದ್ದವು.

ತಂದೆ, ಅಳಿಯನಿಂದ ಬಂದ ಕಾಗದವನ್ನು ಮಗಳಿಗೆ ಕೇಳಿಸುವ ಹಾಗೆ ಓದಿ ಹೇಳಿದರೂ, ಪಾರ್ವತಿ ತನ್ನ ಕುತೂಹಲವನ್ನು ಅವರಿಗೆ ತೋರ್ಪಡಿಸುತ್ತಿರಲಿಲ್ಲ. ಪತಿದೇವನೆಂದರೆ ಪಾರ್ವತಿಗೆ ತಿರಸ್ಕಾರವೆಂದರ್ಥ ವಲ್ಲ. ಅವಳು ಒಂದು ಬಗೆಯ ತೊಡಕಿನಲ್ಲಿ ಸಿಕ್ಕಿಕೊಂಡಿದ್ದಳಾದ

ಕಾರಣ, ತನ್ನ ಮನಸ್ಸಿನ ಒಳಭಾವನೆಯನ್ನು ಇತರರಿಗೆ ತೋರ್ಪಡಿಸುತ್ತಿರಲಿಲ್ಲ. ಈ ತೊಳಲಾಟಕ್ಕೆ ಕಾರಣವಿಷ್ಟೆ; ಪಾರ್ವತಿ ವಯಸ್ಸು ಮೀರಿದವನನ್ನು ಮದುವೆಯಾಗಿದ್ದಳು. ಇತರರು ತನ್ನನ್ನು ಹಾಸ್ಯಮಾಡಿ, ಹೃದಯ ಇರಿಯುವರೆಂದು ಅವಳು, ತನ್ನ ಪ್ರೀತಿಯನ್ನು; ಪತಿಯ ಹಂಬಲವನ್ನು ತನ್ನಲ್ಲಿಯೇ ಅಡಗಿಸಿಕೊಂಡಿದ್ದಳು.

ಭಾವನಿಂದ ಒಂದು ಕಾಗದವನ್ನು ಅಕ್ಕನಿಗೆ ಕೊಡುವಾಗ ಗೋಪಿ, ಅವಳನ್ನು ಹಾಸ್ಯಮಾಡದೆ ಇರಲಿಲ್ಲ. "ಅಕ್ಕಾ! ಭಾವನಿಗೆ ಇದ್ದಕ್ಕಿದ್ದ ಹಾಗೆ ಪ್ರೇಮಪತ್ರ ಬರೆಯುವಷ್ಟು ಪ್ರಾಯ ಬಂದುಬಿಟ್ಟಿತೇ!" ಎಂದು ಕೇಳಿಯೇಬಿಟ್ಟ. ಈ ಮಾತು ಕೇಳಿ ಪಾರ್ವತಿ ಬೆದರಿದಳು. ಬಂದ ಕಾಗದವನ್ನು ಓದಲು ಅವಕಾಶವಿಲ್ಲದೆ, ಅವಳು ಗೊಂದಲದಲ್ಲಿ ಸಿಕ್ಕಿ ಬಿದ್ದಳು

*    *    *    *

ಪಾರ್ವತಿ ಸುರಸುಂದರಿ, ಹೆಸರಿಗೆ ಸರಿಹೋಲುವಂತಹ ರೂಪಸಿ. ಸ್ತ್ರೀಗೆ ಸೌಂದರ್ಯವೇ ಭೂಷಣ. ಆದರೆ ಸ್ತ್ರೀಯು ಸೌಂದರ್ಯದಿಂದಲೇ ಪೂರ್ಣಳಾಗುವುದಿಲ್ಲ.

ಪಾರ್ವತಿಯ ತಂದೆ ಮಧ್ಯಮ ವರ್ಗದ ಸಂಸಾರಕ್ಕೆ ಸೇರಿದವರು. ಅವರು ತುಂಬಿದ ಮನೆಯ ಯಜಮಾನರು. ಹೆಣ್ಣುಮಕ್ಕಳ ಮದುವೆಗಾಗಿ, ಗಂಡುಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಹೆಚ್ಚು ಖರ್ಚುಮಾಡಿ ಬರಿಗೈ ಮಾಡಿಕೊಂಡಿದ್ದರು. ಪಾರ್ವತಿ ಅವರಿಗೆ ಕೊನೆಯ ಮಗಳು. ಈ ಅವಿವಾಹಿತ ಕನ್ಯೆಗೆ ವರನನ್ನು ಹುಡುಕಿ, ಹೊರೆಯನ್ನು ಇಳಿಸಿಕೊಳ್ಳುವ ಬಗೆ ತಿಳಿಯದೆ ಅವರು ಚಿಂತಿಸುತ್ತಿದ್ದರು. ಚಿಂತೆಯಲ್ಲಿದ್ದಾಗ, "ಇವಳಿಗೆ ಮದುವೆ ಮಾಡಬೇಕು, ಸಾಂಸಾರಿಕ ತಾಪತ್ರಯ ನನಗೆ ತೀರಿದಂತೆಯೇ ಕಾಣದು" ಎಂದು; ಬೇಸರ ಪಡುತ್ತಿದ್ದಾಗ, ದೂರದ ಬಂಧುವೊಬ್ಬ ಇವರಿಗೆ ಪತ್ರ ಬರೆದ. ಬರೆದವನು, ತಾನು ಮೊದಲನೆಯ ಹೆಂಡತಿಯನ್ನು ಕಳೆದುಕೊಂಡನೆಂತಲೂ, ಪುನಃ ಮದುವೆಯಾಗಲು ಇಚ್ಛೆಯಿದೆಯೆಂತಲೂ, ತನಗೆ ಪಾರ್ವತಿಯನ್ನು ಕೊಡಲೊಪ್ಪಿದರೆ ಹಿರುಗಿ ಸಂಸಾರ ಜರುಗಿಸಲು ಸಹಾಯವಾದೀತೆಂದೂ ಬರೆದು ಬಿನ್ನವಿಸಿಕೊಂಡಿದ್ದ.

ಪಾರ್ವತಿಯ ತಂದೆ ಈ ವರನ ವಿಚಾರವಾಗಿ ಯೋಚಿಸಲು, ಅವನು ಶ್ರೀಮಂತನೆಂದು, ಅವನಿಗೆ ಮೊದಲನೆಯ ಹೆಂಡತಿಯಿಂದ ಮಕ್ಕಳಿಲ್ಲ ವೆಂದೂ ತಿಳಿದು ಬಂತು.

ನವ ವರ, ಹಿರಿಯ ಮನೆತನದವನು ಮತ್ತು ಒಳ್ಳೆಯ ನಡೆವಳಿಕೆ ಯವನು ಎಂದು, ಪಾರ್ವತಿಯ ತಂದೆಗೆ ತಿಳಿದುಬಂದಿತು. ಈ ಶ್ರೀಮಂತ ವರನಿಗೆ ಹೊಸ ಹೆಣ್ಣು ಸಿಕ್ಕಿ, ನಿರುತ್ಸಾಹ ತುಂಬಿದ ಅವನ ಮನೆಯಲ್ಲಿ ಉತ್ಸಾಹ ತೂರುವ ಹೆಣ್ಣಿನ ಅವಶ್ಯಕತೆಯಿದೆಯೆಂದು, ಪಾರ್ವತಿಯ ತಂದೆ ತಿಳಿದರು. "ಈ ವರನಿಗೆ ವಯಸ್ಸು ಮೀರಿದೆಯಲ್ಲಾ!" ಎಂದವರು, ಒಪ್ಪಿಗೆಕೊಡಲು ಹಿಂಜರಿಯುತ್ತಿದ್ದರು.

"ನಿಮಗೆ ಎಲ್ಲಾ ಭಾಗದಲ್ಲೂ ಯೋಗ್ಯನಿರುವ ಆಳಿಯನೆಲ್ಲಿ ಸಿಗುತ್ತಾನೆ!" ಎಂದು, ಪಾರ್ವತಿಯ ತಾಯಿ ಗಂಡನನ್ನು ಹೀಯಾಳಿ ಸುತ್ತಾ ಮದುವೆಗೆ ಒಪ್ಪುವಂತೆ ಮಾಡಿದಳು.

ಈ ಒಡಂಬಡಿಕೆಗೆ ಪಾರ್ವತಿ ತನ್ನ ಅಭಿಪ್ರಾಯ ಸೂಚಿಸಿದಳೇನು? ಅವಳ ಮನಸ್ಸಿನ ಹೊಯ್ದಾಟವನ್ನು ತಿಳಿದುಕೊಳ್ಳಲು ಯಾರೂ ಸಿದ್ಧರಿರ ಲಿಲ್ಲ. ಹಿಂದೂ ಮನೆತನದಲ್ಲಿ, ಹೆಣ್ಣು ತನಗೊಪ್ಪಿದ ಗಂಡನನ್ನು ಮದುವೆ ಯಾಗುವ ಪದ್ಧತಿ ಆಗಿನ್ನೂ ಬೆಳೆದು ಬಂದಿರಲಿಲ್ಲ. ಹಿರಿಯರೇ ಯೋಗ್ಯ ರಾದವರನ್ನು ಆರಿಸಿ ಮದುವೆಮಾಡಿಬಿಡುತ್ತಿದ್ದರು.

ಈ ಮದುವೆಯ ವಿಚಾರದಲ್ಲಿ ಎಲ್ಲರಿಗೂ ಹಕ್ಕಿರುವಂತೆ ಮನಸ್ಸಿಗೆ ಮಾತನಾಡಿಕೊಳ್ಳುತ್ತಿದ್ದರು. ಪಾರ್ವತಿಯನ್ನು ಅಲ್ಲಗಳೆಯುತ್ತಾ, "ಇನ್ನೂ ಬೆಳೆದ ಹುಡುಗಿಯನ್ನು ಮದುವೆಮಾಡಿಕೊಡದೆ ಮನೆಯಲ್ಲಿರಿಸಿಕೊಂಡಿ ದ್ದಾರೆ!" ಎಂದು, ಅಪವಾದವನ್ನು ಹರಡುತ್ತಿದ್ದರು. ಪಾರ್ವತಿಗೆ ಗಂಡ ಸಿಕ್ಕಿದುದು, ಮದುವೆ ನಿಶ್ಚಯವಾದುದು, ಅವಳ ತಾಯಿಗೆ ಮೇಲೆನಿಸಿ ಹಗುರವಾಯಿತು. ಪಾರ್ವತಿಯ ತಂದೆಯೂ ಸಹ "ದೇವರು ಸುಲಭ ವಾಗಿ ಪಾರ್ವತಿಗೆ ಗಂಡನನ್ನು ದಯಪಾಲಿಸಿದ. ಅವನು ಕರುಣೆ ತೋರದಿದ್ದಲ್ಲಿ ನಾನು ಎಲ್ಲೆಲ್ಲಿಯೋ ಅಲೆಯಬೇಕಾಗುತ್ತಿತ್ತು. ಅಲ್ಲದೆ, ನನ್ನಲ್ಲಿ ಅಷ್ಟು ಹಣವೆಲ್ಲಿದೆ; ವರಶೋಧನೆ ಮಾಡುತ್ತಾ ಉಳಿಯಲಿಕ್ಕೆ?" ಎಂದು ಯೋಚಿಸಿದರು. ಹೆಂಡತಿ ಒಪ್ಪಿಗೆ ಕೊಟ್ಟುದುದರಿಂದ ಗಂಡನಿಗೆ

ಸಮಾಧಾನವಾಯಿತು. ಏನಾದರೇನು? ಗೊತ್ತಾದ ವರನಿಗೆ ಪಾರ್ವತಿಯನ್ನು ಕಟ್ಟಿ, ಮದುವೆಯು ಪೂರೈಕೆ ಮುಗಿಸಬೇಕೆಂದಿದ್ದ ತಂದೆ-ತಾಯಿಗಳಿಗೆ ಅವಸರವಾಗಿದ್ದಿತೇ ಹೊರತು, ಪಾರ್ವತಿಗೆ ತನ್ನ ಮದುವೆಯ ವಿಚಾರದಲ್ಲಿ ಮಾತನಾಡಿ ಅಭಿಪ್ರಾಯ ಸೂಚಿಸಲು ಅಧಿಕಾರವೇ ಇರಲಿಲ್ಲ.

ಈ ಒತ್ತಾಯದ ಮದುವೆಯಿಂದ ಪಾರ್ವತಿಯ ಹೃದಯಕ್ಕೆ ಯಾವ ಬಗೆಯ ತೃಪ್ತಿಯೂ ಆಗಲಿಲ್ಲ. ಅವಳು ತನ್ನ ಮದುವೆಯ ನಿಶ್ಚಯವನ್ನು ನಿರ್ಧರಿಸಿದ ಬಗೆ ಹೀಗೆ—"ತಂದೆ ಮದುವೆ ಮಾಡುವೆಯೆನ್ನುತ್ತಾರೆ. ತಾಯಿ ನಡೆಯಲಿ ಎನ್ನುತ್ತಾರೆ. ಅಕ್ಕ-ತಂಗಿಯರು, ಅಣ್ಣ-ತಮ್ಮಂದಿರು ಯಾರೂ ವಿರೋಧವಾಗಿ ಮಾತನಾಡುತ್ತಿಲ್ಲ. ಇನ್ನು ನನ್ನ ಅಡ್ಡಿಯೇನು?" ಎಂದು, ಪಾರ್ವತಿ ಸುಮ್ಮನಾಗಿ ಸಮ್ಮತಿ ಸೂಚಿಸಿದಳು. ಮುಖ್ಯವಾಗಿ, ಪಾರ್ವತಿ ವಿಚಾರದಲ್ಲಿ ಮಾತನಾಡಲು ಇತರರಿಗೆ ಆಸಕ್ತಿಯಿರಲಿಲ್ಲ. ಪಾರ್ವತಿಗೂ ತನ್ನ ವಿಚಾರವನ್ನು ಇತರರೊಂದಿಗೆ ಯೋಚಿಸಲು ಮನಸ್ಸಿರಲಿಲ್ಲ.

ಮದುವೆಯ ವೇಳೆ ಕೂಡಿತು. ಸಂಭ್ರಮ ಭರದಿಂದ ನಡೆಯಿತು. ಹಿಂದಿನ ರಾತ್ರಿ ಪಾರ್ವತಿಯ ಅಕ್ಕ, ತಂಗಿಗೆ ಶೃಂಗಾರಮಾಡುತ್ತಿದ್ದರು. ಪಾರ್ವತಿಯ ಶೋಭಾರಾಶಿ ಹೊಸಬಟ್ಟೆಯಿಂದಲೂ ವಿಧವಿಧವಾದ ಒಡವೆಗಳಿಂದಲೂ ಬೆಳಗುತ್ತಿತ್ತು. ಪೂರ್ಣವಾಗಿ ತಂಗಿಯನ್ನು ಶೃಂಗರಿಸಿದ ಮೇಲೆ, ಅಕ್ಕ ತಂಗಿಯನ್ನು ನೋಡುತ್ತಾ, ತಂಗಿಯ ಚಲುವನ್ನು ಕಂಡು ಹಿಡಿಸಲಾರದಷ್ಟು ಆಶ್ಚರ್ಯದಿಂದ, "ಪಾರ್ವತಿ ನೀನು ಅತಿ ಸುಂದರಿ! ಹೀಗಿದ್ದು................ಇಜ್ಜೋಡಿಯಾಗಬಾರದಿತ್ತು. ಎರಡನೆ ವರನ ಕೈ ಹಿಡಿಯುವ ಕಳಂಕ, ಅಪಕೀರ್ತಿ ನಿನಗೆ ಬಾರದೇಯಿದ್ದಿದ್ದರೆ ಒಳ್ಳೆತಾಗುತ್ತಿತ್ತು" ಎಂದುಬಿಟ್ಟಳು.

ಈ ಮೊದಲನೆಯ ಏಟು, ಪಾರ್ವತಿಯ ಹೃದಯಕ್ಕೆ ನಾಟದೆ ಇರಲಿಲ್ಲ. ವಯಸ್ಸು ಮೀರಿದ ವರನ ಕೈಗೆ, ಅತಿ ಸುಂದರಳಾದ ಕನ್ಯೆ ಸಿಕ್ಕಿದಲ್ಲಿ, ಅಯೋಗ್ಯನ ಕೈಗೆ ರೂಪು, ಯೌವನ, ಸಿಕ್ಕಿದಂತಾಗಿ ಅನ್ಯಾಯವಾಗುವುದೆಂದು ಪಾರ್ವತಿಗೆ ಮೊದಲಾಗಿ ತಿಳಿಯಿತು. "ಎರಡನೆ ಹೆಂಡತಿ"

ಎಂದು ಜನರು ಕೈ ತೋರಿ ಚುಚ್ಚುವ ನುಡಿ, ಎಂದೆಂದಿಗೂ ಅಳಿಸಲಾಗದ ಮಾತೆಂದು ಪಾರ್ವತಿಗೆ ತೋರಿತು.

ತಾನು ವಯಸ್ಸಾದ ವರನ ಕೈ ಹಿಡಿಯಬೇಕೆಂದು ಪಾರ್ವತಿಗೆ ಗೊತ್ತಾದಮೇಲೂ ಅವಳು ಗೊಣಗಲಿಲ್ಲ. ಗೊಣಗದಿರಲು ಕಾರಣ—ಪಾರ್ವತಿಯಂತೆ ಅವಳ ಎರಡನೆಯ ಅಕ್ಕ—ಎರಡನೆ ಹೆಂಡತಿಯೆನಿಸಿ ಪತಿಗೃಹದಲ್ಲಿ ಸುಖವಾಗಿದ್ದಳು. ಅವಳಿಗೆ ಪತಿಗೃಹದಲ್ಲಿ ಪೀಡೆ, ಬೇಗೆಯಿರಲಿಲ್ಲ. ಅವಳು ತನ್ನ ಕಷ್ಟವನ್ನು ತಾಯೊಂದಿಗೆ ಎಂದೂ ಹೇಳಿಕೊಂಡಿರಲಿಲ್ಲ. ಈ ಕಾರಣದಿಂದ ಎರಡನೆ ಹೆಂಡತಿ ಎನಿಸಿಕೊಳ್ಳುವುದರಲ್ಲಿ, ತಪ್ಪಿಲ್ಲ, ಪ್ರಮಾದವಿಲ್ಲ, ಎಂದು ಈ ಬಗೆಯ ಕೊರಗನ್ನು ಪಾರ್ವತಿ ಸರಿಸಿಬಿಟ್ಟಿದ್ದಳು. ಆದರೆ, ಅಕ್ಕನ ಹೃದಯಾಂತರಾಳದಿಂದ ಹೊರಟುಬಂದ ಮಾತುಗಳು, ಪಾರ್ವತಿಯನ್ನು ಚನ್ನಾಗಿ ಇರಿದುಬಿಟ್ಟಿತು.

ವರಪೂಜೆಯ ದಿನ, ಪಾರ್ವತಿ, ಪತಿಯ ಮೊಗವನ್ನು ನೋಡಲಾಗಲಿಲ್ಲ. ವರ-ವಧು ಎದುರುನಿಂತು, ಪರಸ್ಪರ ಪುಷ್ಪಮಾಲೆಯನ್ನು ಅದಲುಬದಲು ಮಾಡಿಕೊಂಡ ಮೇಲಲ್ಲವೆ ಮುಖಾವಲೋಕನವಾಗುವುದು? ಪತಿಯನ್ನು ನೋಡಿದಕೂಡಲೇ ಪಾರ್ವತಿಯ ಹೃದಯ ಇಳಿದುಹೋಯಿತು. ಅವನ ಮುಖವರ್ಚಸ್ಸಿನಲ್ಲಿ, ಪಾರ್ವತಿಯನ್ನು ಆಕರ್ಷಿಸುವಂತಹ ಯಾವ ಗುಣವೂ ಇರಲಿಲ್ಲ. ಬೋಳುತಲೆಯ ಬೊಜ್ಜುಮನುಷ್ಯನು, ಪಾರ್ವತಿಗೆ ಸರಿಹೋಲುವನೇನು? ವರನಿಗೆ, ಶ್ರೀಮಂತಿಕೆ ಆಡಂಬರ ಬೇಕಾದಷ್ಟಿತ್ತು. ಪಾರ್ವತಿಗೆ ಯಾವುದೂ ಹಿಡಿಸಲಿಲ್ಲ. ನಿರಾಶೆಯಿಂದವಳು, ಹಾಗೊಮ್ಮೆ ಹೀಗೊಮ್ಮೆ ಪತಿಯ ಮೊಗವನ್ನು ಈಕ್ಷಿಸುತ್ತಿದ್ದಳು. ಅಕ್ಕನಾಡಿದ ಮಾತು ಪುನಃ ಪುನಃ ಅವಳ ಹೃದಯವನ್ನು ಚುಚ್ಚುತ್ತಿತ್ತು.

ಮದುವೆ ಮುಗಿಯಿತು. ಮಂಗಲ ಚಿಹ್ನೆ ಕೊರಳಿಗೆ ಕಟ್ಟಿಸಿಕೊಂಡ ಮೇಲೆ, ಪಾರ್ವತಿ ಪತಿಯೊಂದಿಗೆ ಹಿರಿಯರಿಗೆ ನಮಸ್ಕಾರ ಮಾಡಿದಳು. ಅಕ್ಕನ ಗಂಡನಿಗೆ ಪಾರ್ವತಿಯ ಗಂಡ ನಮಸ್ಕಾರಮಾಡಲು ಬಾಗಿದಾಗ, ಅವರು ತಡೆದು, "ನೀವು ಹಿರಿಯರು, ನಮಸ್ಕಾರ ಕೂಡದು" ಎಂದು, ತಡೆದು ನಿಲ್ಲಿಸಿದರು. ಮೊದಲೇ ಗಾಯಕ್ಕೆ ಉಪ್ಪು ಬೆರಸಿದಂತೆ ಅಕ್ಕ ಮಾತನಾಡಿದ್ದಳು. ಭಾವ ತನಗಿಂತಲೂ ನವ ವರ ಹೆಚ್ಚಿನ ವಯಸ್ಸಿನವ

ನೆಂದು ಬಹಿರಂಗವಾಗಿ ತೋರಿದರು. ಗಾಯದ ಮೇಲೆ ಗಾಯವಾದಂತಾಗಿ, ತನ್ನ ಪತಿಗಿಂತ ಭಾವ ಚಿಕ್ಕವರು, ಎಂದು ಪಾರ್ವತಿಗೆ ತಿಳಿಯಿತು.

ಮೊಗ ಕೆಳಗೆ ಮಾಡಿಕೊಂಡು, ಕೊರಳಹಾರದೊಂದಿಗೆ ಪಾರ್ವತಿ ಒಳಮನೆಗೆ ನಡೆದಳು. ಹತ್ತಿರ ನಿಂತಿದ್ದವರ ಪೈಕಿಯೊಬ್ಬಳು, "ಅಯ್ಯೊ ಇವಳೆಂತಹ ದುರ್ದೈವಿ! ಇನ್ನು ಉಪಾಯವಿಲ್ಲ" ಎಂದಳು. ಇನ್ನೊಬ್ಬ ವಯಸ್ಸಾದ ಹೆಂಗಸು, ಈ ಮಾತನ್ನು ತಳ್ಳಿಹಾಕಿ "ಏನು ಅನ್ಯಾಯವಾಯಿತು? ನೋಡುತ್ತಾ ಇರಿ, ಪಾರ್ವತಿ ಎಲ್ಲರಿಗಿಂತಲೂ ಅದೃಷ್ಟಶಾಲಿನಿಯಾಗುತ್ತಾಳೆ!" ಎಂದಳು. ಹೃದಯಕ್ಕೆ ಏಟಿನಮೇಲೆ ಏಟು ಬೀಳುತ್ತಿದ್ದುದನ್ನು ಪಾರ್ವತಿ ನೆನೆಯುತ್ತಾ ನೊಂದುಕೊಂಡಳು.

ಮನಶ್ಶಾಂತಿಯಿಲ್ಲದೆ ಪಾರ್ವತಿ ಕಣ್ಣೀರಿಡುತ್ತಿದ್ದಳು. ಸಿಕ್ಕಿದವರು ಸಿಕ್ಕಿದಹಾಗೆ ತನ್ನನ್ನು ಇರಿಯುತ್ತಿದ್ದುದು ಅವಳಿಗೆ ಕೇಡೆನಿಸಿತು. ಈ ಮಾತುಗಳನ್ನು ಕೇಳಿ ಕೇಳಿ ಎಲ್ಲರ ಮೇಲೆಯೂ ಅವಳಿಗೆ ಕೋಪಬಂದಿತು. ಹೂವಿನಂತೆ ಮೃದುವಾಗಿದ್ದ ಅವಳ ಹೃದಯ ಕಲ್ಲಿನಂತೆ ಕಠೋರವಾಗಿ ಮೃದುತನವನ್ನು ಕಳೆದುಕೊಂಡಿತು. ಮಮತೆ, ಪ್ರೀತಿ, ಕರುಣೆ, ಭಕ್ತಿ, ವಾತ್ಸಲ್ಯ ತುಂಬಿದ ಹೃದಯ ಗಡುಸಾದಮೇಲೆ, ಪಾರ್ವತಿ ಯಾರೊಂದಿಗೂ ಹೆಚ್ಚು ಮಾತನಾಡುತ್ತಿರಲಿಲ್ಲ. ಪ್ರಪಂಚ, ಸ್ವಾರ್ಥಸಾಧಕರಿಗೆ ಮತ್ತು ವಿಶಯೋಪಭೋಗಿಗಳಿಗೆ ಮೀಸಲಾಗಿದೆಯೆಂದು ತಿಳಿದುಕೊಂಡಳು. ಮದುವೆಯ ನಡುವೆ ಜರುಗಿದ ಮೋದ, ಹಾಸ್ಯಪ್ರಕರಣಗಳ ಕಡೆಗೆ ಗಮನವೀಯದೆ, ತಾನು ಇದಕ್ಕೆಲ್ಲ ಹೊಣೆಗಾರಳಲ್ಲವೆಂದು ದುಃಖಿಸುತ್ತಾ ಕುಳಿತುಕೊಂಡಿದ್ದಳು. ತಾನು, ದುರ್ದೈವಿ ಮತ್ತು ಅದೃಷ್ಟಹೀನಳೆಂದು ಇತರರು ತೀರ್ಮಾನಿಸಿಬಿಟ್ಟಾಗ, ಮುಂದೆ ತನ್ನ ಹೀನಮೊಗವನ್ನು ಯಾರಿಗೂ ತೋರಬಾರದೆಂದು ಎಚ್ಚರಿಕೆಯಿಂದ ಇರತೊಡಗಿದಳು.

ಮದುವೆಯಾದಂದಿನಿಂದ ಪಾರ್ವತಿ ತೀರ ಬದಲಾಯಿಸಿಬಿಟ್ಟಳು. ಅವಳ ಹೃದ್ಭಾವನೆ ಯಾರಿಗೂ ತಿಳಿಯುತ್ತಿರಲಿಲ್ಲ. ಸರಳವರ್ತನೆ ಅವಳು ಬಿಟ್ಟಿದ್ದಳು. ದುಃಖವೆಲ್ಲವನ್ನೂ ಅಡಗಿಸಿಕೊಂಡು ಸಮಾಧಾನದಿಂದ ಅವಳು ಇರತೊಡಗಿದಳು.

* * * *

ಪತಿಗೃಹಕ್ಕೆ ತೆರಳಬೇಕಾಗಿ ಬಂತು. ಪಾರ್ವತಿ ಅಜ್ಜಿಯೊಂದಿಗೆ ಹೊಸಮನೆಗೆ ಬಂದಳು. ಜತೆಗಾತಿಯಾಗಿ ಬಂದ ವೃದ್ಧೆ, ಬಲ ಉಡುಗಿದವಳು,ಮೇಲಾಗಿ ಕಿವಿ ಕೇಳದವಳು. ಪಾರ್ವತಿ ಇವಳೊಂದಿಗೆ ಗುಪ್ತವಾಗಿ ಮಾತನಾಡಲಾಗುತ್ತಿರಲಿಲ್ಲ. ಹೊಸ ಜೀವನ ಆರಂಭವಾಯಿತು. ಭಯಭಕ್ತಿಯಿಂದ ಪತಿದೇವನ ಸನ್ನಿಹದಲ್ಲಿದ್ದು, ಪತಿಯೇ ಪರವು ಭಾಗ್ಯವೆಂದು, ತನ್ನ ಪಾಲಿಗೆ ಬಂದ ದೈವವೆಂದು ತಿಳಿದು ಅವಳು ಸಂಸಾರ ನಿರ್ವಹಿಸುತ್ತಾ ಬಂದಳು. ಹಿಂದೂ ಸ್ತ್ರೀಯರಿಗೆ ಈ ನಂಬಿಕೆ, ಆದಿಯಿಂದಲೂ ನಮ್ಮ ಸಂಸ್ಕೃತಿಯ ಫಲವಾಗಿ ಬೇರೂರಿಬಿಟ್ಟಿದೆ. ಪಾರ್ವತಿ, ಪತಿ ತನ್ನ ಪ್ರೇಮಿಯಲ್ಲ; ಯಜಮಾನಮಾತ್ರನೆಂದು ತಿಳಿದು ತನ್ನ ಜೀವನದಲ್ಲಿ, ಪ್ರೀತಿಯಲ್ಲಿ, ಸ್ವಾತಂತ್ರ್ಯದಲ್ಲಿ ಪತಿಯೆಂದಿಗೂ ಭಾಗಿಯಲ್ಲವೆಂದು ನಿಶ್ಚಯಿಸಿಕೊಂಡಳು.

ಸರಿವಯಸ್ಸಿನ ತರುಣಿಯರು ತಮ್ಮ ಪತಿಯೊಡನೆ ಸರಸವಾಗಿ ಮಾತನಾಡುವ ಹಾಗೆ, ಮಾತನಾಡಲಾರಳೆಂದು, ಆ ಭಾಗ್ಯ ತನಗಿಲ್ಲವೆಂದು ಅವಳು ದೂರವಾಗಿರುತ್ತಿದ್ದಳು. ನಾಚಿಕೆಯಿಂದಲೋ ಅಥವಾ ಹೇಸಿಕೆಯಿಂದಲೋ ಸರಿಯಾಗಿ ಪತಿಯ ಮುಖಾವಲೋಕನ ಅವಳು ಮಾಡುತ್ತಿರಲಿಲ್ಲ. ಸೇವಕರೊಂದಿಗೂ ಹೆಚ್ಚು ಮಾತನಾಡದೆ, ಅವರಿಗೆ ತಾನು ವಯಸ್ಸಾದವನ ಕೈಹಿಡಿದವಳೆಂದು ತೋರ್ಪಡಿಸಿಕೊಳ್ಳದೆ ಅಡಗಿರುತ್ತಿದ್ದಳು. ಹೀಗಾಗಿ, ಪಾರ್ವತಿಯ ಎಂದಿನ ಚಟವಟಿಕೆ, ಸ್ಫೂರ್ತಿ, ಉತ್ಸಾಹ ಮಾಯವಾಯಿತು ತಂದೆ ಮನೆಯಲ್ಲಿ, ಪತಿಯ ಮನೆಯಲ್ಲಿ ಎಲ್ಲರಿಗಿಂತಲೂ ತಾನು ಕೀಳಾದಳೆಂದು ಅವಳಿಗೆ ಕಂಡಿತು. ಈ ಭಾವನೆ, ಬದಲಾವಣೆ, ಯಾರಿಗೂ ತಿಳಿಯಲಿಲ್ಲ. ಅವಳ ತಾಯಿಗೂ ಅರ್ಥವಾಗಲಿಲ್ಲ. ಅಕ್ಕತಂಗಿಯರಿಗೂ ಅಷ್ಟೆ. ಸಂಸಾರ ಬಂಧನದ ತೊಡಕನ್ನು ಬಿಡಿಸಿಕೊಳ್ಳುವುದರಲ್ಲಿ ಅವರವರು ಮುಳುಗಿದ್ದಕಾರಣ, ಇತರರ ನೋವು, ದುಃಖ ತಿಳಿದು ವಿಮರ್ಶಿಸಿಕೊಳ್ಳಲು ವೇಳೆಯೇ ಅವರಿಗಿರಲಿಲ್ಲ. ಅಣ್ಣ-ತಮ್ಮಂದಿರು, ಅವರು ಜೀವನ ಹಂತವೇರಿ ಪ್ರಗತಿ ಕಾಣಬಯಸುತ್ತಿದ್ದರು. ತಂಗಿ, ಜೀವನದಲ್ಲಿ ನಿರುತ್ಸಾಹ ಕಾಣುತ್ತಿದ್ದುದು ಅವರ ಮನಸ್ಸಿಗೆ ಬಾರಲಿಲ್ಲ. ಒಟ್ಟಿನಲ್ಲಿ ಪಾರ್ವತಿ, ಯಾರ ಪಾಲಿಗೂ ಬಾರದೆ,

ತೊರೆದುಬಿಟ್ಟ ಹೆಣ್ಣಿನಂತೆ, ತಾನಾಗಿಯೇ ನಿರ್ಮಿಸಿಕೊಂಡ ಅಂತರಂಗ ಕ್ಷೇತ್ರದಲ್ಲಿ ಇದ್ದುಬಿಟ್ಟಳು.

* * * *

ಪಾರ್ವತಿ ಎರಡನೆ ಸಾರಿ ತಾಯಿಮನೆಗೆ ಬಂದು ಇನ್ನೂ ಎರಡು ತಿಂಗಳಾಗಿರಲಿಲ್ಲ. ಆಕೆಯ ಪತಿದೇವ ಸತಿಗೆ ಮೊದಲಾಗಿ ಕಾಗದ ಬರೆದಿದ್ದ. ಆಕಸ್ಮಿಕವಾಗಿ ಬಂದ ಕಾಗದದಲ್ಲಿ ಬರೆದಿದ್ದುದೇನು? ಎಂದವಳು, ಅತ್ಯಾತುರದಿಂದ ಅದನ್ನು ಕಸಿದುಕೊಂಡಳು. ಪ್ರಿಯನಿಂದ ಪಡೆದ ಮೊದಲನೆಯ ಕಾಗದ ಓದಲು, ಅವಳ ಆತುರ ಎಷ್ಟಿದ್ದಿರಬಹುದು! ಪಾರ್ವತಿಯ ಕೈಗೆ ಬಂದ ಕಾಗದ ಬೇರೆೀ ರೀತಿಯದು. ಅನಿರೀಕ್ಷಿತ ಕಾಗದದಲ್ಲಿ ಪ್ರಮೋದವಿಷಯವಾದರೂ ಏನಿತ್ತು? ವಿಷಯವೇನಾದರೂ ಇರಲಿ, ಈ ಕಾಗದದಿಂದ ಪಾರ್ವತಿಗೆ ಯಾವ ಬಗೆಯ ಸಂತೋಷವೂ ಆಗಲಿಲ್ಲ. ಈ ಕಾಗದ ಬರುವಿಕೆಯಿಂದ, ಮನೆಯಲ್ಲಿ ಒಂದು ತರಹೆಯ ಕುತೂಹಲವೆದ್ದಿತು.

ವಯಸ್ಸಿಗೆ ತಕ್ಕಹಾಗೆ, ತರುಣಿಗೆ ಮೋದಪ್ರಮೋದಗಳ ಮೇಲೆ ಪ್ರೇಮವಿರುವುದಿಲ್ಲವೇನು? ಪಾರ್ವತಿಗೂ ಆಸೆಯಿದ್ದಿತು. ಫಲವೇನು? ಅವಳು ನಲವತ್ತೈದು ವರ್ಷ ಕಳೆದ ವರನನ್ನು ಮದುವೆಯಾಗಿದ್ದಳು. ಪ್ರೇಮಕಾಗದಗಳ ಓಡಾಟ, ಸ್ತ್ರೀಪುರುಷರಲ್ಲಿ ಒಂದು ಬಗೆಯ ಆನಂದ, ಸುಖವನ್ನು ತರುತ್ತದೆ. ಮದುವೆಯಾದಂದಿನಿಂದ ಸುಖದ ನೆಲೆಯನ್ನೇ ಕಾಣದ ಪಾರ್ವತಿಗೆ, ಈ ಅನಿರೀಕ್ಷಿತ ಪತ್ರಾಗಮನದಿಂದ ಆನಂದ ವಾಗಲಿಲ್ಲ.

ಪಾರ್ವತಿ ಕಾಗದ ಓದಿಕೊಳ್ಳುತ್ತಿದ್ದಾಗ್ಗೆ, ಅವಳ ತಾಯಿ ಮಗಳಿಗೆ ಗೊತ್ತಾಗದಂತೆ ಹತ್ತಿರ ಬಂದು, "ಕಾಗದ ಎಲ್ಲಿಂದ ಬಂದಿದೆ?" ಎಂದು ಒಮ್ಮೆಲೇ ಕೇಳಿಬಿಟ್ಟರು. ಪಾರ್ವತಿ ಈ ಪ್ರಶ್ನೆಗೆ ಬೆದರಲಿಲ್ಲ. ಅಳಿಯ ನೇರವಾಗಿ ಮಗಳಿಗೆ ಕಾಗದ ಬರೆದುದು ಅವರಿಗೆ ಸರಿತೋರಲಿಲ್ಲ. ಅಸಮಾಧಾನದಿಂದವರು "ನಿನ್ನ ಗಂಡನಿಗೆ ಈಗ ಕಾಗದ ಬರೆಯಲು ಕಾರಣವಾದರೂ ಏನಿದ್ದಿತು" ಎಂದು ಕೇಳಿದರು.

ಕುಗ್ಗಿದ ಧ್ವನಿಯಲ್ಲಿ ಪಾರ್ವತಿ, "ವೈಗೆ ಸ್ವಸ್ಥವಿಲ್ಲ, ಮಗು ಬಾಲ ಚಂದ್ರನನ್ನು ನೋಡಬೇಕೆಂದು ಬರೆದಿರುತ್ತಾರೆ" ಎಂದಳು. ಹೀಗೆ ಬರೆದ ಪತ್ರದಲ್ಲಿ ಪ್ರಮಾದವಾದರೂ ಏನಿದೆ? ಪಾರ್ವತಿಯ ತಾಯಿ, ಬಿರುಸಿನಿಂದ ತಡೆಬಡೆಯಿಲ್ಲದೆ, "ನೀನು ಊರಿಗೆ ಹೋಗಬೇಕೆ? ನಮ್ಮಲ್ಲಿ ಆಡಿಕೊಳ್ಳುವ ಹಾಗೆ, ವಯಸ್ಸುಮೀರಿ ಮದುವೆಯಾದವ, ಮಡದಿಯ ಮೇಲೆ ಹೆಚ್ಚು ಹಂಬಲವನ್ನಿಟ್ಟಿರುತ್ತಾನೆ"ಯೆನ್ನುವುದು, ನಿಜವಾಯಿತು. "ನೀನು ಇಲ್ಲಿಗೆ ಬಂದು ಒಂದು ತಿಂಗಳಾಗಿರಬಹುದು. ಆಗಲೇ ಅವಸರವೇ! ನೀನು ಅಲ್ಲಿಲ್ಲದಿದ್ದರೆ, ಅವನಿಗೆ ಹೊತ್ತು ಹೋಗುವುದಿಲ್ಲವೆ? ಜನರಿಗೆ ಈ ನಡೆವಳಿಕೆ ತಿಳಿದರಾಯಿತು, ಎಲ್ಲರೂ ನಕ್ಕು ಜರಿಯುತ್ತಾರೆ" ಎಂದರು.

ಈ ಬಿಸಿಯಾದ ಬಿರುಸುಮಾತು, ಪಾರ್ವತಿಯನ್ನು ಮತ್ತಷ್ಟು ಇರಿಯಿತು. ಅವಮಾನ, ಅಸಡ್ಡೆಯನ್ನವಳು ಎಂದಿನಂತೆ ತನ್ನಲ್ಲಿಯೇ ಅಡಗಿಸಿಕೊಂಡಳು. ನಾನು ದೇವನಲ್ಲಿ ಕೇಳಿಬಂದುದಿಷ್ಟುಮಾತ್ರವೇ! ಅದೃಷ್ಟಶಾಲಿನಿಯೆನಿಸಿದ್ದರೆ, ತಾಯಿ ಈಗ ಜರಿಯುತ್ತಿರುವಷ್ಟು ಆಗ ಜರಿಯುತ್ತಿರಲಿಲ್ಲ ಎಂದು ಯೋಚಿಸಿದಳು. ಹೆಣ್ಣುಹೆತ್ತ ತಾಯಿ, ತನ್ನ ಮುದ್ದು ಮಗುವಿನ ಹೃದಯಕ್ಕೆ ತಾಕುವಹಾಗೆ ಮಾತನಾಡುವುದಿಲ್ಲ. ನನ್ನನ್ನೇಕೆ ಈರೀತಿ ನೋಯಿಸುತ್ತಾಳೆ? ಎಂದು ಯೋಚಿಸಿದ ಪಾರ್ವತಿ, ವಯಸ್ಸಾದ ಪತಿ ದೊರಕಿದುದು ತನ್ನ ತಪ್ಪೆ? ಎಂದುಕೊಂಡಳು. ಪತಿಗೆ ವಯಸ್ಸು ಮೀರಿದರೇನು? ವಯಸ್ಸಾದ ಪತಿ, ಹೆಂಡತಿ-ಮಗುವನ್ನು ನೋಡಬೇಕು, ಬಾ ಎಂದು ಕರೆಯಬಾರದೇನು? ನೋಡಬಯಸಬಾರದೇನು? ಪ್ರಪಂಚದಲ್ಲಿ ಎಂತೆಂತಹ ವಿಚಿತ್ರ ನಡವಳಿಕೆಗಳಿವೆಯೋ ಎಂದವಳು ಯೋಚಿಸಿಕೊಂಡಳು.

ಪ್ರಚಂಡ ಬೇಗೆಯುನ್ನುಂಡ ಪಾರ್ವತಿ, 'ಪತಿಯನ್ನು ಹೆಚ್ಚಾಗಿ ದ್ವೇಷಿಸುತ್ತಿದ್ದಳು. ತನ್ನ ಇಚ್ಛೆಯನ್ನರಿಯದೆ ಮದುವೆಯಾದರೆಂದು ಉರಿಯುತ್ತಿದ್ದಳು. ತನ್ನ ಹೃದಯಕ್ಕೆ ಅವನೆಂದಿಗೂ ಸ್ವಾಮಿಯಲ್ಲವೆಂದು ತಿಳಿದುಕೊಂಡು ವರ್ತಿಸುತ್ತಿದ್ದಳು. ತನ್ನ ಏಕೈಕ ಪುತ್ರ-ಬಾಲಚಂದ್ರನ ತಂದೆಮಾತ್ರನೆಂದು ಪತಿಯನ್ನು ನೋಡುತ್ತಿದ್ದಳು. ಪಾರ್ವತಿಯ ಪತಿಗೆ,

ತಾನು ಮಾಡಿದ ತಪ್ಪು ಗೊತ್ತಾಗಿ ಕೊನೆಗೆ ವ್ಯಥೆಪಡುವಂತಾಯಿತು. ಚಿಕ್ಕಹುಡುಗಿಯನ್ನು ವಯಸ್ಸುವಿಸಾರಿದ ತಾನು ಮದುವೆಯಾದುದು ಒಳಿತಲ್ಲವೆಂದು ತೋರಿತು. ಮದುವೆಯಾದ ತರುಣದಲ್ಲಿ, ಪಾರ್ವತಿ ಪತಿಯನ್ನು ಕೂಡಿದಾಗ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಪತಿದೇವ ಸತಿಯು ವಿಲಾಪ ಕೇಳಿ ಕೋಪಿಸಿಕೊಳ್ಳದೆ, ತನ್ನ ಉತ್ತಮ ನಡೆವಳಿಕೆಯನ್ನು ತೋರಿಕೊಂಡ. ಅವನು ಸತಿಯ ದುಃಖ ಶಮನಗೊಳಿಸುವ ಗೋಜಿಗೆ ಹೋಗಲಿಲ್ಲ. ದುಃಖ ಶಮನಗೊಳಿಸಲು ಯತ್ನಿಸಿದಲ್ಲಿ, ಮತ್ತಷ್ಟು ಹೆಚ್ಚಿ ಅತಿರೇಕವಾಗುವುದೆಂದು ಸುಮ್ಮನಿರುತ್ತಿದ್ದ. ಪತಿಯ ಈ ದೊಡ್ಡ ಮನಸ್ಸು, ಔದಾರ್ಯ, ಪಾರ್ವತಿಗೆ ಮೊದಲು ಅರ್ಥವಾಗಲಿಲ್ಲ. ಬಾಲಚಂದ್ರ ಹುಟ್ಟಿದ ಎರಡು ಮೂರು ವರ್ಷಗಳಾದಮೇಲೆ, ತಂದೆ ಮಗನ ಮೇಲೆ ಪ್ರೇಮದೃಷ್ಟಿ ಬೀರಿದಮೇಲೆ, ಪಾರ್ವತಿ ಪತಿಯನ್ನು ಭಕ್ತಿ–ಪ್ರೀತಿಯಿಂದ ಕಾಣುತ್ತಿದ್ದಳು.

* * * *

ಪತಿಯಿಂದ ಬಂದ ಕಾಗದವನ್ನು ಓದಿಕೊಂಡಮೇಲೆ, ತನ್ನನ್ನೂ ಬಾಲಚಂದ್ರನನ್ನೂ ನೋಡಬೇಕೆಂಬ ಕಾಂಕ್ಷೆ ಅವರಿಗಿದೆಯೆಂದು ತಿಳಿದು ಕೊಂಡಳು. ಕಾಗದದಲ್ಲಿ ಒಕ್ಕಣೆ ಹೀಗಿತ್ತು:—"ಮೂರುನಾಲ್ಕು ದಿನ ಗಳಿಂದ ನಾನು ಅಸ್ವಸ್ಥನಾಗಿದ್ದೇನೆ. ಹೆಚ್ಚು ಜ್ವರ ಬರುತ್ತಿಲ್ಲ. ನಿಶ್ಯಕ್ತಿ ಯಿಂದ ಬಳಲಿದ್ದೇನೆ. ಬಾಲಚಂದ್ರನನ್ನು ನೋಡಬೇಕೆಂದು ಬಯಸುತ್ತೇನೆ. ನೀನು ಬೇಗ ಇಲ್ಲಿಗೆ ಹೊರಟುಬರುವೆಯಾ?"

ಕಾಗದ ಸಹಜವಾಗಿ ಸರಳವಾದ ರೀತಿಯಲ್ಲಿತ್ತು. ಕಾಗದದಲ್ಲಿ ಬರೆದು ತಿಳಿಸಿದ ಆತುರ, ಕಳವಳ, ಪ್ರತ್ಯಾಶೆ ಪಾರ್ವತಿಗೆ ತಿಳಿಯದೆ ಇರಲಿಲ್ಲ. ಅವಳು ಪತಿಯ ಮನೆಗೆ ಪ್ರಯಾಣಮಾಡಲು ಸಿದ್ಧಳಾಗಿದ್ದಳು. ಆದರೆ, ಪಾರ್ವತಿಯ ಈ ಎಲ್ಲಾ ಭಾವನೆ, ಮನಸ್ಸಿನ ಹೊಯ್ದಾಟ ಇತರರಿಗೆ ಹೇಗೆ ತಿಳಿದೀತು? ಈ ವಿಚಾರವನ್ನು ಹೇಳಲು, ಸ್ಪಷ್ಟಪಡಿಸಲು ಅವಳಿಗೆ ಶಕ್ತಿಯಿರಲಿಲ್ಲ.

ಪಾರ್ವತಿಯ ತಾಯಿ, ಗಂಡ ಊಟಮಾಡುತ್ತಿದ್ದಾಗ, ಪಾರ್ವತಿಯ ಗಂಡನ ಕಡೆಯಿಂದ ಬಂದ ಕಾಗದದ ವಿಚಾರ ಹೇಳಿದಳು. ಪಾರ್ವತಿಯ

ತಂದೆ "ಈಗ ಕೊಯಿಲು ಕಾಲ. ನನಗೆಲ್ಲಿ ಬಿಡುವಿದೆ? ಗೋಪಿಯೊಂದಿಗೆ ಕಳುಹಿಸೋಣವೆಂದರೆ ಸಾಧ್ಯವಿಲ್ಲ. ಅವನ ನೆರವು ಇಲ್ಲಿ ಅತ್ಯಾವಶ್ಯಕ. ಹೀಗೆಂದು ನಾನೇ ಅಳಿಯನಿಗೆ ಬರೆಯುತ್ತೇನೆ" ಎಂದವರು ಮರು ಮಾತನಾಡಿದರು.

"ಮಗಳ ಎರಡನೆಯ ಬಾಣಂತನ ಮುಗಿದು ಇನ್ನೂ ಎರಡು ತಿಂಗಳಾಗಿಲ್ಲ. ಅವಳು ಈಗ ಪ್ರಯಾಣಮಾಡುವುದು ಯೋಗ್ಯವಲ್ಲ" ಎಂದು, ಪಾರ್ವತಿಯ ತಾಯಿ ಹೇಳಿದರು.

"ಹೌದು! ನೀನ್ನೆವುದು ನಿಜ! ಅವನು ನೇರವಾಗಿ ನಮಗೆ ಬರೆಯದೆ, ಪಾರ್ವತಿಗೇಕೆ ಬರೆದ?" ಎಂದು ತಮ್ಮಲ್ಲಿಯೇ ಅಂದುಕೊಂಡು ಪಾರ್ವತಿಯ ತಂದೆ ಸುಮ್ಮನಾಗಿಬಿಟ್ಟರು.

ಈ ಮಾತುಗಳನ್ನೆಲ್ಲಾ ಕೇಳಿದ ಪಾರ್ವತಿ ತಾನು ಪ್ರಯಾಣ ಹೊರಡುವ ಇಚ್ಛೆ ತ್ಯಜಿಸಿದಳು. ಈಗ ಅವಳಿಗೆ ಪ್ರಯಾಣಮಾಡುವುದು ನ್ಯಾಯವಾಗಿದೆಯೆಂದು ವಾದಮಾಡಲು ಸಾಮರ್ಥ್ಯವಿರಲಿಲ್ಲ. ಬಂದ ಕಾಗದಕ್ಕೆ ಪ್ರತ್ಯುತ್ತರವಾದರೂ ಬರೆಯಬೇಕೆನ್ನಿಸಿತು. ಪತಿಯಿಂದ ಸತಿಗೆ ಕಾಗದ ಬಂದಾಗ, ಮನೆಯವರೆಲ್ಲರಿಂದಲೂ ತಾನು ನಗೆಗೀಡಾದ ಸಂಗತಿ ನೆನೆದು, ಸುಮ್ಮನಿದ್ದಳು. ಎರಡು ದಿನದವರೆಗೆ ಪಾರ್ವತಿ, ಬರೆಯಲೋ ಬೇಡವೋ ಎಂಬ ಹೊಯ್ದಾಟದಲ್ಲಿ ಮುಳುಗಿದಳು. ಬರೆಯುವೆನೆಂದು ಹೇಳಿದ ತಂದೆಯವರು, ನಿಧಾನಿಸಿಬಿಟ್ಟಮೇಲೆ, ಪಾರ್ವತಿಯೇ ಬರೆಯಬೇಕಾಗಿ ಬಂತು. ಕೊನೆಗೆ ಪಾರ್ವತಿ, ಯಾರಿಗೂ ತಿಳಿಯದಂತೆ ಪ್ರತ್ಯುತ್ತರ ಬರೆದು ಅಂಚೆಡಬ್ಬಿಗೆ ಸೇರಿಸಿಬಿಡುವೆಯೆಂದು ಕೊಂಡಳು. ಮನೆಯ ಕೆಲಸದಾಕೆಯನ್ನು ಕರೆದು, "ತಲೆ ಚೀಟಿ ಅಂಟಿಸಿದ ಲಕೋಟೆ ಕೊಂಡುಬಾ" ಎಂದು ಕಳುಹಿಸಿದಳು.

"ಯಾರಿಗಮ್ಮಾ ನೀವು ಬರಿಯುವುದು?" ಎಂದು ಕೆಲಸದಾಕೆ, ಎಲ್ಲರಂತೆ ತನ್ನ ಕುತೂಹಲವನ್ನು ತೋರ್ಪಡಿಸಿ ಅಡ್ಡವಾಗಿ ಕೇಳಿಬಿಟ್ಟಳು. "ಯಾರಿಗಾದರೆ ನಿನಗೇನು? ಹೇಳಿದಷ್ಟು ಕೆಲಸಮಾಡು" ಎಂದು ಪಾರ್ವತಿ ಬೆದರಿಸಿ ಕಠಿಣವಾಗಿ ಹೇಳಿದಮೇಲೆ, ಲಕೋಟೆ ಅವಳ ಕೈಗೆ ಬಂತು.

ಮಧ್ಯಾಹ್ನ ಎಲ್ಲರೂ ಊಟಮಾಡಿ ನಿದ್ರಿಸುತ್ತಿದ್ದಾಗ ಪಾರ್ವತಿ ಕಾಗದ ಬರೆದು ಮುಗಿಸುವ ಯೋಜನೆ ಮಾಡಿದಳು.

ಅದ್ಭುತರಮ್ಯ ಪ್ರಣಯಕಥೆಗಳನ್ನು ಪಾರ್ವತಿ, ತನ್ನ ಸಾಂಸಾರಿಕ ಜೀವನದ ಬಿಡುವಿನಲ್ಲಿ ಬೇಕಾದಷ್ಟು ಓದಿದ್ದಳು. ಪ್ರೇಮಪದ, ಪ್ರೇಮ ಸಂಕೇತಾರ್ಥ ಇವುಗಳು ಪಾರ್ವತಿಗೆ ಚನ್ನಾಗಿ ತಿಳಿದಿತ್ತು! ಆದರೇನು? ಅವುಗಳು ಒಂದೂ ಈ ಸಮಯದಲ್ಲಿ ಕೆಲಸಕ್ಕೆ ಬಾರದೇಹೋದವು. ಕಾಗದಕ್ಕೆ ಪ್ರತಿಕಾಗದ, ಅದರಲ್ಲಿ ತನ್ನ ಪ್ರೀತಿಯ ಪ್ರಕಟಣೆ, ಕ್ಷೇಮಸಮಾಚಾರ ಕುರಿತು ಎರಡು ಮಾತುಗಳು, ಇಷ್ಟು ಬರೆದು ಮುಗಿಸಬೇಕೆಂದಿದ್ದಳು.

ಬರೆಯುತ್ತಾ ಕುಳಿತಿದ್ದಳು. ಭದ್ರವಾಗಿ ಕೋಣೆಯ ಬಾಗಿಲನ್ನು ಮುಚ್ಚಿ, ಲೇಖನ ಸಾಮಗ್ರಿಗಳೊಂದಿಗೆ ಬರೆಯುತ್ತಿದ್ದಾಗ, ಯಾರೋ ಬಾಗಿಲು ತೆರೆಯೆಂದು ಕೂಗುತ್ತಿರುವ ಹಾಗೆ ಅವಳಿಗೆ ಕೇಳಿಸಿತು. ಒಳಗೆ ನಿದ್ರಿಸುತ್ತಿದ್ದ ತಂದೆಯವರು ಎಚ್ಚೆತ್ತು, "ಹೊರಗಡೆ ಯಾರೋ ಕೂಗುತ್ತಿದ್ದಾರೆ, ನೋಡಿಬಾ" ಎಂದರು. ಈ ಸೂಚನೆ ಬಂದುದರಿಂದ, ಪಾರ್ವತಿ ಬರೆಯುವುದನ್ನು ಅಡಗಿಸಿ, ಬಾಗಿಲ ಕಡೆ ಓಡಿದಳು. ಹೊರಗೆ ಕೂಗುತ್ತಾ ಕಾಯುತ್ತಿದ್ದ ತಂತಿಯವನು, ಪಾರ್ವತಿಯನ್ನು ನೋಡಿ, "ಜಗದೀಶ ಅಯ್ಯರ್‌ರವರ ಮನೆ ಇದೆಯೋ?" ಎಂದು ಕೇಳಿದ.

ಅವನು ತಂದ ತಂತಿಯ ಓಲೆಯಮೇಲೆ, ತಂದೆಯ ವಿಳಾಸವಿದ್ದುದರಿಂದ ಪಾರ್ವತಿ ಅದನ್ನು ಕೈಗೆ ತೆಗೆದುಕೊಂಡಳು. ಇಲಾಖೆ ವಸ್ತ್ರಧಾರಿ ತಂತಿಯವ, ಆಕಸ್ಮಿಕವಾಗಿ ಜಗದೀಶ ಅಯ್ಯರ್‌ರವರ ಮನೆಗೆ ತಂತಿ ತಲುಪಿಸಿದುದನ್ನು ನೋಡಿದ ಇತರರು, ಸಮಾಚಾರವೇನೆಂದು ತಿಳಿಯಲು ಆತುರದಿಂದ ಬಂದು ಸೇರಿದರು.

ತಂತಿಯನ್ನು ತಂದೆಯ ಕೈಗೆ ಕೊಟ್ಟಳು. ಅವಳಿಗೆ ಸಮಾಧಾನ ವಿರಲಿಲ್ಲ. ಹೃದಯ ಹೊಡೆದುಕೊಳ್ಳುತ್ತಿತ್ತು. ಪ್ರಮಾದ ವಿಚಾರವೇನಿದೆಯೋ ಏನು ಹೇಳುವರೋ ಎಂದು ನೋಡುತ್ತಿದ್ದಳು. ಕೆಟ್ಟವಾರ್ತೆ ಏನಿರುವುದೋ ಎಂದು ಕಳವಳಗೊಂಡಿದ್ದ ಪಾರ್ವತಿಗೆ,

ತಂತಿಯನ್ನು ಪೂರಾ ಓದಿಕೊಂಡ ಅವಳ ತಂದೆ "ಕೂಡಲೇ ಹೊರಟು ಬರುವುದೆಂದು" ಬರೆದಿದ್ದಾನೆ ಎಂದರು.

ತಂದೆ ಹೇಳಿದ ವಾರ್ತೆ ಕೇಳಿ, ಪಾರ್ವತಿ ಮೂಕಳಂತೆ ಚೇತನಾ ವಿಹೀನಳಾಗಿ ಕುಳಿತುಬಿಟ್ಟಳು. ಒಳಗಿನಿಂದ ಸುದ್ದಿ ತಿಳಿದುಕೊಂಡ ಅವಳ ತಾಯಿ, "ಇನ್ನು ಏನೇನು ಕೇಡು ಇವಳು ಅನುಭವಿಸಬೇಕಾ ಗಿದೆಯೋ!" ಎನ್ನುತ್ತ ಬಂದರು.

ಅಕ್ಕಪಕ್ಕದ ಜನರು, "ಹೆದರಿಕೆಗೆ ಏನೂ ಕಾರಣವಿಲ್ಲ!" ಎಂದು ಸಹಜವಾಗಿ ಸಮಾಧಾನ ಹೇಳುತ್ತಿದ್ದರು.

ತಂದೆ-ತಾಯಿ ಮತ್ತು ತನ್ನ ಮಕ್ಕಳೊಂದಿಗೆ ಪಾರ್ವತಿ ಗಂಡನನ್ನು ಕಾಣಲು ಪ್ರಯಾಣ ಮಾಡಿದಳು. ಪತಿ, ಒಂದು ಸಾರಿಯಾದರೂ ತನ್ನನ್ನು ನೋಡಿಯಾನು ಎಂದು ನೆನೆಯುತ್ತಾ ಬಂದಳು. ಎಲ್ಲ ರೊಂದಿಗೆ ಪಾರ್ವತಿ ಪತಿಗೃಹ ಸೇರುವ ಮೊದಲೇ, ಪಾರ್ವತಿಯ ಗಂಡ ಕೈಲಾಸಂ ಜ್ಞಾನತಪ್ಪಿ ಮಲಗಿದ್ದ. ಇಲಾಖೆಯ ವೈದ್ಯರು ರೋಗಿ ಉಲ್ಬಣಾವಸ್ಥೆಯನ್ನು ನೋಡಿ "ನೆಟ್ಟಗಾಗುವುದು ಕಷ್ಟ" ಎಂದು ಹೇಳಿ ಹೊರಟುಹೋಗಿದ್ದರು.

ತಂದೆಯ ಸುತ್ತ ನಿಂತಿದ್ದ ಖಿನ್ನ ಜನರನ್ನು ನೋಡಿ, ಬಾಲಚಂದ್ರ ಹತ್ತಿರಕ್ಕೆ ಬರುತ್ತಿದ್ದ. ಜನರು ಅವನನ್ನು ತಡೆದು ನಿಲ್ಲಿಸಿ ಕೊಂಡರು. ಎದೆಯ ಉಬ್ಬರವಿಳಿತ ಮಿತಿಮೀರಿ ನಿಂತುಬಿಟ್ಟಿತು. ಕೊನೆಯಬಾರಿ, ಕೈಲಾಸಂ ಎಲ್ಲರ ಕಡೆಗೂ ದೃಷ್ಟಿಹರಿಸಿ ಕಣ್ಣು ಮುಚ್ಚಿ ಬಿಟ್ಟ. ಸತ್ತವನಿಗೆ, ಅಂತ್ಯಕಾಲದಲ್ಲಿ ತನ್ನಬಳಿ ಸತಿಯೂ ಮಗನೂ ಬಂದು ನಿಂತದ್ದು ಸಹಾ ಅರಿವಾಗದೆ ಹೋಯಿತು.

ಪಾರ್ವತಿಯ ಹೃದಯ ಒಡೆಯಿತು. ಆದಿಯಿಂದ ಸುಖ-ದುಃಖ ವನ್ನು ತಡೆದು, ತನ್ನಲ್ಲಡಗಿಸಿಕೊಳ್ಳುತ್ತಿದ್ದವಳಿಗೆ, ಆಗ ಏನೂ ತೋರಲಿಲ್ಲ. ತನ್ನ ಕಟ್ಟಕಡೆಯ ಬಂಧನ ತೊರೆದುಹೋಯಿತೆಂದು, ಎಳೆವಯಸ್ಸಿನಲ್ಲಿ ಬಾಲಚಂದ್ರ ತಂದೆಯನ್ನು ಕಳೆದುಕೊಂಡನೆಂದವಳು ಮೂಕಶೋಕವನ್ನು ತೋರ್ಪಡಿಸುತ್ತಾ ಕಣ್ಣೀರಿಡುತ್ತಾ ಮೂಲೆಯೊಂದ ರಲ್ಲಿ ಅಡಗಿಕೂತಳು.

ಸುರಸುಂದರಿ ಪಾರ್ವತಿಯ ಸೌಭಾಗ್ಯ ಹೀಗೆ ಅಳಿಸಿಹೋಯಿತು. ಅವಳಿಗಾದ ಅನಿಷ್ಟ, ಅನ್ಯಾಯ ನೆನೆದು ಜನರು ಮರುಕಪಟ್ಟರು. ಪಾರ್ವತಿಗೆ ಇದರಿಂದ ಲಾಭವೇನಾಗಲಿಲ್ಲ. ಕೈಲಾಸಂ ಹೆಂಡತಿಗೆ ಕಾಗದ ಬರೆದು, ಬಾರೆಂದು ತಿಳಿಸಿದಮೇಲೆ ನಿಶ್ಯಕ್ತಿಯಿಂದ ಮಲಗಿಬಿಟ್ಟ. ಜ್ಞಾನ ತಪ್ಪಿ, ಸ್ಥಿತಿ ತೀರಾ ಕೆಟ್ಟುಹೋಯಿತು. ಅವನ ಹತ್ತಿರವಿದ್ದ ಜನರು, ಪಾರ್ವತಿಯ ಬರುವಿಕೆಯನ್ನು ಕಾಯುತ್ತಿದ್ದರು. ಹೊತ್ತುಮೀರಿ ಕೈಮೀರುತ್ತಿದೆಯೆಂದು ತಿಳಿದಾಗ, ಅವರೇ ಪಾರ್ವತಿಗೆ ತಂತಿ ಕಳುಹಿಸಿದರು. ತಂತಿ ಸೇರಿ, ಪಾರ್ವತಿ ಹೊರಟುಬಂದಮೇಲೆ ವಿಧಿ ತನ್ನ ಆಟ ತೋರಿ ಪಾರ್ವತಿಯ ಪತಿಯನ್ನು ಕೊಂಡೊಯ್ಯಿತು.

ಪಾರ್ವತಿ, ಆಗ ತಾನು ಪ್ರತ್ಯುತ್ತರ ಬರೆಯಲು ಕುಳಿತುದನ್ನು ನೆನೆಯುತ್ತಾ, ಪತಿ ನನ್ನ ಕಾಗದ ನಿರೀಕ್ಷಿಸುತ್ತಿದ್ದನೇ? ಆಗ ನಾನು ಅರ್ಧಮಾತ್ರ ಬರೆದು ಮುಗಿಸಿದ್ದೆನೆ? ಸತಿಯ ಕಾಗದವನ್ನು ಪಡೆಯುವ ಭಾಗ್ಯ ಅವರಿಗೆ ದೊರೆಯಲಿಲ್ಲವಲ್ಲಾ! ನಾನು ಇಲ್ಲಿಗೆ ಬಾಲಚಂದ್ರನೊಡನೆ ಬಂದರೂ ಅವರನ್ನು ನೋಡಲಾಗಲಿಲ್ಲವಲ್ಲಾ! ಅಯ್ಯೋ ಮುಗಿಯದ ಕಾಗದ ಮುಗಿಯದೆ ನಿಂತಿತಲ್ಲಾ! ಎಂದವಳು ಗೋಳಾಡಿದಳು. ಪಾರ್ವತಿಯ ಬಾಳ್ವೆ ಇದರೊಂದಿಗೆ ಮಣ್ಣುಪಾಲಾಯಿತು.

# ಗೂಳಿಗಳು

ಪ್ರಾಣಿಗಳಲ್ಲೆಲ್ಲಾ ಕತ್ತೆ, ಅತಿ ಬುದ್ಧಿಯಿಲ್ಲದ ಪ್ರಾಣಿ. ಅತಿ ದಡ್ಡನನ್ನು ಸಾಧಾರಣವಾಗಿ ನಾವು ಕತ್ತೆಗೆ ಹೋಲಿಸುತ್ತೇವೆ. ಅದೇಕೆ ಕತ್ತೆಯನ್ನು ಅತಿ ದಡ್ಡಪ್ರಾಣಿಯೆಂದು ಕರೆಯುತ್ತಾರೋ! ಕತ್ತೆಗೆ ಬುದ್ಧಿಯೇ ಇಲ್ಲವೋ ಅಥವಾ ತಾಳ್ಮೆಯಿಂದ ಕೆಲಸ ನಿರ್ವಹಿಸುವುದನ್ನು ತಿಳಿದು ಹೀಗೆನ್ನುತ್ತಾರೆಯೋ ತಿಳಿಯದು. ಹಸು, ತನ್ನನ್ನು ಯಾರಾದರೂ ಹಿಂಸಿಸಿ ಹೊಡೆಯಲು ಬಂದಾಗ ಕೊಂಬಿನಿಂದ ತಿವಿಯಲು ಬರುತ್ತದೆ. ತಾಯಿ ಹಸು, ತನ್ನ ಕರುವಿನ ತಂಟೆಗೆ ಯಾರಾದರೂ ಬಂದಲ್ಲಿ, ಸಿಂಹಿಣಿಯಂತೆ ವರ್ತಿಸುತ್ತದೆ. ನಾಯಿಯೂ ನಮ್ರನಡತೆಯ ಪ್ರಾಣಿ. ಆದರೆ ಒಂದೊಂದು ಸಾರಿ ಅದೂ ಸಹನೆಮೀರಿ ಕೋಪಗೊಳ್ಳುತ್ತದೆ. ಕತ್ತೆ, ಯಾವಾಗಲೂ ತನ್ನ ವರ್ತನೆ ಬದಲಾಯಿಸುವುದೇ ಇಲ್ಲ. ಕತ್ತೆಗೆ ಚನ್ನಾಗಿ ಏಟುಬೀಳಲಿ, ಇಲ್ಲವೆ ಹೊಟ್ಟೆಗೆ ಹಾಕದಿರಲಿ, ಅದು ಅತೃಪ್ತಿ ತೋರುವುದಿಲ್ಲ; ಬದಲಾವಣೆಯನ್ನೇ ತೋರುವುದಿಲ್ಲ. ವಸಂತ ಕಾಲದಲ್ಲಿ, ಕತ್ತೆ ಕೆಲವು ವೇಳೆ ಕುಣಿದು ನೆಗೆದಾಡಿರಬಹುದು, ಆದರೆ ಸಂತೋಷವನ್ನು ಎಂದೂ ವ್ಯಕ್ತಪಡಿಸಿಲ್ಲ. ಕತ್ತೆಯ ಮೊಗದಲ್ಲಿ ಸದಾ ದುಃಖಮಿಶ್ರಣ ಛಾಯೆ ಕಾಣುತ್ತಲೇ ಇರುತ್ತದೆ.

ಸಾಧು ಸತ್ಪುರುಷರ ಸದ್ಗುಣಗಳು, ಕತ್ತೆಯಲ್ಲಿ ಕೂಡಿಕೊಂಡಿದೆ ಎನ್ನಬಹುದು. ಈ ಗುಣಗಳಿಂದ ಕೂಡಿದ ಪ್ರಾಣಿಯನ್ನು "ದಡ್ಡ ಪ್ರಾಣಿ"ಯೆಂದು ಕರೆಯದೆ ಬಿಡುವುದಿಲ್ಲ. ಸಾಧುಗುಣಗಳನ್ನೊಳಗೊಂಡ ಈ ಪ್ರಾಣಿಗೆ, ಹೀಗೆ ಅವಮಾನಮಾಡುವ ಕೆಲಸ ನಮ್ಮಲ್ಲಲ್ಲದೆ ಬೇರೆ ಎಲ್ಲಿಯೂ ನಡೆದಿಲ್ಲ. ಸರಳ ನಡೆವಳಿಕೆ, ಸರಳ ವರ್ತನೆ ಎಂದರೆ ಜಗಕ್ಕೆ ಸರಿಬೀಳದೆಂದು ಕಾಣುವುದು. ಆಫ್ರಿಕದಲ್ಲಿ ನೋಡಿ. ಹಿಂದೂ ಜನರಿಗೆ ಅವಹೇಳನ ತಪ್ಪಿದ್ದಿಲ್ಲ. ಅಮೇರಿಕದಲ್ಲಿ ಹಿಂದೂಸ್ಥಾನದವರಿಗೆ ಸ್ಥಾನವೇಕಿಲ್ಲ? ನಮ್ಮವರು ಕುಡುಕರಲ್ಲ, ಕಾಲುಕರೆದು ಜಗಳಕ್ಕೆ ಕರೆಯುವವರಲ್ಲ, ಹಾಗೆ ಜಗಳಕ್ಕೆ ಯಾರಾದರೂ ಎಳೆದರೆಂದರೆ, ನಮ್ರಭಾವದಿಂದ

ಶರಣು ಹೊಡೆಯುತ್ತಾರೆ. ಹೊಟ್ಟೆಗೆ ಕಡಿಮೆಯಾದರೂ ಸಹಿಸುವರು, ತಾಳ್ಮೆ ಸಡಿಲಿಸುವುದಿಲ್ಲ. ಹೀಗೆ ಶಾಂತಮೂರ್ತಿಗಳೆನಿಸಿದ್ದರೂ, ಇತರರು ಅಗೌರವದಿಂದ ನೋಡುತ್ತಾ, ಭಾರತೀಯರು ಸುಶಿಕ್ಷಿತರಲ್ಲ, ಅವರಿಗೆ ನಾಗರೀಕತೆ ತಿಳಿದಿಲ್ಲ, ಉಚ್ಚಜೀವನದ ಮೇಲ್ಮಟ್ಟದಲ್ಲಿಲ್ಲ ಎಂದು ತಳ್ಳಿಬಿಟ್ಟಿದ್ದಾರೆ. ಯುಕ್ತಿಗೆ ಪ್ರತಿಯುಕ್ತಿ, ಮುಯ್ಯಿಗೆ ಮುಯ್ಯಿ, ಸವಾಲಿಗೆ ಪ್ರತಿಸವಾಲು, ಈ ರೀತಿ ಭಾರತೀಯರು ಸೇರಿಗೆ ಸವಾಸೇರಾಗಿದ್ದಲ್ಲಿ, ನಾಗರೀಕರೆಂದು ಇತರರು ಪರಿಗಣಿಸುತ್ತಿದ್ದರೋ ಏನೋ? ಉದಾಹರಣೆಗೆ ಜಪಾನು ತೆಗೆದುಕೊಳ್ಳೋಣ. ಅದು ಒಂದು ಸಾರಿ ಜಯಭೇರಿ ಹೊಡೆದು ತನ್ನ ಸ್ಥಾನ, ಮಾನ, ಗೌರವ ಕಾಪಾಡಿಕೊಂಡಿತು. ಅಂದಿನಿಂದ ಅದಕ್ಕೆ ಸರಿಸಮಾನತೆ, ವರ್ಚಸ್ಸು, ನಾಗರೀಕತೆ, ಎಲ್ಲರಿಗೂ ದೊರೆತಂತೆ ದೊರಕಿತು.

ಕತ್ತೆಗೆ ಚಿಕ್ಕ ಸೋದರನೊಬ್ಬನಿದ್ದಾನೆ. ಅದು ಕತ್ತೆಯಷ್ಟು ದಡ್ಡದಲ್ಲ. ಅದು ಗೂಳಿ. ನಾವು ವಜ್ರಶುಂಠನನ್ನು, ಗೂಳಿಯೆಂದು ಕರೆಯುತ್ತೇವೆ. ವಜ್ರಶುಂಠನಿಗೆ ದೇಹಶಕ್ತಿಯಿರುತ್ತದೆ, ಆದರೆ ಬುದ್ಧಿ ಚುರುಕಾಗಿರುವುದಿಲ್ಲ. "ದೇಹ ಬೆಳೆಸಿಕೊಂಡು ಗೂಳಿಯ ಹಾಗಿರುವ" ಎನ್ನುತ್ತೇವೆ. ಗೂಳಿಗೆ, ಈ ಹೆಸರುಕಟ್ಟಿ ಕತ್ತೆಯೊಂದಿಗೆ ಹೋಲಿಸಿರುವುದು ಸರಿಯಲ್ಲ. ಗೂಳಿ ತನ್ನ ಅತೃಪ್ತಿಯನ್ನು ತೋರ್ಪಡಿಸುತ್ತದೆ. ತನ್ನನ್ನು ಹಿಂಸಿಸಲು ಬಂದಾಗ ಕೊಂಬಿನಿಂದ ತಿವಿಯಲು ಬರುತ್ತದೆ. ಕತ್ತೆಯಷ್ಟು ಮೂಢಪ್ರಾಣಿಯೆಂದು ಅದನ್ನು ಎಣಿಸಲಾಗದು. ಕತ್ತೆಗಿಂತ ಅದು ಹೆಚ್ಚು ದೇಹಶ್ರಮಪಡುವುದು. ಅದು ಕತ್ತೆಯಷ್ಟು ಖಂಡಿತ ಶುಂಠಿಯಲ್ಲ.

೨

ವನಮಾಲಿ ಜೂರಿಯ ಹತ್ತಿರ ಎರಡು ಗೂಳಿಗಳಿದ್ದವು. ಹೀರಾ ಮತ್ತು ಮೋತಿಯೆಂಬ ಹೆಸರಿನಿಂದ ಅವುಗಳನ್ನು ಅವನು ಕರೆಯುತ್ತಿದ್ದ. ಈ ಗೂಳಿಗಳು ನೋಡಲು ಬಹಳ ಸೊಗಸಾಗಿದ್ದವು. ಕೆಲಸದಲ್ಲಿಯೂ ಅಷ್ಟೆ; ಚಟುವಟಿಕೆಯ ಪ್ರಾಣಿ. ಒಬ್ಬ ಯಜಮಾನನ ಆಡಳಿತದಲ್ಲಿ, ಒಂದೇ ಭಾವಣಿಯ ಅಡಿಯಲ್ಲಿ, ಈ ಗೂಳಿಗಳು ಬಹಳಕಾಲ ಜೀವಿಸಿ

ದುದರಿಂದ, ಇವುಗಳಲ್ಲಿ ಒಂದು ತರಹೆಯ ಸಹಜಪ್ರೇಮ ಬೆಳೆದು ಬಂದಿತು. ಈ ಗೂಳಿಗಳಿಗೆ, ಹೇಗೆ ತಮ್ಮೊಳಗಿನ ಬೇಧಭಾವಗಳು ಅರಿವಾಗುತ್ತಿದ್ದವೋ ತಿಳಿಯದು. ಆದರೂ ಇವುಗಳಿಗೆ ಬೇಧಗಳನ್ನರಿತು ಕೊಳ್ಳುವ ಸಾಮರ್ಥ್ಯವಿತ್ತು. ಮನುಷ್ಯನಿಗೆ ಕಾರ್ಯಪ್ರವೃತ್ತಿ, ಧೀಶಕ್ತಿ ಯಿರುವುದರಿಂದ, ಅವನು ದೈವ ಸೃಷ್ಟಿಸಿದ ಎಲ್ಲಾ ಪ್ರಾಣಿಗಳಿಗಿಂತ ತಾನು ಹೆಚ್ಚೆಂದು ತಿಳಿದಿರುತ್ತಾನೆ. ಗೂಳಿ, ಅಗೋಚರವಾದ ತನ್ನ ಸಾಮರ್ಥ್ಯ ದಿಂದ ತನ್ನ ಬಳಗದ ನೋವು, ದುಃಖ, ಸಂಕಟಗಳನ್ನು ಅರಿತುಕೊಳ್ಳು ತ್ತದೆ. ಗೂಳಿಯ ಧೀಶಕ್ತಿ ಬಲದಿಂದ ಮಾನವನ ಹೆಚ್ಚಳಿಕೆ, ಕಡಿಮೆ ಯಾಯಿತೆನ್ನಬಹುದು. ಗೂಳಿಗಳು ಪರಸ್ಪರ ಪ್ರೀತಿ, ಒಡಂಬಡಿಕೆ ಯನ್ನು ತಮ್ಮ ಸಹಜಪ್ರಾಣಿಗಳೊಂದಿಗೆ ವಾಸನೆಯಿಂದಲೋ ಅಥವಾ ನಾಲಿಗೆಯಿಂದ ನೆಕ್ಕಿಯೋ ವ್ಯಕ್ತಪಡಿಸುತ್ತದೆ. ಪ್ರೇಮವನ್ನು ವ್ಯಕ್ತಪಡಿ ಸಲು, ಒಂದೊಂದು ಸಾರಿ ತಮ್ಮತಮ್ಮ ಕೊಂಬುಗಳನ್ನು ಜೋಡಿಸಿ ಮೇಳನವಮಾಡುತ್ತದೆ. ಪ್ರೇಮ ವ್ಯಕ್ತಪಡಿಸದಿದ್ದಲ್ಲಿ ಪ್ರಾಣಿಗಳ ಸೊಬಗು ತಿಳಿಯುವುದಿಲ್ಲ. ಹೀರಾ ಮತ್ತು ಮೋತಿಯಲ್ಲಿ ಒಂದು ಬಗೆಯ ವೈಶಿಷ್ಟ್ಯವಿತ್ತು. ಗಾಡಿಗೆ ಕಟ್ಟಿದರಾಗಲೀ ಅಥವಾ ನೇಗಿಲಿಗೆ ಕಟ್ಟಿದ ರಾಗಲೀ ಈ ಗೂಳಿಗಳು ಸಮಭಾರ ಹೊತ್ತು ಠೀವಿಯಿಂದ ಹೆಜ್ಜೆ ಹಾಕುತ್ತಿದ್ದವು. ಮುಂಜಾನೆಯ ಕೆಲಸದ ನಂತರ, ಸಂಧ್ಯಾಕಾಲ ಪೂರಾ ತೆರಪುಸಿಕ್ಕಿದಾಗ, ಈ ಗೂಳಿಗಳು ಜತೆಯಾಗಿ ಒಂದನ್ನೊಂದು ಬಿಡದೆ ಇರುತ್ತಿದ್ದವು. ತಿನ್ನುವಾಗಲೂ ಎರಡೂ ಒಟ್ಟಿಗೆ ಹುಲ್ಲಿನ ಬಾನಿಗೆ ಮೂತಿ ಹಾಕುತ್ತಿದ್ದವು. ಕೂತರೂ ನಿಂತರೂ ಸಹಾ ಒಂದನ್ನೊಂದು ಎಡಬಿಡದೆ ಸಮಸ್ನೇಹಭಾವದಿಂದಿರುತ್ತಿದ್ದವು. ಒಂದು ಗೂಳಿ ಬಾನಿಗೆ ಬಾಯಿ ಹಾಕದೆ ಮೂತಿ ತಿರುಗಿಸಿ ನಿಂತುಕೊಂಡಲ್ಲಿ, ಇನ್ನೊಂದೂ ಮೂತಿ ತಿರುಗಿಸಿ ನಿಂತುಬಿಡುತ್ತಿತ್ತು.

ಜೂರಿ ಒಂದುಸಾರಿ ಪ್ರಮಾದವಶಾತ್ ತನ್ನ ಗೂಳಿಗಳನ್ನು ಮಾವನ ಮನೆಗೆ ಕಳುಹಿಸಿದ. ಜೂರಿಯ ಈ ವರ್ತನೆ ಗೂಳಿಗಳಿಗೆ ಅರ್ಥವಾಗ ಲಿಲ್ಲ. ಯಜಮಾನ ತಮ್ಮನ್ನು ಮಾರಿ, ಕೊಟ್ಟುಕಳುಹಿಸಿದ್ದಾನೆಂದು ಅವು ತಿಳಿದುಕೊಂಡವು. ಈ ರೀತಿ ತಮ್ಮನ್ನು ಇತರರಿಗೆ ಮಾರಾಟ

ಮಾಡಿದುದು ಅವುಗಳಿಗೆ ಸರಿತೋರಲಿಲ್ಲ. ಮಾರುವುದು, ಬಿಡುವುದು, ಇವನ್ನು ಗೂಳಿಗಳು ಹೇಗೆ ನಿರ್ಧರಿಸಬಲ್ಲವು, ಅಲ್ಲದೆ ಅವುಗಳ ಇಷ್ಟಾರ್ಥ ತಿಳಿಯುವರಾರು? ಜೂರಿಯ ಮೈದುನ ತನ್ನ ಮನೆಯ ಕಡೆಗೆ ಈ ಗೂಳಿಗಳನ್ನು ಅಟ್ಟ ತರಬೇಕಾಯಿತು. ಅವುಗಳನ್ನು ಹಿಂದಿನಿಂದ ಬೆದರಿಸಿದರೆ, ಅಕ್ಕಪಕ್ಕದ ಕಡೆಗೆ ಹೆಜ್ಜೆಯಿಡುತ್ತಿದ್ದವು. ಮೂತಿಯ ಹಗ್ಗದಿಂದ ಮುಂದಕ್ಕೆ ಎಳೆದರೆ, ಅವು ಮೊಗವನ್ನು ತಗ್ಗಿಸಿ, ಗುಟುರುಹಾಕಿ ಕೂಗಿಕೊಳ್ಳುತ್ತಿದ್ದವು. ದೈವ, ಈ ಗೂಳಿಗಳಿಗೆ ಮಾತ ನಾಡುವ ಶಕ್ತಿಯಿತ್ತಿದ್ದರೆ, ಅವು "ನಮ್ಮನ್ನು ಮನೆಯಿಂದೇಕೆ ಹೊರಗೆ ಹಾಕುತ್ತಿರುವೆ. ನಮ್ಮ ಶಕ್ತಿಯನ್ನೆಲ್ಲಾ ಹೀರಿ ನಿನಗೆ ದುಡಿಯುತ್ತಿಲ್ಲವೆ? ನಮ್ಮ ದುಡಿತದಲ್ಲಿ ನಿನಗೆ ತೃಪ್ತಿ ಕಂಡುಬರದಿದ್ದಲ್ಲಿ, ನೀನು ಮತ್ತೂ ಹೆಚ್ಚಿನ ಕೆಲಸ ಮಾಡಿಸಿಕೊಳ್ಳಬಹುದಾಗಿತ್ತು. ನಾವು ಸಂತೋಷದಿಂದ ದುಡಿದು ಸಾಯುವುದಕ್ಕೂ ಸಿದ್ಧವಾಗುತ್ತಿದ್ದೆವು. ನಮಗೆ ಒದಗಿಸುವ ಆಹಾರ ವಿಚಾರದಲ್ಲಿ ನಾವು ಆಕ್ಷೇಪಿಸುತ್ತಿಲ್ಲ. ನೀಡಿದ ಆಹಾರವನ್ನು ನಾವು ನಮ್ರತೆಯಿಂದ ಮೆಲ್ಲುತ್ತಿದ್ದೇವೆ. ಹೀಗಿದ್ದರೂ ಹಿಂಸಕ ಗಯನಿಗೆ ನಮ್ಮನ್ನು ಮಾರಿದುದೇಕೆ?" ಎಂದು, ಜೂರಿಯನ್ನು ಕೇಳಿಬಿಡುತ್ತಿದ್ದವು.

ಸಂಜೆಯವೇಳೆಗೆ ಹೀರಾ ಮತ್ತು ಮೋತಿ ಹಿಂಸಕ ಗಯನ ಮನೆಗೆ ಬಂದವು. ಬೆಳಗಿನಿಂದ ಉಪವಾಸವಿದ್ದ ಗೂಳಿಗಳನ್ನು ಬಾನಿಯ ಬಳಿಗೆ ಒಯ್ದರು. ಒಂದಾದರೂ ಬಾನಿಯೊಳಗೆ ಮೂತಿ ಹಾಕಲಿಲ್ಲ. ಸುಮ್ಮನೆ ನಿಂತುಕೊಂಡವು. ತಮ್ಮ ಮನೆಯಿಂದ ಅವುಗಳನ್ನು ಬೇರೆ ಕಡೆಗೆ ಕರೆತಂದುದರಿಂದ ಅವುಗಳು ಮನಸ್ಸಿಲ್ಲದೆ ನಿಂತುಕೊಂಡಿದ್ದವು. ಪರಿಚಯ ವಿಲ್ಲದ ಹೊಸಮನೆಯಲ್ಲಿ ಅಪರಿಚಿತರಂತೆ ಅವು ಕಾಣಿಸಿಕೊಂಡವು.

ಗೂಳಿಗಳು ತಮ್ಮ ಮೂಕಭಾಷೆಯಲ್ಲಿ ಪರಸ್ಪರ ಮಾತನಾಡಿ ಕೊಂಡವು. ಓರೆಗಣ್ಣಿನಿಂದ ನೋಡುತ್ತಾ ಅವು ಮಲಗಿಬಿಟ್ಟವು. ಇಡೀ ಹಳ್ಳಿಜನರೆಲ್ಲ ನಿದ್ರಿಸುತ್ತಿದ್ದಾಗ, ಕಟ್ಟಿದ ಹಗ್ಗವನ್ನು ತುಂಡಾಗಿ ಕಡಿದು, ಯಜಮಾನ ಜೂರಿಯ ಮನೆಯ ಕಡೆಗೆ ಓಡಿಬಿಟ್ಟವು. ಕಟ್ಟಿದ ಹಗ್ಗ ಕಡಿಯಲಾರದಷ್ಟು ಗಟ್ಟಿಯಾಗಿದ್ದವು. ತಮ್ಮ ಶಕ್ತಿಬಲವನ್ನು ತೋರಿ, ಹಗ್ಗವನ್ನು ಜಗ್ಗಿ ಗೂಳಿಗಳು ಕೆಲಸ ಸಾಧಿಸಿಕೊಂಡುಬಿಟ್ಟವು.

೩

ವನಮಾಲಿ ಜೂರಿ ಮುಂಜಾನೆ ಎದ್ದು ನೋಡುವಾಗಲೇ ಹೀರಾ ಮೋತಿ ಎಂದಿನಂತೆ ಬಾನಿಯ ಬಳಿ ನಿಂತುಕೊಂಡಿದ್ದವು. ಅವುಗಳ ಮೂತಿಯು ಅಕ್ಕಪಕ್ಕದಲ್ಲಿ ಚಿಂದಿಯಾಗಿ ಪಗ್ಗ ಜೋಲಾಡುತ್ತಿದ್ದವು. ಕಾಲುಗಳಮೇಲೆ ಮಣ್ಣಿನ ದೂಳಿನ ಕಲೆಯಿದ್ದವು. ಅವುಗಳ ಕಣ್ಣಿನಲ್ಲಿ ಕೆಣಕುವಂತಹ ಪ್ರೀತಿ ಎದ್ದು ಕಾಣುತ್ತಿದ್ದವು. ಪ್ರೇಮಪಾತ್ರವಾದ ಗೂಳಿಗಳನ್ನು ನೋಡಿದ ಕೂಡಲೇ ಜೂರಿಗೆ ಆನಂದವಾಯಿತು. ಅವುಗಳನ್ನು ತಬ್ಬಿ, ಚುಂಬಿಸಿ ಪ್ರೀತಿತೋರಿದ. ಈ ಪ್ರೇಮೋತ್ಸಾಹ ನೋಡಲು ಮೋಹಕವಾಗಿದ್ದಿತು.

ಹಳ್ಳಿಯ ಬಾಲಕರೆಲ್ಲ ಗೂಳಿಗಳನ್ನು ನೋಡಿ ಸುತ್ತಲೂ ನೆರೆದು ಸಂತೋಷದಿಂದ ಕೈತಟ್ಟುತ್ತಾ ಆನಂದವನ್ನು ತೋರಿದರು. ಹಳ್ಳಿಯಲ್ಲಿ ಈ ಬಗೆಯ ರಂಜನೆ ಹೊಸದಲ್ಲವಾದರೂ, ನೋಡುವುದಕ್ಕೆ ಅಪೂರ್ವವಾಗಿದ್ದಿತು. ಬಾಲಕರ ಗುಂಪು ಮನೆಯಿಂದ ತವುಡು, ಹೊಟ್ಟು, ಸಿಪ್ಪೆ, ಜೇನುಬೆಲ್ಲ ಮುಂತಾದುವನ್ನು ತಂದು ಗೂಳಿಗೆ ತಿನ್ನಿಸುತ್ತಾ, ತಮ್ಮ ಸಂತೋಷವನ್ನು ಈ ಬಗೆಯಲ್ಲಿ ತೋರ್ಪಡಿಸುತ್ತಾ ಕುಣಿದಾಡಿದರು.

ಅವರೊಳಗೊಬ್ಬ "ಯಾರೊಬ್ಬರ ಹತ್ತಿರವೂ ಇಷ್ಟು ಚನ್ನಾಗಿರುವ ಗೂಳಿಯಿರದು" ಎಂದ.

ಚಿಕ್ಕಮಗುವೊಂದು "ಜತೆಯಿಲ್ಲದೆ ಇವು ಬಹಳ ದೂರದಿಂದ ತಾವಾಗಿಯೇ ಮನೆಗೆ ಹಿಂದಿರುಗಿ ಬಂದುಬಿಟ್ಟವೆ" ಎಂದಿತು.

ಈ ಬಾಲರ ಪ್ರತಿಪಾದನೆಗೆ ಎದುರಾಗಿ ಹೇಳುವ ಎದೆ ಯಾರಿಗೂ ಇರಲಿಲ್ಲ.

ಜೂರಿಯ ಹೆಂಡತಿಗೆ, ಹೇಗೋ ಗೂಳಿಗಳು ಹಿಂದಿರುಗಿ ಮನೆಗೆ ಬಂದ ವಾಸನೆ ತಿಳಿದುಹೋಯಿತು. ಅವಳು ಘಟ್ಟಿಯಾಗಿ ಕೂಗುತ್ತಾ "ಎಂತಹ ವಿಶ್ವಾಸವಿಲ್ಲದ ಜಂತುಗಳು ಇವು! ಒಂದುದಿನದ ಮಟ್ಟಿಗೆಯೂ ತಾಯಿಮನೆಯಲ್ಲಿ ಕೆಲಸಮಾಡದೆ ಬಂದುಬಿಟ್ಟಿದೆಯಲ್ಲಾ" ಎಂದಳು.

ಜೂರಿಗೆ, ತನ್ನ ಪ್ರಿಯಗೂಳಿಗಳಿಗೆ ಈರೀತಿ ದೋಷಾರೋಪಣೆ ಮಾಡಿದುದು ಸರಿತೋರಲಿಲ್ಲ. ಅವನು "ಇವು ನಂಬಿಗೆಗೆಡುಕಪ್ರಾಣಿ

ಗಳಾಗಿಲ್ಲ. ಇವುಗಳಿಗೆ ಚನ್ನಾಗಿ ತಿನ್ನುವುದಕ್ಕೆ ಅಲ್ಲಿ ಸಿಗಲಿಲ್ಲವೇನೋ, ಉಪಾಯತೋರದೆ ಹಿಂದಿರುಗಿ ಬಂದುಬಿಟ್ಟವೆ" ಎಂದ.

ಹೆಂಡತಿಯು ಒಂದು ತರಹೆಯ ವಿಶಿಷ್ಟಗರ್ವ ತೋರಿ, "ನಿಮಗೆ ಮಾತ್ರವೇ ಗೂಳಿಗಳನ್ನು ಸಾಕುವ ವಿಧಾನ ಗೊತ್ತಿರುವುದು! ಉಳಿದವರು ಬರೀ ನೀರಿನ ಪೋಷಣೆಯಿಂದಲೇ ಗೂಳಿಗಳನ್ನು ಸಾಕುತ್ತಾರಲ್ಲವೇ?" ಎಂದಳು.

ಜೂರಿ, ಹೆಂಡತಿಯನ್ನು ರೇಗಿಸುತ್ತಾ "ಒಳ್ಳೆಯ ಚಲುವಾದ ತಿನಿಸು ಅವಕ್ಕೆ ಅಲ್ಲಿ ಸಿಕ್ಕಿದ್ದರೆ, ಅಲ್ಲಿಂದಿಲ್ಲಿಗೆ ಓಡಿಬರುವ ಪ್ರಯತ್ನವೇಕೆ ಅವು ಮಾಡುತ್ತಿತ್ತು" ಎಂದ.

ಕೋಪದಿಂದ ಜೂರಿಯ ಹೆಂಡತಿ "ಪ್ರಾಣಿಗಳಿಗೆ ಇಲ್ಲಿ ನಿಮ್ಮ ಜನರು ತೋರುವಷ್ಟು ದಯೆಯನ್ನು, ಅಲ್ಲಿ ತೋರಲಿಕ್ಕೆ ಅವರಿಗಷ್ಟು ವೇಳೆಯಿಲ್ಲ. ಯಥೇಷ್ಟ ಆಹಾರವನ್ನು ನೀಡುತ್ತಾರೆ, ಅಷ್ಟು ದಣಿಸಿ ಕೆಲಸ ತೆಗೆದುಕೊಳ್ಳುತ್ತಾರೆ. ನಿಮ್ಮ ಗೂಳಿಗಳು ವೈಗಳ್ಳ ಪ್ರಾಣಿಗಳು. ಅದಕ್ಕೇ ಇವು, ಕಾಲ್ತೆಗೆದು ದೌಡಾಯಿಸಿ ಬಂದುಬಿಟ್ಟವೆ. ಇವುಗಳಿಗೆ ಇಲ್ಲಿ ತೌಡು ಹಿಂಡಿ ಸಿಗಲಾರದು. ಒಣಗಿದ ಹುಲ್ಲೇ ಇವಕ್ಕೆ ಇನ್ನು ಸಿಗುವುದು. ಬೇಕಾದರೆ ತಿನ್ನಲಿ, ಇಲ್ಲದಿದ್ದರೆ ಸಾಯಲಿ" ಎಂದಳು.

ಯಜಮಾನತಿಯ ಆಣತಿಯಂತೆ, ಆಳು ಗೂಳಿಗಳಿಗೆ ನಿಯಮಿಸಿದ ಮಿತ ಆಹಾರವನ್ನು ಬಾನಿಯಲ್ಲಿ ಸುರಿದು ತಿನ್ನುವಂತೆ ಅಟ್ಟಿದ. ಅವು ಬಾನಿಯೊಳಗೆ ಮೂತಿಯನ್ನು ಹಾಕಿ, ತಮಗೆ ಸುರಿದ ಆಹಾರದಲ್ಲಿ ಎಣ್ಣೆ ಅಥವಾ ರಸದ ರುಚಿ ಕಾಣದ್ದರಿಂದ ತಿನ್ನದೆ, ಆಸೆಯಿಂದ ನಿರೀಕ್ಷಿಸಿ ಬಾಗಿಲಕಡೆಗೆ ನೋಡುತ್ತ ನಿಂತುಬಿಟ್ಟವು.

ಹೀಗೆ ನಡೆಯುತ್ತಿದ್ದುದನ್ನು ನೋಡಿದ ಜೂರಿ, ಸೇವಕನನ್ನು ಕರೆದು "ಸ್ವಲ್ಪ ಹಿಂಡಿಯನ್ನು ಸೇರಿಸಿ ಹಾಕಬಾರದೇಕೆ?" ಎಂದು ಕೇಳಿದನು.

"ಸೇರಿಸಿದಲ್ಲಿ, ಯಜಮಾನತಿ ನನ್ನನ್ನು ಹೊಡೆದು ಸಾಯಿಸುತ್ತಾಳೆ" ಎಂದನು.

"ಅವಳಿಗೆ ಗೊತ್ತಾಗದಂತೆ ಸೇರಿಸಿಬಿಡು."

"ಹಾಗೆ ಮಾಡಿದರೆ, ನೀವೂ ಅವರೊಡನೆ ಸೇರಿ ನನ್ನನ್ನು ಹೊಡೆಯುವಿರಿ."

ಮರುದಿನ ಜೂರಿಯ ಮೈದುನ, ಪುನಃ ಗೂಳಿಗಳನ್ನು ತನ್ನ ಮನೆಗೆ ಒಯ್ದನು. ಈ ಸಾರಿ ಗೂಳಿಗಳನ್ನು ಗಾಡಿಯಲ್ಲಿ ಹೇರಿ ಅವನು ಸಾಗಿಸಿಕೊಂಡು ಹೊರಟ. ನಾಲ್ಕು ಬಾರಿ ಮೋತಿ, ಗಾಡಿಯ ಚಕ್ರ ಉರುಳುತ್ತಿದ್ದಾಗ, ಪಕ್ಕದ ಹಳ್ಳದಲ್ಲಿ ಮಗುಚಿ ಬೀಳುವಂತೆ ಅಲುಗಾಡಿತು. ಸಹನೆಯ ಪ್ರಾಣಿ ಹೀರಾ, ಮೋತಿಯ ಯೋಜನೆಯನ್ನರಿತು, ಅದನ್ನು ಎಚ್ಚರಿಸಿ ಹಿಂದಕ್ಕೆಳೆಯಿತು. ಹಿಂಸಕ ಗಯ ಅವನ್ನು ಮನೆಗೆ ಒಯ್ದ ಮೇಲೆ, ಬಲವಾದ ಹಗ್ಗದಿಂದ ಕಟ್ಟಿಹಾಕಿ, ಹಿಂದಿನ ದಿನ ತಪ್ಪಿಸಿಕೊಂಡು ಹೋದದ್ದಕ್ಕೆ ಫಲವೆಂದು, ಒಣಗಿದ ಹುಲ್ಲನ್ನು ಅವುಗಳ ಮುಂದೆ ಹಾಕಿ, ಪ್ರತಿಯಾಗಿ ತನ್ನವುಗಳಿಗೆ ಹೆಚ್ಚಾಗಿ ಹಿಂಡಿ ತವುಡು ಹಾಕಿ ಸೇಡು ತೀರಿಸಿಕೊಂಡ.

ಹೀರಾ ಮೋತಿ ಎಂದಿಗೂ ಇಂತಹ ಅವಮಾನವನ್ನು ಕಂಡಿರಲಿಲ್ಲ. ಜೂರಿ ಒಂದು ದಿನವೂ ಅವುಗಳಿಗೆ ಕೋಲಿನಿಂದ ಹೊಡೆದಿರಲಿಲ್ಲ. "ಹೋ!" ಎಂದರೆ ಸಾಕು, ವೇಗವಾಗಿ ಓಡುತ್ತಿದ್ದುದರಿಂದ, ಜೂರಿ ಹಿಂಸಿಸುವ ಗೋಜಿಗೆ ಹೋಗಿರಲಿಲ್ಲ. ಗಯನ ಮನೆಯಲ್ಲಿ ಗೂಳಿಗಳು ಬಹಳ ಹೊಡೆತ ತಿಂದವು. ಅಲ್ಲದೆ ಹೊಟ್ಟೆಗೆ ಹಿಡಿಸದ ಆಹಾರವನ್ನು ನೀಡುತ್ತಿದ್ದುದು ಬೇರೆ. ಅವುಗಳ ಸಹನೆ ಮಿತಿಮೀರಿಹೋಯಿತು. ಬಾನಿಯ ಕಡೆಗೆ ಅವು ದೃಷ್ಟಿಹರಿಸುತ್ತಲೇ ಇರಲಿಲ್ಲ.

ಗಯ ಜೋಡಿ ಗೂಳಿಗಳನ್ನು ನೇಗಿಲಿಗೆ ಕಟ್ಟಿ ಹೊಡೆದ. ಏನಾದರಾಗಲಿ ಹೆಜ್ಜೆ ಮುಂದಿಡುವುದಿಲ್ಲ ಎಂದವು ನಿಶ್ಚಯಮಾಡಿಬಿಟ್ಟವು. ಹೊಡೆದು ಹೊಡೆದು ಅವನೇ ದಣಿದುಬಿಟ್ಟ. ಗೂಳಿಗಳು ಮಾತ್ರ ತಮ್ಮ ಹಠವನ್ನು ಸಡಿಸಲಿಲ್ಲ. ಒಂದು ತಡವೆ, ಹೀರಾವಿನ ಮೂಗಿನಮೇಲೆ ಅವನು ದಯಾಶೂನ್ಯನಾಗಿ ಹೊಡೆದುಬಿಟ್ಟ. ಮೋತಿಗೆ ಮಿತಿಮೀರಿ ಕೋಪಬಂತು. ಅದು ವೇಗವಾಗಿ ಓಡುತ್ತಾ ನೇಗಿಲನ್ನು ಮುರಿದು ಹಾಕಿ, ಹಗ್ಗವನ್ನು ಕತ್ತರಿಸಿಬಿಟ್ಟಿತು. ಅದರ ಕೊರಳಲ್ಲಿ ಉದ್ದವಾದ ಹಗ್ಗವಿಲ್ಲದಿದ್ದಲ್ಲಿ, ಅಂದು ಅದನ್ನು ಪುನಃ ಹಿಡಿಯಲಾಗುತ್ತಲೇ ಇರಲಿಲ್ಲ.

ಹೀರಾ, ಮೋತಿಯನ್ನು ನೋಡಿ ಮೂಕ ಸಂಜ್ಞೆಯಿಂದಲೇ "ಓಡಿಹೋಗುವುದರಿಂದ ಪ್ರಯೋಜನವಿಲ್ಲ" ಎಂದಿತು.

ಅದೇ ಸಂಜ್ಞೆಯ ರೀತಿಯಲ್ಲಿ ಮೋತಿ "ನೀನು ಸಾಯುವಹಾಗೆ ಹೊಡೆದಿದ್ದಾನೆ, ಇನ್ನೂ ಕಠೋರವಾಗಿ ನಮ್ಮನ್ನು ಸದೆಬಡಿಯುತ್ತಾನೆ" ಎಂದಿತು.

"ಇರಬಹುದು! ಗೂಳಿಯೆಂದು ಜೀವತಾಳಿರುವಾಗ ಎಲ್ಲಿಯವರೆಗೆ ಹೊಡೆತ ತಪ್ಪಿಸಿಕೊಳ್ಳಲು ಸಾಧ್ಯ" ಎಂದಿತು ಹೀರಾ.

ಗಯಾ ತನ್ನಿಬ್ಬರ ಸೇವಕರ ಸಹಾಯದಿಂದ ಗೂಳಿಗಳನ್ನು ಅಟ್ಟಿಸಿ ಕೊಂಡು ಬಂದ.

ಇದನ್ನು ಕಣ್ಣಿಟ್ಟು ನೋಡಿದ ಮೋತಿ, ಹೀರಾವಿಗೆ "ಅವನು ದೊಡ್ಡ ಕೋಲನ್ನು ಹಿಡಿದು ಬರುತ್ತಿದ್ದಾನೆ. ನೀನು ಒಪ್ಪಿಗೆಕೊಟ್ಟಲ್ಲಿ, ನನ್ನ ಶಕ್ತಿಸಾಮರ್ಥ್ಯವನ್ನು ಅವನು ಅರಿಯುವಂತೆ ಮಾಡುತ್ತೇನೆ" ಎಂದಿತು.

"ಹಾಗೆ ಮಾಡಬೇಡ. ಸುಮ್ಮನೆ ನಿಂತುಬಿಡು" ಎಂದು ಹೀರಾ ಮೋತಿಯನ್ನು ಒತ್ತಾಯಪಡಿಸಿತು.

"ಅವನು ಪುನಃ ಹೊಡೆದರೆ, ಒಂದಲ್ಲ, ಎರಡುಸಾರಿ ಮುಗ್ಗರಿಸಿ ಬೀಳುವಂತೆ ಮಾಡುತ್ತೇನೆ" ಎಂದಿತು ಮೋತಿ.

"ಹಾಗೆ ಮಾಡಬಾರದು. ಜೀವಜಂತುಗಳಿಗೆ ಇದು ಬದ್ಧವಾದ ಕ್ರಮವಲ್ಲ" ಎಂದಿತು ಹೀರಾ. ಮೋತಿ ನೋವಿನಿಂದ ಚಡಪಡಿಸಿತು.

ಗಯ ಹತ್ತಿರಬಂದು ಗೂಳಿಗಳನ್ನು ಮನೆಯ ಕಡೆಗೆ ಓಡಿಸಿದ. ಈಸಾರಿ ಅದೃಷ್ಟವಶಾತ್ ಅವುಗಳಿಗೆ ಹೊಡೆತ ಬೀಳಲಿಲ್ಲ. ಬಿದ್ದಿದ್ದಲ್ಲಿ, ಮೋತಿ ಮುಯ್ಯಿ ತೀರಿಸಿಕೊಳ್ಳದೆ ಬಿಡುತ್ತಿರಲಿಲ್ಲ. ಗಯ ಮತ್ತು ಅವನ ಸೇವಕರಿಗೆ ಮೋತಿಯ ಮೊಗದಲ್ಲಿ ಎದ್ದು ಕಾಣುತ್ತಿದ್ದ ರೋಷರೇಖೆ ಕಾಣದಿರಲಿಲ್ಲ. ಅವರು ಯುಕ್ತಾಯುಕ್ತ ಜ್ಞಾನ, ಪರಾಕ್ರಮಕ್ಕಿಂತಲೂ ಹೆಚ್ಚಿನದೆಂದು ಎಚ್ಚೆತ್ತು ತಂಟೆಗೆ ಹೋಗದೆಯಿದ್ದರು.

ಆ ದಿನವೂ ಅವುಗಳಿಗೆ ಹೊಟ್ಟೆನ ಆಹಾರ ದೊರೆಯಿತು. ಎಂದಿನಂತೆ ತಿನ್ನದೆ ಆವು ನಿಂತವು. ಮನೆಮಂದಿಯೆಲ್ಲಾ ಊಟಕ್ಕೆ ಕುಳಿತಿದ್ದರು.

ಆ ಸಮಯದಲ್ಲಿ ಚಿಕ್ಕಹುಡುಗಿಯೊಬ್ಬಳು ಓಡಿಬಂದು, ಹೀರಾ–ಮೋತಿಯ ಬಾಯಿಗೆ ರೊಟ್ಟಿಯ ಚೂರನ್ನು ತುರುಕಿ, ಪುನಃ ಹಿಂದಿರುಗಿ ಓಡಿದಳು. ಅವುಗಳ ಹಸಿವಿಗೆ, ಈ ರೊಟ್ಟಿಯ ಚೂರು ಸಾಕಾಗಿರಲಿಲ್ಲ. ಅವುಗಳು ಹೃದಯಪೂರ್ವಕವಾಗಿ ರೊಟ್ಟಿಯನ್ನು ಅಗಿಯುತ್ತಾ, ಹೊಸಜಾಗದಲ್ಲಿಯೂ ತಮ್ಮ ಹಿತಚಿಂತನೆ ನೋಡುವ ವ್ಯಕ್ತಿಯಿದೆಯೆಂದು ಸಂತೋಷಪಟ್ಟವು. ಆ ಚಿಕ್ಕಹುಡುಗಿ ಭೈರವನ ಮಗಳು. ಚಿಕ್ಕಹುಡುಗಿ ತನ್ನ ತಾಯಿಯನ್ನು ಬಹಳದಿನದ ಹಿಂದೆ ಕಳೆದುಕೊಂಡು, ಮಲತಾಯಿಯ ಹಿಡಿತಕ್ಕೆ ಸಿಕ್ಕಿ ಕಷ್ಟಕ್ಕೀಡಾಗಿದ್ದಳು. ಈ ಫಲದಿಂದ, ಗೂಳಿಗಳನ್ನು ನೋಡಿದ ಅವಳಿಗೆ ಮರುಕ ಬಂದಿತು, ಅವಳು ನಿತ್ಯವೂ ದಯೆತೋರುತ್ತಿದ್ದಳು.

ಹಗಲುಹೊತ್ತು ಗೂಳಿಗಳನ್ನು ನೇಗಲಿಗೆ ಕಟ್ಟುತ್ತಿದ್ದರು. ಅವು ಸಿಧಾನಿಸಿ ನಿಂತಾಗ ಬಿರುಸಿನಿಂದ ಹೊಡೆಯುತ್ತಿದ್ದರು. ಸಂಜೆ ಅವುಗಳನ್ನು ಗೂಟಕ್ಕೆ ಕಟ್ಟಿಬಿಟ್ಟಾಗ, ಚಿಕ್ಕಹುಡುಗಿ ನಿತ್ಯದಂತೆ ರೊಟ್ಟಿಯ ಚೂರನ್ನು ಅವುಗಳ ಬಾಯಿಗೆ ತುರುಕಿ ಓಡಿಬಿಡುತ್ತಿದ್ದಳು. ಪ್ರೇಮದಿಂದ ಹುಡುಗಿ ನಿತ್ಯವೂ ನೀಡುತ್ತಿದ್ದ ರೊಟ್ಟಿ ಮತ್ತು ಸ್ವಲ್ಪ ಒಣಹುಲ್ಲನ್ನು ತಿಂದು ಕಾಲದೂಡುತ್ತಿದ್ದ ಗೂಳಿಗಳು, ಶಕ್ತಿಗುಂದದೆ ಉಳಿದವು. ಎಡಬಿಡದೆ, ತಮ್ಮ ಕಣ್ಣಿನಿಂದ ಹಿಂಸಕ ಗಯನಿಗೆ ತೋರು ಮುಯ್ಯಿಯನ್ನು ಅವು ತೋರುತ್ತಲಿತ್ತು.

ಒಂದುದಿನ ಮೋತಿ, ಹೀರಾವಿಗೆ "ಈ ಬೇಗೆಯನ್ನೆಲ್ಲಾ ಸಹಿಸಿಕೊಂಡಿರುವುದು ಇನ್ನು ಸಾಧ್ಯವಿಲ್ಲ" ಎಂದಿತು.

"ಹಾಗಾದರೆ ಏನುಮಾಡಬೇಕೆನ್ನುವೆ?" ಎಂದು ಮೋತಿ ಕೇಳಿತು.

"ಮನೆಮುಂದಿಯಲ್ಲಿ ಒಬ್ಬನನ್ನು ಕೊಂಬಿನಿಂದ ಎತ್ತಿಹಾಕಿ, ದೂಳಿಗೆ ಎಸೆಯಬೇಕೆನ್ನುತ್ತೇನೆ" ಎಂದಿತು.

"ದಯಾಮಯಿ ಚಿಕ್ಕಹುಡುಗಿಯನ್ನು ನೆನೆದುಕೋ, ಅವಳು ನಿತ್ಯವೂ ರೊಟ್ಟಿಯ ಚೂರನ್ನು ನೀಡುತ್ತಿದ್ದಾಳೆ. ಈ ಮನೆ ಯಜಮಾನನ ಮಗಳವಳು. ಅವಳ ತಂದೆಗಾಗಲೀ ತಾಯಿಗಾಗಲೀ ಅನಾಹುತ ಸಂಭವಿಸಿದಲ್ಲಿ, ಚಿಕ್ಕಮಗಳು ಅನಾಥೆಯಾಗುವುದು ಖಂಡಿತ. ಈ ಬಗ್ಗೆ ಯೋಚಿಸಿರುವೆಯೇನು?"

"ನಾನು ಅವಳ ಚಿಕ್ಕಮ್ಮನನ್ನು ಎತ್ತಿಹಾಕಿಬಿಡುವೆ. ಅವಳು ಸ್ವಲ್ಪವೂ ಕನಿಕರ ತೋರದೆ ಮಗಳನ್ನು ಹೊಡೆದು ಹಿಂಸಿಸುತ್ತಿರುತ್ತಾಳೆ."

"ನೀನು, ಕೊಂಬಿನಿಂದ ಹೆಂಗಸರನ್ನು ತಿವಿದು ಹಿಂಸಿಸುವುದು ನಮ್ಮ ಜಂತುವರ್ಗಕ್ಕೆ ನಿಷಿದ್ಧವೆಂಬುದನ್ನು ಮರೆತಂತಿದೆ"

"ನಾವು ತಪ್ಪಿಸಿಕೊಳ್ಳಲು ಏನಾದರೂ ಉಪಾಯತೋರಿದಾಗ, ನೀನು ಒಪ್ಪುವುದೇ ಇಲ್ಲ. ಹಾಗಾದರೆ ನಮ್ಮನ್ನು ಕಟ್ಟಿಹಾಕಿರುವ ಹಗ್ಗವನ್ನು ಕಿತ್ತುಹಾಕಿಬಿಡೋಣ."

"ನಿನ್ನ ಸಲಹೆಗೆ ಒಪ್ಪಿದೆ. ಇಷ್ಟು ದಪ್ಪ ಹಗ್ಗವನ್ನು ಕತ್ತರಿಸುವುದು ಹೇಗೆ ಸಾಧ್ಯವಾದೀತು?"

"ಹೇಗೆ ಕತ್ತರಿಸುವುದೆಂದು ವಿಸ್ತರಿಸುವೆ. ಮೊದಲು ದಪ್ಪಹಗ್ಗವನ್ನು ಜಗಿದು ಜಗಿದು ನಂತರ ಒಂದುಸಾರಿ ಎಳೆಯುವುದು, ಆಗ ಅದು ಕಿತ್ತು ಬರುವುದು."

ಆ ರಾತ್ರಿ ರೊಟ್ಟಿಯನ್ನು ತಿನಿಸಿ ಚಿಕ್ಕಹುಡುಗಿ ಹೊರಟುಹೋದ ಮೇಲೆ, ಮೋತಿ ಮತ್ತು ಹೀರಾ ತಮ್ಮನ್ನು ಬಂಧಿಸಿದ ಹಗ್ಗವನ್ನು ಜಗಿಯುತ್ತಾ ಬಂದವು. ಅವು ಎಷ್ಟು ಪ್ರಯತ್ನಿಸಿದರೂ ಹಲ್ಲಿನ ಮಧ್ಯೆ ಸಿಕ್ಕಿಸಿಕೊಂಡ ಹಗ್ಗವನ್ನು ಕಡಿಯಲಾಗಲಿಲ್ಲ. ಹಗ್ಗ ಅಷ್ಟು ದಪ್ಪವಾಗಿ ಗಟ್ಟಿಯಾಗಿತ್ತು.

ಇದ್ದಕ್ಕಿದ್ದಹಾಗೆ ಮನೆಬಾಗಿಲು ತೆರೆಯಿತು. ಚಿಕ್ಕಹುಡುಗಿ ಹೊರಗೆ ಬಂದಳು. ಹೀರಾ ಮೋತಿ ಎರಡೂ ಅವಳ ಕೈಯನ್ನು ಪ್ರೀತಿಯಿಂದ ನೆಕ್ಕತೊಡಗಿದವು. ಈ ಗೂಳಿಗಳ ಹಣೆಯನ್ನು ಸವರುತ್ತಾ, ಚಿಕ್ಕಹುಡುಗಿ "ನಿಮ್ಮನ್ನು ಬಂಧಿಸಿರುವ ಹಗ್ಗವನ್ನು ಬಿಚ್ಚಿಬಿಡುವೆ. ಬೇಗ ಓಡಿಹೋಗಿ. ಇಲ್ಲದಿದ್ದಲ್ಲಿ, ಇಲ್ಲಿಯ ಜನರು ಸಾಯುವಂತೆ ನಿಮ್ಮನ್ನು ಬಡೆಯುತ್ತಾರೆ. ಈ ದಿನ ನಿಮಗೆ ಮೂಗುದಾರ ಎಳೆಯಬೇಕೆಂದು ಮನೆಯೊಳಗೆ ಮಾತನಾಡಿಕೊಳ್ಳುತ್ತಿದ್ದರು" ಎಂದಳು.

ಹಗ್ಗವನ್ನು ಸಡಿಲಿಸಿ ಬಿಚ್ಚಿಬಿಟ್ಟಳು. ಗೂಳಿಗಳು ಅಲುಗಾಡದೆ ನಿಂತಲ್ಲಿಯೇ ನಿಂತುಬಿಟ್ಟವು.

ಮೋತಿ, ಹೀರಾವನ್ನು "ಮುಂದೆ ಕಾಲಿಡುವುದಿಲ್ಲವೇಕೆ?" ಎಂದಿತು. ಹೀರಾ "ಕಾಲಿಡಬಹುದು. ನಾಳೆ ಚಿಕ್ಕಹುಡುಗಿಗೆ ತೊಂದರೆ ಯಾದೀತು, ಮನೆಯವರು ಈ ಕೆಲಸ ಅವಳಿಂದಾಯಿತೆಂದು ಅನುಮಾನ ಪಟ್ಟಾರು" ಎಂದಿತು.

ಇದ್ದಕ್ಕಿದ್ದಹಾಗೆ ಚಿಕ್ಕಹುಡುಗಿ "ಅಪ್ಪಾ! ಅಪ್ಪಾ! ಚಿಕ್ಕಪ್ಪನ ಗೂಳಿಗಳು ಓಡಿಹೋಗುತ್ತಿವೆ, ಅಟ್ಟಿಬನ್ನಿರಿ! ಅಟ್ಟಿಬನ್ನಿರಿ!" ಎಂದು ಕೂಗಿಕೊಂಡಳು.

ಗಯಾ ಒಳಗಿನಿಂದ ಧಾವಿಸಿಬಂದು, ಕಳವಳದಿಂದ ಗೂಳಿಗಳ ಕಡೆ ಓಡಿಹೋದ. ಅವನ್ನು ಅಟ್ಟಿ ಬಂದಷ್ಟು ಅವು ವೇಗದಿಂದ ಓಡುತ್ತಿದ್ದವು. ಅವನು ಬೊಬ್ಬಾಟಮಾಡಿ ಕೂಗಿಕೊಂಡ. ಹಳ್ಳಿಯ ಕಡೆಗೆ ಕಾಲಿಡುತ್ತಾ ಮತ್ತಷ್ಟು ಜನಗಳನ್ನು ಕರೆಹಾಕಲು ಬಂದ. ಗಯಾ ಹಳ್ಳಿಯ ಕಡೆಗೆ ತಿರುಗಿದಾಗ,ಗೂಳಿಗಳಿಗೆ ತಪ್ಪಿಸಿಕೊಳ್ಳಲು ಮತ್ತಷ್ಟುಅನುಕೂಲವಾಯಿತು. ಅವು ತಮಗೆ ಪರಿಚಯವಾಗಿದ್ದ ಹಾದಿಯಲ್ಲಿ ಓಡುತ್ತಿದ್ದವು. ಓಡುತ್ತಾ ಓಡುತ್ತಾ ಅವು, ಬೇರೊಂದು ಹಳ್ಳಿಯ ಕಡೆಗೆ ಬಂದುಬಿಟ್ಟಿತು. ಒಂದು ಹೊಲದ ಕೊನೆಯಂಚಿನಬಳಿ ನಿಂತು,ಮುಂದೇನು ಮಾಡಬೇಕೆಂದು ಪರಸ್ಪರ ಆಲೋಚಿಸಿದವು.

"ಹೀರಾ ನಾವು ಹಾದಿತಪ್ಪಿದೇವೆಂದು ಕಾಣುವುದು. ನೀನು ಗೊತ್ತುಗುರಿಯಿಲ್ಲದೆ ಓಡಿಬಿಟ್ಟೆ. ಅವನನ್ನು ಎತ್ತಿಹಾಕಿಬಿಡಬೇಕಾಗಿತ್ತು" ಎಂದಿತು ಮೋತಿ.

"ಹಾಗೆ ಎತ್ತಿಹಾಕಿಬಿಟ್ಟಿದ್ದರೆ ಜನರೇನೆನ್ನುತ್ತಿದ್ದರು? ಅವನು ತನ್ನ ಜಾತಿಯನ್ನೂ ಮಾನವತೆಯನ್ನೂ ತೊರೆದಾನು, ನಾವು ತೊರೆಯ ಲಾದೀತೆ?"

ಹಸಿವಿನಿಂದ ಬಳಲಿ ಬಹಳ ಅವು ತೊಂದರೆಪಟ್ಟವು. ಹೊಲದಲ್ಲಿ ಬಟಾಣಿ ಬೆಳೆದು ನಿಂತಿದ್ದವು. ಗೂಳಿಗಳು ಅವನ್ನು ತಿನ್ನಲಾರಂಭಿಸಿದವು. ಆಗಾಗ್ಗೆ, ಯಾರಾದರೂ ತಮ್ಮನ್ನು ಹುಡುಕಿ ಬರುತ್ತಿರುವರೋ ಎಂದು ನೋಡಲು ಮೊಗವೆತ್ತಿ ನೋಡುತ್ತಿದ್ದವು.

9

ಹೊಟ್ಟೆಯ ತುಂಬಾ ತಿಂದು, ಮೊದಲಾಗಿ ತಮ್ಮ ಸ್ವಾತಂತ್ರ್ಯಸುಖವನ್ನು ಅನುಭವಿಸಿದವು. ಜಿಗಿಯುತ್ತಾ, ಉಲ್ಲಾಸದಿಂದ ಮೆಲ್ಲು ಹಾಕುತ್ತಾ ಪ್ರಚಂಡವಾಗಿ ಮೊರೆಯಿಟ್ಟವು. ಹೊಟ್ಟೆ ತುಂಬಿದ ಕೂಡಲೇ ಆಟಕ್ಕೆ ನಿಂತು, ಕೊಂಬುಗಳನ್ನು ಪರಸ್ಪರ ಒಂದಕ್ಕೊಂದು ಜೋಡಿಸಿ ಕೊಂಡು ನಿಂತವು. ಮೋತಿ, ಕೊಂಬಿನಿಂದ ಒತ್ತುತ್ತಾ ಒತ್ತುತ್ತಾ ಹೀರಾ ಹಳ್ಳದೊಳಗೆ ಉರುಳುವಂತೆ ಸರಿಸಿತು. ಹೀರಾ ಕೋಪಗೊಂಡು, ಮುಯ್ಯಿ ತೀರಿಸಿಕೊಳ್ಳುವುದಕ್ಕೆ ಎದ್ದು ನಿಂತಿತು. ಮೋತಿಯು ಹುಡುಗಾಟ ಸಿಟ್ಟಿಗೆಬ್ಬಿಸುವ ಆಟವಾದೀತೆಂದು ಎಚ್ಚೆತ್ತು, ಹೊಲದ ಅಂಚಿಗೆ ಬಂದು ನಿಂತುಕೊಂಡಿತು.

೪

ಆಕಸ್ಮಿಕವಾಗಿ ಅವುಗಳಿಗಿಂತಲೂ ಬಲಶಾಲಿಯಾದ ಗೂಳಿಯೊಂದು ಅಲ್ಲಿ ಕಾಣಿಸಿಕೊಂಡಿತು. ಗವ್ಯವಾದ ಗೂಳಿ, ಗರ್ವದಿಂದ ತನಗಿಂತಲೂ ಕಡಿಮೆಯೆನಿಸಿದ ಈ ಗೂಳಿಗಳನ್ನು ನೋಡಿ ಕೇಕರಿಸಿ, ಹತ್ತಿರ ಬರುತ್ತಿತ್ತು. ಅದು ಕೊಂಬನ್ನು ನೀಡಿ ಬರುತ್ತಿದ್ದುದನ್ನು ಹೀರಾ ಮೋತಿ ಕಂಡು, ಮುಂದೆ ಒದಗಬಹುದಾದ ಅಪಾಯವನ್ನು ಕುರಿತು ಯೋಚಿಸಿಕೊಂಡವು. ಕೊಬ್ಬಿದ ಭಯಂಕರಾಕಾರದ ಗೂಳಿಯನ್ನು ಎದುರಿಸಿ ಸಾಯುವುದು ಖಂಡಿತ. ಸುಮ್ಮನೆ ನಿಂತುಕೊಂಡರೆ ಫಲವಿಲ್ಲ. ಎಂತಹ ಕಠಿಣ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡೆವಲ್ಲಾ! ಎಂದುಕೊಂಡವು.

ಮೂಕಸಂಜ್ಞೆಯಲ್ಲಿ ಮೋತಿ "ಎಂತಹ ಪರಿಸ್ಥಿತಿಯಲ್ಲಿ ಸಿಕ್ಕಿದ್ದೇವೆ! ಉಪಾಯವೇನಾದರೂ ಸೂಚಿಸುವುದಿಲ್ಲವೆ?" ಎಂದಿತು.

"ಹಾಗಾದರೆ ನಾವೇಕೆ ಓಡಿಹೋಗಬಾರದು?"

"ಹೇಡಿತನ ತೋರಿದ ಹಾಗಾಗುವುದು."

"ಹಾಗಾದರೆ ನಿಂತಲ್ಲಿಯೇ ಉಳಿದು ಸಾಯುವುದಕ್ಕೆ ಸಿದ್ಧರಾಗೋಣ!"

"ಅದು ನಾವು ಓಡುವಂತೆ ಅಟ್ಟಬಂದರೆ?"

"ಆಗ ನಾವು ಪುನಃ ಯೋಚಿಸಬೇಕಾಗುವುದು."

"ಉಪಾಯವೊಂದೇ ಉಳಿದಿರುವುದು. ಒಂದೇಸಾರಿ ನಾವಿಬ್ಬರೂ
ಎದುರಿಬೀಳೋಣ. ನಾನು ಮುಂದಿನಿಂದ ತಳ್ಳುತ್ತೇನೆ, ನೀನು ಹಿಂದಿ
ನಿಂದ ತಳ್ಳುತ್ತಿರು. ಹೀಗೆ ತಳ್ಳಿಕೊಂಡು ಅಂಚಿನಕೊನೆಗೆ ಹೊರಳಿಸೋಣ.
ಆಗ ಅದು ಉಪಾಯತೋರದೆ ಓಡಿಹೋಗುತ್ತದೆ. ನನ್ನ ಕಡೆಗೆ ಸುಳಿದಾಗ
ನೀನು ಅದರ ಹೊಟ್ಟೆಯ ಪಕ್ಕಕ್ಕೆ ಕೊಂಬನ್ನು ಒತ್ತು. ಈಗ ನಮ್ಮ
ಜೀವ ಅಪಾಯಕ್ಕೀಡಾಗಿದೆ."

ಸಾವಿನಿಂದ ಪಾರಾಗಲು ಅವು, ಹೊಸ ಗೂಳಿಯಮೇಲೆ ಜಿಗಿದು
ಬಿದ್ದವು. ಗೂಳಿಗಳು ತನ್ನಮೇಲೆ ಬಿದ್ದುದನ್ನು ನೋಡಿ ಹೊಸಗೂಳಿಗೆ,
ಈ ವಿಚಿತ್ರ ಆಟ ಅಚ್ಚರಿಯನ್ನುಂಟುಮಾಡಿತು. ಹೊಸಗೂಳಿಗೆ ಯಾವಾ
ಗಲೂ ಒಂದರೊಡನೆ ಮಾತ್ರ ಕಾಳಗವಾಡುವ ಅನುಭವವಿತ್ತು. ಎರಡ
ರೊಡನೆ ಹೋರಾಡುವುದು ಹೇಗೆ? ಹೀರಾ ಮೋತಿ ತಮ್ಮಕಡೆ ಗೂಳಿ
ತಿರುಗಿದಾಗ ಕೊಂಬಿನಿಂದ ಒತ್ತಲು ಮೊದಲುಮಾಡಿದವು. ಹೊಸಗೂಳಿಗೆ
ಹೀರಾ, ಮೋತಿ ಒಂದೊಂದಾಗಿ ಸಿಕ್ಕಿದ್ದಲ್ಲಿ, ಸುಲಭವಾಗಿ ಸೋಲಿಸಿ
ಬಿಡುತ್ತಿತ್ತು. ಈ ಜೋಡಿ ಗೂಳಿಗಳು ಮೋಸದ ಬಲೆಗೆ ಬೀಳದೆ,
ಜೊತೆಯಾಗಿ ಕಾದಾಟಕ್ಕೆ ನಿಂತುದು, ಅದಕ್ಕೆ ಸರಿತೋರಲಿಲ್ಲ. ಒಂದು
ಸಾರಿ, ರೋಷದಿಂದ ಹೊಸಗೂಳಿ ಹೀರಾವನ್ನು ಮುಂದಕ್ಕೆ ತಳ್ಳಿ ದೂರ
ಕೊಂಡು ಹೋಯಿತು. ಮೋತಿ ಹೊಟ್ಟೆಯ ಪಾರ್ಶ್ವದಲ್ಲಿ ಚುಚ್ಚುತ್ತಾ
ಬಂತು. ತಿವಿತದ ಜೋರು ಮೀರಿದಾಗ, ಗೂಳಿ ಹಿಂದಕ್ಕೆ ಸರಿಯ
ಬೇಕಾಯಿತು. ಹಿಂದಕ್ಕೆ ಕಾಲಿಡುವುದನ್ನೇ ಕಾಯುತ್ತಿದ್ದ ಹೀರಾ,
ಮೋತಿ, ಹೊಸಗೂಳಿಯ ಬೆನ್ನಟ್ಟಿ ಹೋಯಿತು. ಹೀಗೆ ಅಟ್ಟಿಸಿಕೊಂಡು
ಬಹಳದೂರ ಹೋದಾಗ, ಹೊಸಗೂಳಿ ಆಯಾಸದಿಂದ ಬಳಲಿ ನೆಲದ
ಮೇಲೆ ಬಿದ್ದುಬಿಟ್ಟಿತು. ಆಗ ಹೀರಾ ಮೋತಿ ಸುಮ್ಮನಾಗಿಬಿಟ್ಟವು.
ವಿಜಯೋತ್ಸಾಹದ ಅಮಲಿನಲ್ಲಿ ಅವು ಇದ್ದುಬಿಟ್ಟವು.

ಮೋತಿ ಸಹಜಸೂಚಕ ಧ್ವನಿಯಲ್ಲಿ "ಅವನನ್ನು ಪೂರಾ
ಕೊಲ್ಲಬೇಕೆಂದು ನನಗೆನಿಸುತ್ತದೆ" ಎಂದಿತು.

ಹೀರಾ, ಇದಕ್ಕೆ ಒಪ್ಪದೆ "ಶತ್ರು ಬಲಹೀನನಾಗಿ ಕೆಳಗೆಬಿದ್ದಾಗ
ಅವನಮೇಲೆ ಬೀಳುವುದು ಯೋಗ್ಯವಲ್ಲ" ಎಂದಿತು.

"ಅದೆಲ್ಲವೂ ಭ್ರಮೆ, ಭ್ರಾಂತಿ. ಮೊಳಕಾಲು ಬಾಗಿಸುವರೆಗೆ ಹೊಡೆದು, ಮತ್ತೊಂದು ಸಾರಿ ಏಳಪಹಾಗೆ ಮಾಡಿಬಿಡುವುದು ಒಳ್ಳೆಯದು."

"ಇನ್ನೊಂದು ಸಾರಿ ಬೀಳುವುದು ಹಾಗಿರಲಿ, ಮುಂದೆ ಯೋಚಿಸೋಣ. ಮೊದಲು ತಿನ್ನುವುದಕ್ಕೆ ಏನಾದರೂ ಸಿಗುವುದಿದೆಯೋ ನೋಡೋಣ."

ಗೂಳಿಗಳಿಗೆ ತಮ್ಮ ಮುಂದೆ ಹೆಸರಿನ ಹೊಲ ಇರುವುದು ಕಾಣಿಸಿತು. ಇದನ್ನು ನೋಡಿದ ಕೂಡಲೇ ಹೀರಾ, "ಬೇಡ ಬೇಡ" ಎಂದು ಹೇಳುತ್ತಿರುವಾಗಲೇ ಮೋತಿ, ಹೊಲದೊಳಗೆ ನುಗ್ಗಿಬಿಟ್ಟಿತು. ಪ್ರವೇಶಿಸಿ ಬಾಯಿಡುವುದರೊಳಗಾಗಿ, ಉದ್ದವಾದ ಕೋಲನ್ನು ಹಿಡಿದು ಇಬ್ಬರು ಗೂಳಿಗಳಿದ್ದ ಕಡೆಗೆ ಓಡಿಬರುತ್ತಿದ್ದರು. ಹೀರಾ ಹೊಲದಂಚಿನ ಕೊನೆಯಲ್ಲಿದ್ದುದರಿಂದ ಏಟು ತಪ್ಪಿಸಿಕೊಂಡಿತು. ಮೋತಿ ನೀರಿದ್ದ ಸ್ಥಳದಲ್ಲಿದ್ದುದರಿಂದ ಸುಲಭವಾಗಿ ಓಡಲಾರದೆ ಕಷ್ಟಪಡುತ್ತಿತ್ತು. ಸಾಧ್ಯವಿಲ್ಲದೆ, ಮಣ್ಣಿನಲ್ಲಿ ಗೊರಸು ಸಿಕ್ಕಿಕೊಂಡುದುದರಿಂದ ಸಿಕ್ಕಿಬಿತ್ತು. ಮೋತಿ ಸಿಕ್ಕಿಬಿದ್ದಿದ್ದುದನ್ನು ನೋಡಿದ ಹೀರಾ "ನಾವು ಸಿಕ್ಕಿಬೀಳುವುದಾದರೆ ಇಬ್ಬರೂ ಸಿಕ್ಕಿಬೀಳೋಣ" ಎಂದಿತು. ಈ ಕಾರಣದಿಂದ ಹೀರಾ, ಮೋತಿ ಎರಡೂ ಸಿಕ್ಕಿಬಿದ್ದವು.

ಮರುದಿನ ಹೊಲದವರು ಗೂಳಿಗಳನ್ನು ದೊಡ್ಡಿಗೆ ಒಯ್ದುಬಿಟ್ಟರು. ಅವು ಸೆರೆಯಲ್ಲಿ ಉಳಿಯಬೇಕಾಯಿತು.

೫

ಒಂದು ಹುಲ್ಲುಕಡ್ಡಿಯ ತುಂಡನ್ನು ಸಹಾ ತಿನ್ನದೆ, ಇಡೀದಿನ ಹೀರಾ ಮೋತಿ ದೊಡ್ಡಿಯಲ್ಲಿ ಉಳಿಯಬೇಕಾಯಿತು. ಅಲ್ಲಿಯ ಆಡಳಿತಗಾರನ ಚರ್ಯೆಯೇ ಅವುಗಳಿಗೆ ಅರ್ಥವಾಗಲಿಲ್ಲ. ಇಲ್ಲಿಯವನಿಗಿಂತಲೂ ಹಿಂಸಕ ಗಯನೇ ಉತ್ತಮನೆಂದು ಅವುಗಳಿಗೆ ತೋರಿತು. ದೊಡ್ಡಿಯಲ್ಲಿ ಸೆರೆಯಾಳಾಗಿ ಕುದುರೆ, ಕತ್ತೆ, ಕೋಣ, ಮೇಕೆಗಳಿದ್ದವು. ಅವುಗಳಿಗೂ ತುಂಡು ಹುಲ್ಲಿನ ಆಹಾರ ದೊರೆಯಲಿಲ್ಲ. ಸತ್ತಪ್ರಾಣಿಯಂತೆ ಅವು ಬಿದ್ದುಕೊಂಡಿದ್ದವು. ನಿಲ್ಲಲಿಕ್ಕೂ ಸಾಧ್ಯವಿಲ್ಲದೆ ನಿತ್ರಾಣದಿಂದ ಬಿದ್ದು

ಕೊಂಡಿದ್ದವು. ಹೊರಬಾಗಿಲಿನಿಂದ ಯಾರಾದರೂ ಬಂದಾರೆಂದು ಹೀರಾ-ಮೋತಿ ನಿರೀಕ್ಷಿಸಿ ನಿರೀಕ್ಷಿಸಿ ಸೋತುಹೋದವು. ಕೊನೆಗೆ, ಗೋಡೆಗೆ ಸವರಿದ್ದ ಉಪ್ಪುಬೆರೆಸಿದ ಮಣ್ಣನ್ನು ನೆಕ್ಕಲಾರಂಭಿಸಿತು. ಅದು ಹಸಿವನ್ನು ಹಿಂಗಿಸಬಲ್ಲದೆ?

ಇರುಳಾಯಿತು. ಈವರೆಗೆ ಹಸಿವಿನಿಂದ ತಳಮಳಿಸುತ್ತಿದ್ದ ಹೀರಾ ಛಲದಿಂದ "ಮೋತಿ, ಇನ್ನು ನಾನು ಹಸಿವನ್ನು ತಾಳಲಾರೆ" ಎಂದಿತು.

ಮೋತಿ ತಲೆ ತಗ್ಗಿಸಿ, "ಸಾವು ಎದುರುನೋಡುತ್ತಿದ್ದೇವೆಯಲ್ಲವೆ!"

"ಮೋತಿ, ಇಷ್ಟುಬೇಗ ನಿರುತ್ಸಾಹಗೊಳ್ಳಬೇಡ! ಇಲ್ಲಿಂದ ತಪ್ಪಿಸಿ ಓಡಿಹೋಗುವ ಉಪಾಯ ತಿಳಿಯೋಣ."

"ನಾವು ಗೋಡೆಯನ್ನು ಉರುಳಿಸೋಣ."

"ನನಗೆ ಅಷ್ಟು ಶಕ್ತಿಯಿಲ್ಲವಲ್ಲ!"

"ಶಕ್ತಿಯಿಲ್ಲದೆ ನೀನು ಇಷ್ಟು ಪೌರುಷ ಕೊಚ್ಚಿಕೊಳ್ಳುತ್ತಿದ್ದೆಯೇನು?"

"ನನ್ನ ಪೌರುಷ ಮಣ್ಣುಪಾಲಾಗಿಹೋಯಿತು."

ದೊಡ್ಡಿಯ ನಾಲ್ಕುಸುತ್ತಿನ ಗೋಡೆ ಹಸಿಮಣ್ಣಿನಿಂದ ನಿರ್ಮಿತವಾಗಿದ್ದಿತು. ಬಲಶಾಲಿಯಾಗಿದ್ದ ಹೀರಾ, ಕೊಂಬನ್ನು ತಿವಿದು ತಿವಿದು ಗೋಡೆಯಿಂದ ಹೆಕ್ಕಳ ಹೆಕ್ಕಳವಾಗಿ ಮಣ್ಣನ್ನು ಉದರಿಸಹತ್ತಿತು. ಮಣ್ಣು ಬೀಳುತ್ತಿದ್ದುದನ್ನು ಕಂಡ ಅದಕ್ಕೆ ಪ್ರೋತ್ಸಾಹ ಸಿಕ್ಕಿದಂತಾಗಿ, ಸಾಕಷ್ಟು ಮಣ್ಣನ್ನು ಅದು ಉದರಿಸಿತು.

ಆಗ ದೊಡ್ಡಿ ಕಾಯುವ, ಇಡೀ ಪ್ರಾಣಿಗಳ ತನಿಖೆ ಬರೆದುಕೊಳ್ಳುವ ದಕ್ನಾಗಿ ಕತ್ತಲಲ್ಲಿ ದೀಪ ಹಿಡಿದುಕೊಂಡು ಬಂದ. ಹೀರಾ ದುಷ್ಟ ಕೆಲಸ ಅವನ ಕಣ್ಣಿಗೆ ಬಿದ್ದಿತು. ಅವನು ಹೀರಾವನ್ನು ಬಲವಾಗಿ ಹೊಡೆದು, ಮತ್ತೆ ದಪ್ಪ ಹಗ್ಗದಿಂದ ಬಿಗಿದು ಕಟ್ಟಿಹಾಕಿ ಹೊರಟುಹೋದ.

ದೂರದಲ್ಲಿ ಇದನ್ನೆಲ್ಲಾ ನೋಡುತ್ತಾ ಮಲಗಿದ್ದ ಮೋತಿ, "ನಿನ್ನ ಸಾಹಸಕ್ಕೆ ಈ ಫಲವೆ?" ಎಂದಿತು.

"ಏನಾದರೂ ಸಿಗಲಿ, ನನ್ನ ಶಕ್ತಿಯನ್ನೆಲ್ಲಾ ತೋರಿಸುವ ಸಂದರ್ಭ ಒದಗಿತಲ್ಲ!"

"ಏನು ಪ್ರಯೋಜನ? ಶಕ್ತಿಪ್ರದರ್ಶನದಿಂದ ಏಟು ತಿನ್ನುವ ಹಾಗಾಯಿತು, ಸೆರೆಯಲ್ಲಿ ಇನ್ನೂ ಉಳಿಯಬೇಕಾಯಿತು ಅಷ್ಟೆ."

"ಆಗಲಿ, ಏನಾದರೂ ಸಂಭವಿಸಲಿ ಚಿಂತೆಯಿಲ್ಲ; ಗೋಡೆಯನ್ನು ಕೆಡವುವರೆಗೆ ಬಿಡುವುದಿಲ್ಲ."

"ಹಾಗೆ ನೀನು ಮಾಡಿದುದಾದರೆ, ಪಶ್ಚಾತ್ತಾಪ ಪಡಬೇಕಾದೀತು."

"ಏನನ್ನೂ ನಾನು ಲೆಕ್ಕಿಸೆ. ಈ ಸೆರೆ, ಸಾವಿಗಿಂತ ಕೀಳು. ಈ ಗೋಡೆ ಕೆಡೆವಿಬಿಟ್ಟರೆ ಎಷ್ಟು ಜೀವಿಗಳಿಗೆ ಪ್ರಯೋಜನವಾಗುವುದು ಬಲ್ಲೆಯೇನು? ನಮ್ಮ ಸಹ ಜಂತುಬಂಧುಗಳು ಇಲ್ಲಿ ಸೆರೆಸಿಕ್ಕಿವೆ. ಹಸಿವಿನಿಂದ ಸಾಯುತ್ತ ಬಿದ್ದಿವೆ. ಹೀಗೆ ಮೂರುದಿನಗಳವರೆಗೆ ಬಿಟ್ಟರೆ ನಾವೆಲ್ಲಾ ಹಾಳಾಗುವುದು ಖಂಡಿತ."

"ನೀನೆನ್ನುವುದು ಸತ್ಯ. ನಾನು ಮಣ್ಣು ಉದರಿಸಲು ನಿನ್ನೊಡನೆ ಸಹಕರಿಸುವೆ" ಎಂದು ಮೋತಿ, ಕೊಂಬಿನಿಂದ ಗೋಡೆಯನ್ನು ಚುಚ್ಚಿ, ಸಣ್ಣ ಹೆಂಟೆಯನ್ನು ಕೆದರಿತು. ಈ ಫಲಿತಾಂಶ ಕಂಡು ಅದಕ್ಕೆ ಉತ್ಸಾಹ ಹುಟ್ಟಿತು. ಅದು ಜೀವದೊಡನೆ ಹೊಡೆದಾಡುತ್ತಿರುವ ಹಾಗೆ, ಗೋಡೆಗೆ ಚುಚ್ಚುತ್ತಾ ತನ್ನ ಸಾಹಸ ತೋರುತ್ತಿತ್ತು. ಸಾಹಸಕ್ಕೆ ಫಲವೆಂಬಂತೆ, ಒಂದು ಅಡಿಯಷ್ಟು ಗೋಡೆಯ ಮೇಲಿನ ಭಾಗ ಕಳಚಿಬಿತ್ತು. ಉತ್ಸಾಹ, ಸಾಹಸ, ಇಮ್ಮಡಿಸಿ ಹೋರಾಡಿದಾಗ ಅರ್ಧಭಾಗದಷ್ಟು ಗೋಡೆ ಕಳಚಿಬಿತ್ತು.

ಇನ್ನೂ ಜೀವದಾಸೆ ಇಟ್ಟುಕೊಂಡಿದ್ದ ದೊಡ್ಡಿ ುಲ್ಲಿನ ಇತರ ಪ್ರಾಣಿಗಳಿಗೆ ಚೇತನ ಬಂದಿತು. ಸೈನ್ಯ ಹೊರಳುವಂತೆ, ಕುದುರೆ ಬಾಗಿಲ ಕಡೆಗೆ ಓಡಿತು. ಮೇಕೆಗಳು ಕುದುರೆಯನ್ನು ಹಿಂಬಾಲಿಸಿದವು. ಕತ್ತೆಗಳು ಮಾತ್ರ ಇದ್ದ ಸ್ಥಳವನ್ನು ಬಿಡದೆ ನಿಂತಲ್ಲಿಯೇ ಉಳಿದುಕೊಂಡವು. ಉಳಿದೆಲ್ಲಾ ಪ್ರಾಣಿಗಳೂ ಸೆರೆಯಿಂದ ಪಾರಾಗುವುದಕ್ಕೆ ಸಮಯ ನೋಡುತ್ತಲಿದ್ದವು.

ಹೀರಾ ಕತ್ತೆಗಳನ್ನು ನೋಡಿ ಆಶ್ಚರ್ಯದಿಂದ, "ನೀವೆಲ್ಲ ಏಕೆ ಓಡಿ ಹೋಗಬಾರದು?" ಎಂದು ಕೇಳಿತು.

"ನಮ್ಮನ್ನು ಪುನಃ ಹಿಡಿದು ಬಂಧಿಸಿಯಾರೆಂದು ಉಳಿದಿದ್ದೇವೆ" ಎಂದು ಕತ್ತೆಗಳ ಪೈಕಿಯೊಂದು ಹೇಳಿತು.

"ಹೆದರಿದರೇನಾಯಿತು! ಈಗ ಓಡಿಹೋಗಲು ಸರಿಯಾದ ಸಮಯ."

"ನಮಗೆ ಭಯವಾಗುತ್ತದೆ. ನಾವು ಇದ್ದಲ್ಲಿಯೇ ಉಳಿಯುತ್ತೇವೆ."

ನಡುರಾತ್ರಿವೇಳೆ. ಓಡುವುದೋ ಬಿಡುವುದೋ ಎಂದು ಕತ್ತೆಗಳಿನ್ನೂ ನಿರ್ಣಯಿಸುವುದರಲ್ಲಿದ್ದವು. ಮೋತಿ, ಹೀರಾವನ್ನು ಕಟ್ಟಿಹಾಕಿದ್ದ ದಪ್ಪ ಹಗ್ಗವನ್ನು ಕಡಿದುಹಾಕುವ ಉದ್ಯಮದಲ್ಲಿತ್ತು. ಮೋತಿ ಕಡಿಯಲಾರದೆ ಎದೆಗುಂದಿದಾಗ, ಹೀರಾ "ನಾನಿಲ್ಲಿಯೇ ಇರುವೆ. ನೀನು ಹೊರಟುಹೋಗು. ಎಂದಾದರೂ ನಾವು ಪುನಃ ಸಂಧಿಸೋಣ" ಎಂದಿತು.

ಹೀರಾ ಆಡಿದ ಮಾತು ಕೇಳಿ ಕಣ್ಣೀರು ಸುರಿಸುತ್ತಾ ಮೋತಿ, "ನಾನು ಅಷ್ಟು ಸ್ವಾರ್ಥಜಂತುವೆಂದು ತಿಳಿದೆಯಾ? ನಾವಿಬ್ಬರೂ ಇಷ್ಟು ದಿನ ಜೊತೆಯಲ್ಲಿದ್ದೆವು. ಈ ದಿನ ನೀನು ಕಷ್ಟಕ್ಕೆ ಸಿಕ್ಕಿರುವೆ. ನೀನು ನಾಶವಾಗುವುದನ್ನು ನೋಡುತ್ತಾ ನಾನು ಹೊರಟುಬಿಡಲೇ?" ಎಂದು ಕೇಳಿತು.

ಹೀರಾ, "ನಮಗೆ ಮತ್ತೂ ಬಿರುಸಾದ ಹೊಡೆತ ಬೀಳುವುದು ಖಂಡಿತ. ಈ ಪ್ರಮಾದವೆಲ್ಲಾ ನಮ್ಮಿಂದಾದುವೆಂದು ಅವರಿಗೆ ತಿಳಿಯುವುದು ನಿಶ್ಚಯ" ಎಂದಿತು.

ಹೆಮ್ಮೆಯಿಂದ ಮೋತಿ, "ನಿನ್ನ ಕಷ್ಟದಿಂದ ನನಗೂ ಹೊಡೆತ ಬೀಳುವುದಾದರೆ ಬೀಳಲಿ. ನಮ್ಮ ಸಾಹಸದಿಂದ ನಮ್ಮ ಬಂಧುವರ್ಗದ ಪ್ರಾಣಿಗಳಿಗೆ ಸೆರೆತಪ್ಪಿ, ಪುನಃ ಸ್ವಾತಂತ್ರ್ಯ ದೊರೆಯುವಂತಾಯಿತು. ಅವುಗಳೆಲ್ಲ ನಮ್ಮನ್ನು ಹರಿಸದೇ ಬಿಡುವುದಿಲ್ಲ" ಎಂದಿತು.

ಮೋತಿ, ಸುಮ್ಮನೆ ನಿಂತಿದ್ದ ಕತ್ತೆಗಳನ್ನು ಕೊಂಬಿನಿಂದ ತಿವಿದು ಹೆದರಿಸಿ, ಓಡಿಹೋಗುವಂತೆ ಮಾಡಿತು. ಹೀರಾ ಆದರ ಮಗ್ಗುಲಲ್ಲಿ ನಿಂತುಕೊಂಡಿತು.

ಮುಂಜಾನೆ ಏನಾಯಿತೆಂದು ಇನ್ನು ಹೇಳಬೇಕಾದುದಿಲ್ಲ. ದೊಡ್ಡಿಗಾರ, ।ಸೇವಕ ಅವನ ಸಹೋದ್ಯೋಗಿಗಳು ಒಳಗೆ ಪ್ರವೇಶಿಸಿ

ನಡೆದುದನ್ನು ನೋಡಿ, ಮತ್ತೂ ಗಟ್ಟಿಯಾದ ಹಗ್ಗದಿಂದ ಮೋತಿಯನ್ನು ಬಿಗಿದು ಕಟ್ಟಿ ಚನ್ನಾಗಿ ಹೊಡೆದುಬಿಟ್ಟರು.

ಮೋತಿ, ಹೀರಾ ಒಂದು ವಾರದವರೆಗೆ ಬಂಧನದಲ್ಲಿರಬೇಕಾಯಿತು. ಈ ಸಮಯದಲ್ಲಿ ಅವುಗಳಿಗೆ ಒಂದು ಹಿಡಿಯಷ್ಟು ಆಹಾರ ಸಿಗಲಿಲ್ಲ. ದಿನಕ್ಕೊಮ್ಮೆ ಕುಡಿಯಲಿಕ್ಕೆ ಸ್ವಲ್ಪ ನೀರು ಮಾತ್ರ ಅವುಗಳಿಗೆ ಸಿಕ್ಕುತ್ತಿತ್ತು. ಕ್ಷೀಣಿಸಿಹೋದ ಈ ಗೂಳಿಗಳ ಎಲುಬುಗಳು ಹೊರಗೆ ಕಾಣುವಂತಾಯಿತು.

ಒಂದು ದಿನ, ದೊಡ್ಡಿಯ ಬಳಿ ತಮಟೆ ಬಾರಿಸುತ್ತಿದ್ದುದು ಅವುಗಳಿಗೆ ಕೇಳಿಸಿತು. ದೊಡ್ಡಿಯ ಹೊರಬಾಗಿಲ ಬಳಿ ಸುಮಾರು ಐವತ್ತು ಅರವತ್ತು ಮಂದಿಯಷ್ಟು ಜನ ಸೇರಿದ್ದರು. ಹೀರಾ ಮೋತಿಯನ್ನು, ಪರೀಕ್ಷಿಸುವ ಸಲುವಾಗಿ ನೆರೆದ ಜನರ ಮುಂದೆ ತೋರಿದರು. ಬಡಕಲು ಮತ್ತು ಸೊರಗಿಹೋದವುಗಳನ್ನು ನೋಡಿದವರು, ಮುಖ ತಿರುಗಿಸಿ ಕೊಳ್ಳಲಾರವೆಂದು ಬಿಟ್ಟುಬಿಟ್ಟರು. ಕೆಂಪುಗಣ್ಣಿನವ, ತುಂಬು ಗಡ್ಡದವ, ಹಿಂಸಕನೆಂದು ತೋರುತ್ತಿದ್ದವನೊಬ್ಬ ತಮ್ಮ ಕಡೆ ಕೈತೋರಿ ಮಾತನಾಡಿಕೊಳ್ಳುತ್ತಿದ್ದುದನ್ನು ಹೀರಾ ಮೋತಿ ನೋಡಿದವು. ಅವನೇಕೆ ಈ ರೀತಿ ತಮ್ಮನ್ನು ಪರೀಕ್ಷಿಸಿ ಕೆಂಡಕಾರುತ್ತಿದ್ದಾನೆಂದು ಅವುಗಳಿಗೆ ಆಗ ಅರ್ಥವಾಯಿತು. ಪರಸ್ಪರ ಈ ವಿಚಾರ ತಿಳಿದು ಗ್ರಹಿಸಿ ಕೊಂಡು, ಭೀತಿಯಿಂದ ಅವು ಮೋರೆ ಕೆಳಗೆಮಾಡಿ ನಿಂತುಕೊಂಡವು.

ಹೀರಾ, "ಗಯನ ಮನೆಯಿಂದ ಓಡಿಬಿಟ್ಟೆವು. ಇನ್ನೆಂದಿಗೂ ನಾವು ಉಳಿಯುವ ಸೂಚನೆ ಕಾಣುವುದೇ ಇಲ್ಲ" ಎಂದಿತು.

ಮೋತಿ ಎದೆಗುಂದುತ್ತಾ, "ದೇವರನ್ನು ದಯಾಮಯನೆನ್ನುತ್ತಾರೆ! ಅವನು ಈ ಸಮಯದಲ್ಲಿ ನಮ್ಮನ್ನು ಕರುಣಿಸಬಾರದೆ?" ಎಂದಿತು.

"ದೇವರಿಗೆ ನಾವು ಬದುಕಿದರೇನು, ಸತ್ತರೇನು? ಎರಡೂ ಒಂದೇ. ಹೇಗಾದರೂ ಸರಿ, ಜೀವಿಸೋಣ, ಅವನನ್ನು ನಂಬೋಣ. ಅವನು ಚಿಕ್ಕಹುಡುಗಿಯ ರೂಪದಲ್ಲಿ ಬಂದು ನಮಗೆ ಸಹಾಯ ಮಾಡಿದುದುಂಟು. ಈಗ ಅವನು ನಮ್ಮನ್ನು ರಕ್ಷಿಸುವನೇನು?"

"ಈ ಕಿಡಿಗಣ್ಣಿನ ಕಟುಕ ನಮ್ಮನ್ನು ಕೊಲ್ಲುವುದು ನಿಜ."

"ಕೊಂದರೇನು? ನಮ್ಮ ಚರ್ಮ, ಮೂಳೆ, ಚಕ್ಕಳ, ಕೊಂಬು ಇತರ ಕೆಲಸಗಳಿಗಾಗುವುದು."

ಕಿಡಿಗಣ್ಣಿನ ಕಟುಕ ಹರಾಜಿನಲ್ಲಿ ಈ ಗೂಳಿಗಳನ್ನು ಕೊಂಡ. ಅವು ಹೊಸ ಯಜಮಾನನನ್ನು ಹಿಂಬಾಲಿಸಿದವು. ಭೀತಿಯಿಂದ ನಡುಗಿ ಅದರುತ್ತಾ, ಭೂಮಿಯಮೇಲಿಟ್ಟ ಕಾಲನ್ನು ಕೀಳಲು ಶಕ್ತಿಯಿಲ್ಲ ದಂತೆ ಬೆವರಿ ನಡೆಯುತ್ತಿದ್ದವು. ಹೆಜ್ಜೆಯಿಡುವುದು ನಿಧಾನಿಸಿದಲ್ಲಿ, ಬಿಗಿತ ಬೀಳುವುದು ಖಂಡಿತವೆಂದು, ಏಳುತ್ತ ಮುಗ್ಗರಿಸುತ್ತ ನಡೆದುಹೋದವು.

ಹಾದಿಯಲ್ಲಿ ಕಾಣಿಸಿದ ಎತ್ತು ಹಸುಗಳು ಹಚ್ಚನೆಯ ಭೂಮಿಯಲ್ಲಿ, ಗಾಂಭೀರ್ಯದಿಂದ ಹುಲ್ಲು ಮೇಯುತ್ತಿದ್ದುದನ್ನು ಅವು ನೋಡಿ ದವು. ಸಂತೃಪ್ತಿಯಿಂದ, ಸಂತೋಷದಿಂದ ಮೈಯುಬ್ಬಿಕೊಂಡು, ಆನಂದದಿಂದ ಕುಣಿದು ಜಿಗಿಯುತ್ತಿದ್ದ ಪ್ರಾಣಿಗಳನ್ನು ನೋಡಿ, ಇವುಗಳು ಆನಂದಪಡುತ್ತಿವೆ. ಸ್ವಾರ್ಥಪಂಥಕ್ಕೆ ಸೇರಿದಂತ ಹವು ಗಳಾಗಿವೆ. ತಮ್ಮ ಸಹಜಂತುಗಳು ಹೊಟ್ಟೆಗಿಲ್ಲದೆ ಬಡುಕಲಾಗಿ, ಕಟುಕನ ಕೈಗೆ ಬಿದ್ದು, ಮೃತ್ಯುವಿನ ದವಡೆಯಲ್ಲಿ ಸಿಕ್ಕಿರುವುದನ್ನು ಕಾಣವು ಎಂದುಕೊಂಡವು.

ಹೀರಾ ಮೋತಿಗೆ ಹೆಜ್ಜೆಯಿಡುತ್ತಾ ಬರುತ್ತಿದ್ದ ಹಾದಿ ಪರಿಚಯ ವಿದ್ದಹಾಗೆ ಕಂಡಿತು. ಈ ಹಾದಿಯಲ್ಲಿಯೇ ಹಿಂಸಕ ಗಯ ಅವನ್ನು ತನ್ನ ಮನೆಗೆ ಒಯ್ದಿದ್ದ. ಅದೇ ತೋಟ, ಅದೇ ಹೊಲ, ಅದೇ ಹಳ್ಳಿ. ಇದನ್ನೆಲ್ಲಾ ನೋಡಿ ಅವು ಬೇಗ ಬೇಗ ಹೆಜ್ಜೆಯಿಡಲಾರಂಭಿಸಿತು. ಆಗ ಗೂಳಿಗಳ ದಣಿವು ಮಾಯವಾದಂತಾಯಿತು. ಅವು ಪ್ರಿಯವಾಗಿದ್ದ ಹುಲ್ಲುಗಾವಲಿನ ಹತ್ತಿರಕ್ಕೆ ಆಗಾಗಲೇ ಬಂದುಬಿಟ್ಟಿದ್ದವು.

ಸ್ವಲ್ಪಹೊತ್ತಿನೊಳಗೆ ಅವು ಹಿಂದಿನಿಂದ ಕೆಲಸಮಾಡುತ್ತಿದ್ದ ಬಾವಿಯ ಹತ್ತಿರಕ್ಕೆ ಬಂತು.

ಮೋತಿ "ಮನೆಯ ಹತ್ತಿರಕ್ಕೆ ಬರುತ್ತಿದ್ದೇವೆ" ಎಂದಿತು.

ಹೀರಾ "ದೇವರನ್ನು ಈಗ ಸ್ಮರಿಸಬೇಕು" ಎಂದಿತು.

"ಮನೆಯ ಕಡೆಗೆ ಓಡಿಬಿಡುತ್ತೇನೆ."

"ಅವನು ನಿನ್ನನ್ನು ಬಿಟ್ಟುಕೊಡುವನೇನು?"

"ನಾವಿಬ್ಬರೂ ಈಗ ಓಡಿ ಮನೆಗೆ ಹೋಗೋಣ. ಅಲ್ಲಿಂದ ನಮ್ಮನ್ನು ಕದಲಿಸಲು ಸಾಧ್ಯವಿರುವುದಿಲ್ಲ."

ಯೋಚಿಸಿದಂತೆ, ಸಂಭ್ರಮದಿಂದ ಅವು ಜೋರಾಗಿ ಓಡಿಬಿಟ್ಟು, ನಿತ್ಯವೂ ನಿಲ್ಲುತ್ತಿದ್ದ ಜಾಗದಲ್ಲಿ ನಿಂತುಕೊಂಡುಬಿಟ್ಟವು. ಕಟುಕ ವೇಗ ವಾಗಿ ಓಡುತ್ತಾ ಗೂಳಿಗಳನ್ನು ಹಿಂಬಾಲಿಸಿ ಬಂದ.

ವನಮಾಲಿ ಜೂರಿ, ಹೊಸ್ತಿಲಬಳಿ ಕುಳಿತು ಬಿಸಿಲು ಕಾಯುತ್ತಾ ನೋಡುತ್ತಿದ್ದ. ಪ್ರಿಯಗೂಳಿಗಳು ಅವನ ಕಣ್ಣಿಗೆ ಬಿದ್ದುದೇ ತಡ, ಅವನ್ನು ಆಲಂಗಿಸಿ ಪುನಃ ಪುನಃ ಮುದ್ದಾಡಹತ್ತಿದ. ಸಂತೋಷದಿಂದ ಒಡೆಯ ನನ್ನು ಪುನಃ ಕಂಡವೆಂಬ ಸಂತೋಷದಿಂದ ಮೂಕಪ್ರಾಣಿಗಳು ಕಣ್ಣಿನಲ್ಲಿ ನೀರು ಸುರಿಸಿದವು.

ಅವುಗಳಲ್ಲಿ ಒಂದು ಜೂರಿಯ ಕೈ ನೆಕ್ಕತೊಡಗಿತು. ಕಟುಕ ಕೊಟ್ಟಿಗೆಯಲ್ಲಿ ನಿಂತ ಗೂಳಿಗಳ ಕುತ್ತಿಗೆಯ ಹಗ್ಗಕ್ಕೆ ಕೈಹಾಕಿ ಹಿಡಿದು ಎಳೆದ.

"ಇವು ನನ್ನವು" ಎಂದು ಜೂರಿ ಕಟುಕನಿಗೆ ಹೇಳಿದ.

"ನಿನ್ನದು ಹೇಗಾದೀತು? ನಾನು ದೊಡ್ಡಿಯಲ್ಲಿ, ಹರಾಜಿನಲ್ಲಿ ಒಯ್ದಿರುವೆ."

"ನೀನು ಕೊಳ್ಳುವುದೆಲ್ಲಿ ಬಂತು? ನನ್ನ ಗೂಳಿಯನ್ನು ಹರಾಜು ಮಾಡುವ ಅಧಿಕಾರ ಯಾವನಿಗಿರುವುದು? ಕದ್ದ ಒಡವೆಗಳಿಗೆ ಹೆಚ್ಚು ಗಲಾಟೆಯೇಕೆ? ಹೆಚ್ಚು ಗಲಭೆ ಮಾಡದೆ ಹೊರಟುಹೋಗು."

"ಪೋಲೀಸ್ ಠಾಣೆಗೆ ಹೋಗಿ ಫಿರ್ಯಾದು ಕೊಡುತ್ತೇನೆ."

"ಇವು ನನ್ನ ಗೂಳಿಗಳು. ನನ್ನವುಗಳಾಗಿರುವುದರಿಂದ ಮನೆ ಎದುರು ಬಂದುನಿಂತಿವೆ."

ಕಟುಕ ಕೋಪದಿಂದ ಗೂಳಿಗಳನ್ನು ಬಲಾತ್ಕಾರವಾಗಿ ಒಯ್ಯಲು ಮುಂದೆ ನುಗ್ಗಿದ. ಮೋತಿ ಅವನನ್ನು ಕೊಂಬಿನಿಂದ ಚುಚ್ಚಿತು. ಕೊಂಬಿನ ಏಟನ್ನು ಹೇಗೋ ಅವನು ತಪ್ಪಿಸಿಕೊಂಡಾಗ, ಮೋತಿ ಅವ ನನ್ನು ಅನುಸರಿಸಿ ಘಾಸಿಪಡಿಸಲು ಮುನ್ನುಗ್ಗಿತು. ಕಟುಕ ಎದುರು ನಿಲ್ಲಲಾರದೆ ಓಡಿದ. ಹಳ್ಳಿಯ ಅಂಚಿನಾಚೆಯವರೆಗೆ ಅವನನ್ನಟ್ಟಿ ಮೋತಿ

ಓಡಿಸಿಕೊಂಡು ಹೋಯಿತು. ಕಟುಕ ಅಂಚಿನಲ್ಲಿ ನಿಂತು ಬಯ್ಯುತ್ತಾ, ಬೆದರಿಕೆ ಹಾಕುತ್ತಾ, ಕಲ್ಲು ಒಗೆಯುತ್ತಿದ್ದ. ಮೋತಿಯು ಅಡ್ಡವಾಗಿ ಅವನು ಒಳಗೆ ಪ್ರವೇಶಿಸಿ ಬರದಂತೆ ದಾರಿ ಕಾಯುತ್ತ ನಿಂತುಕೊಂಡಿತು. ಸೋತು, ಮೋರೆ ತಗ್ಗಿಸಿಕೊಂಡ ಕಟುಕ, ಹಾದಿಹಿಡಿದು ಹೊರಟುಹೋದ. ಮೋತಿ ಜಯಿಸಿತೆಂದು ಹೆಮ್ಮೆಯಿಂದ ಹೆಜ್ಜೆಯಿಡುತ್ತಾ ಮನೆಗೆ ಬಂತು.

ಹೀರಾ "ಮೋತಿ ನೀನು ಎಂತಹ ಅದ್ಭುತಕೆಲಸ ಮಾಡಿದೆ! ಕೋಪದಿಂದ ಅವನನ್ನು ಕೊಂದುಬಿಟ್ಟೆಯೋ ಏನೋ ಎಂದು ಹೆದರಿದ್ದೆ."

"ಅವನು ನನ್ನನ್ನು ಮುಟ್ಟಬೇಕಾಗಿತ್ತು, ಕೊಂದೇಬಿಡುತ್ತಿದ್ದೆ."

"ಪುನಃ ಅವನು ಈ ಕಡೆ ತಲೆ ಹಾಕುವುದಿಲ್ಲ" ಎಂದಿತು ಹೀರಾ.

"ಬರಲಿ, ನನ್ನ ಶಕ್ತಿಯನ್ನು ತಿಳಿಯುವ ಹಾಗೆ ಮಾಡುತ್ತೇನೆ."

"ಅವನು ಬರುವ ಹೊತ್ತಿಗೆ, ನಾನು ಸತ್ತುಬಿದ್ದಿರುವೆ. ಆಗ ನನ್ನಿಂದ ಅವನಿಗೆ ಏನು ಪ್ರಯೋಜನವಾದೀತು?"

"ನಾವು ಜೀವವೆಂದು, ಜೀವಜಂತುಗಳೆಂದು ಯಾರೂ ತಿಳಿಯುಲಾರರಲ್ಲ!"

"ನಾವು ಬಹಳ ಮೃದುಸ್ವಭಾವದವರಾಗಿರುವುದರಿಂದ."

ಸ್ವಲ್ಪ ಹೊತ್ತಿನೊಳಗಾಗಿ ತಿಂಡಿಬಾನಿ ಕಡ್ಡಿ, ಕಾಳು, ಸಿಪ್ಪೆ, ತವುಡಿನಿಂದ ಭರ್ತಿಯಾಯಿತು. ಸಂತೋಷದಿಂದ ಅಬ್ಬರಿಸುತ್ತಾ ಗೂಳಿಗಳು ಯಥೇಚ್ಛ ತಿನ್ನಲಾರಂಭಿಸಿದವು. ಜೂರಿ, ತನ್ನ ಗೂಳಿಗಳನ್ನು ಹೊಗಳುತ್ತಾ, ಪ್ರೋತ್ಸಾಹಿಸುತ್ತಾ ನಿಂತುಕೊಂಡ. ಆಗ ಇಡೀ ಹಳ್ಳಿಯ ಬಾಲಕರು ಒಟ್ಟುಗೂಡಿದರು. ಸಂಭ್ರಮ ಹೇಳತೀರದಷ್ಟು ಮೆರೆದುಹೋಯಿತು.

ಅಷ್ಟರಲ್ಲಿ, ಮನೆಯ ಒಡತಿ ಒಳಗಿನಿಂದ ಬಂದು, ಗೂಳಿಗಳ ಮುಂದಲೆ ಹಿಡಿದು ಚುಂಬಿಸಿದಳು.

# ರಾಜೀನಾಮೆ

ಕಛೇರಿ ಗುಮಾಸ್ತೆ ಮೂಕಪ್ರಾಣಿಯ ಮಾದರಿ. ಕಾರ್ಮಿಕನ ಕಡೆಗೆ ದುರುಗುಟ್ಟಿಕೊಂಡು ನೋಡಿದರೆ, ಅವನೂ ಅದೇ ದೃಷ್ಟಿಯಿಂದ ನಿಮ್ಮ ಕಡೆ ನೋಡುತ್ತಾನೆ. ಕೂಲಿಯವನನ್ನು ರೇಗೆಬ್ಬಿಸಿ ; ಅವನು ಹೊತ್ತ ಹೊರೆಯನ್ನು ನೆಲದ ಮೇಲೆ ಎತ್ತಿಹಾಕಿ ಹೋಗುತ್ತಾನೆ. ತಿರುಕನನ್ನು ಕೆಣಕಿ ; ಕೆಣಕಿದವರ ಮರ್ಯಾದೆ ತೆಗೆಯುತ್ತಾನವನು. ಕತ್ತೆಗೆ ಹೆಚ್ಚು ಕಾಟ ಕೊಡಲಿ, ಅದೂ ಉಪದ್ರವ ಸಹಿಸದೆ ಹಿಂದಿನ ಕಾಲನ್ನೆತ್ತಿ ಒಡೆಯುತ್ತದೆ. ಕಛೇರಿ ಗುಮಾಸ್ತೆಯ ಪಾಡೇ ಬೇರೆ. ಅವನನ್ನು ಗದರಿಸಿ ; ಅವಮಾನ ಪಡಿಸಿ; ಬೆದರಿಸಿ; ಹೊಡೆಯಿರಿ. ಅವನು ಎಲ್ಲವನ್ನೂ ಸಹನೆಯಿಂದ ಅನುಭವಿಸುತ್ತಾನೆ. ವರ್ಷಾನುಗಟ್ಟಲೆ ತಪಸ್ಸು ಮಾಡಿ, ಅರಿಷಡ್ವರ್ಗಗಳನ್ನು ಸ್ವಾಧೀನದಲ್ಲಿಟ್ಟುಕೊಂಡ ಯೋಗಿಗಿಂತ, ಕಛೇರಿ ಗುಮಾಸ್ತೆಯ ಸಹನಶಕ್ತಿ ಮೇಲಿರುತ್ತದೆ. ಇವನು ಸಂಪೂರ್ಣ ತೃಪ್ತಿ ಕಂಡಂತಹ ವ್ಯಕ್ತಿ. ಶಾಂತ ಸ್ವರೂಪ ಶಿರೋಮಣಿ. ಆದರ್ಶ ಗುಣವಂತ. ಇಂತಹ ಸಕಲಗುಣ ಸಂಪನ್ನ, ಗುಮಾಸ್ತೆಯ ಮೇಲೆ ಅದೃಷ್ಟವೆಂಬ ವರ್ಚಸ್ಸು ಬೀರುವುದೇ ಇಲ್ಲ. ಬಡ ರೈತನ ಗುಡಿಸಲ ಮೇಲೆ ಹೊದ್ದಿರುವ ಹುಲ್ಲಿನ ತೃಣ, ಎಂದಾದರೊಂದು ದಿನ ಪುಣ್ಯಫಲ ಅನುಭವಿಸೀತು. ಗುಮಾಸ್ತೆಯು ಪುಣ್ಯೋದಯ ಕಾಣುವುದಿಲ್ಲ. ಅವನಿಗೆ ಈ ಸೌಭಾಗ್ಯದ ಲಾಭವೇ ದೊರೆಯುವ ಹಾಗಿಲ್ಲ. ದೀಪಾವಳಿಯಲ್ಲಿ, ದೀಪದ ಹಬ್ಬದ ನಡುವೆ, ಹುಲ್ಲಿನ ತೃಣ ಮಳೆಯಲ್ಲಿ ತೋಯ್ದು ತೃಪ್ತಿಪಟ್ಟೀತು. ಗುಮಾಸ್ತೆಗೆ ನೀರಸ ಜೀವನ ಕಟ್ಟಿಟ್ಟ ಬುತ್ತಿ. ಅವನಿಗೆ ಈ ನೀರಸ ಜೀವನದಿಂದ ಬಿಡುಗಡೆಯೇ ಇಲ್ಲ. ಅವನ ಜೀವನಾಂಧಕಾರದಲ್ಲಿ ಶೋಭಾಕಿರಣ ಬೆಳಗುವುದೇ ಇಲ್ಲ. ಮೊಗದಲ್ಲಿ ಮುಗುಳುನಗೆಯಾಡುವುದಿಲ್ಲ. ಈ ನೀರಸವರ್ಗಕ್ಕೆ ಲಾಲಾ ಪತ್ತೇಚಂದ್ ಎಂಬುವನು ಕೂಡಿಕೊಂಡಿದ್ದ.

ಹೆಸರಿಗೆ ತಕ್ಕಹಾಗೆ ಗುಣ ಹೊಂದಿಕೊಂಡಿರುತ್ತದೆ ಎನ್ನುತ್ತಾರೆ. ಪತ್ತೇಚಂದ್ ಎಂದರೆ, "ವಿಜಯ ಚಂದ್ರ" ಎಂದರ್ಥ. ಪತ್ತೇ ಚಂದ್

ಜಯ ಕಂಡವನೆ ಅಲ್ಲ. ಅವನನ್ನು "ವಿಜಯ ಚಂದ್ರ"ನೆಂದು ಕರೆಯದೆ, "ಸೋತ ಗುಲಾಮ"ನೆಂದು ಕರೆದಲ್ಲಿ ಹೆಸರು ಸಮಂಜಸವಾಗಿರುತ್ತಿತ್ತು.

ಅವನು ಕಛೇರಿ ಕೆಲಸದಲ್ಲಿ, ಸ್ವಕೀಯ ಜೀವನದಲ್ಲಿ, ಗೆಳೆಯರ ಬಳಗದಲ್ಲಿ, ಸುತ್ತಮುತ್ತಲಿನ ಎಲ್ಲಾ ಬಗೆಯಲ್ಲಿ ಸೋತು, ಸೋಲನ್ನು ಒಪ್ಪಿಕೊಂಡಿದ್ದ. ಅವನ ಸಂಸಾರ ಭಾರಕ್ಕೆ ಮೂರು ಹೆಣ್ಣುಮಕ್ಕಳಲ್ಲದೆ, ಇಬ್ಬರು ಸಹೋದರಿಯರು ಬೇರೆ. ಗಂಡು ದಿಕ್ಕಿಲ್ಲದ ಮನೆಗೆ, ಇವನೊಬ್ಬನೇ ಗುರಿಯಾಗಿದ್ದ. ಇವನ ಉದಾರಸ್ವಭಾವ, ದಯಾಶೀಲ ವರ್ತನೆಯನ್ನು, ಸುಲಭವಾಗಿ ಎಲ್ಲರೂ ತಮ್ಮ ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಈ ಅನ್ಯಾಯದಿಂದಿವನ ದೇಹಸ್ಥಿತಿ ಕೆಟ್ಟಿತ್ತು. ವಯಸ್ಸು ಮೂವತ್ತೆರಡು. ಈ ವಯಸ್ಸಿಗೆ ಇವನ ತಲೆ ಕೂದಲು ಉಪ್ಪುಮೆಣಸು ಬೆರೆಸಿದಂತೆ ಆಗಿಹೋಗಿತ್ತು. ಕಣ್ಣು ಕಾಂತಿ ಹೀನವಾಗಿ, ಮೊಗ ಕಂದಿಹೋಗಿ, ಕೆನ್ನೆಗಳು ಬತ್ತಿಹೋಗಿ, ಭುಜಗಳು ಬಾಗಿಹೋಗಿದ್ದವು. ಇವನ ಹೃದಯದಲ್ಲಿ ಉತ್ಸಾಹವಿರಲಿಲ್ಲ. ರಕ್ತದಲ್ಲಿ ಬಲವಿರಲಿಲ್ಲ. ಮುಂಜಾನೆ ಒಂಬತ್ತು ಘಂಟೆಗೆ ಕಛೇರಿಗೆ ಬಂದರೆ, ಮನೆಗೆ ಹಿಂತಿರುಗುತ್ತಿದ್ದುದು ಸಂಜೆ ಆರಕ್ಕೆ. ಮನೆ ಸೇರಿದ ಮೇಲೆ, ಅವನಲ್ಲಿಂದ ಮುಂದೆ ಕಾಲಿಡುವುದಕ್ಕೆ ಆಗುತ್ತಿರಲಿಲ್ಲ. ಚೇತನವೇ ಉಳಿಯುತ್ತಿರಲಿಲ್ಲ. ಮನೆಯ ಹೊರಗೆ, ಕಛೇರಿಯ ಹೊರಗೆ ಏನೇನು ನಡೆಯುತ್ತಿದೆಯೋ ತಿಳಿದುಕೊಳ್ಳಲವನಿಗೆ ಅವಕಾಶ ಸಿಗುತ್ತಿರಲಿಲ್ಲ. ಅವನ ಜೀವನ–ಜೀವನಾನಂತರ, ಸ್ವರ್ಗ–ನರಕ, ಪಾಪ–ಪುಣ್ಯ ಎಲ್ಲವೂ ಕಛೇರಿಯೇ ಆಗಿದ್ದಿತು. ಹೀಗಾಗಿ, ಅವನಿಗೆ ಜಾತಿಯಲ್ಲಿ, ಪ್ರಮೋದದಲ್ಲಿ, ಯಾತರಲ್ಲಿಯೂ ಲಕ್ಷ್ಯವಿರಲಿಲ್ಲ. ಅವನು ಆಟವಾಡಿ, ಸಂತೋಷ ವ್ಯಕ್ತಪಡಿಸಿದುದು ಎಷ್ಟೋ ವರ್ಷದ ಹಿಂದಿನ ಮಾತಾಗಿದ್ದಿತು.

ಆಗ ಮಳೆಗಾಲ. ನೀಲಾಕಾಶಕ್ಕೆ ಮೋಡ ಕವಿಚಿಕೊಂಡಿತ್ತು. ಪತ್ತೇಚಂದ್ ಕಛೇರಿಯಿಂದ ಮನೆಗೆ ಬಂದಿದ್ದ. ಹೊತ್ತು ಐದೂವರೆಯ ಸಮಯ, ಮನೆಯಲ್ಲಿ ದೀಪ ಹಚ್ಚಿಡುತ್ತಿದ್ದರು. ಮನೆಗೆ ಬಂದವನು, ಕತ್ತಲ ಮೂಲೆಯಲ್ಲಿ ಆರಾಮಾಸನದಲ್ಲಿ ನಿಶ್ಚೇಷ್ಟನಾಗಿ ಮಲಗಿಬಿಟ್ಟ. ಆಗ ಅವನಿಗೆ, ಉಸಿರುಬಿಟ್ಟು ಯಾರನ್ನಾದರೂ ತನ್ನ ಬಳಿ ಕರೆಯಲಿಕ್ಕೂ

ಚೇತನವಿರಲಿಲ್ಲ. ಹೀಗೆ ಶಕ್ತಿಯಿಲ್ಲದವನಂತೆ ಅವನು ಪವಡಿಸಿಬಿಟ್ಟಿದ್ದಾಗ, ಹೊರಗಡೆ ಯಾರೋ ಅವನನ್ನು ಕರೆದ ಹಾಗಾಯಿತು. ಅವನ ಚಿಕ್ಕ ಮಗಳು ಹೊರಗೆ ಬಂದು ನೋಡಿ, ಕಛೇರಿಯ ಆಳು ಕೂಗುತ್ತಿರುವುದಾಗಿ ತಂದೆಗೆ ತಿಳಿಸಿದಳು. ಪತ್ತೇಚಂದನ ಹೆಂಡತಿ ಶಾರದೆ, ಆಗ ಮನೆ ಪಾತ್ರೆಗಳನ್ನು ತೊಳೆದು ಸ್ವಚ್ಛಮಾಡಲು, ಅವುಗಳಿಗೆ ಬೂದಿ ಹಚ್ಚುತ್ತಿದ್ದಳು. ಸ್ವಚ್ಛಗೊಳಿಸಿ, ದಣಿದು ಬಂದ ಗಂಡನಿಗೆ ಏನಾದರೂ ಉಪಹಾರ ನೀಡಬೇಕೆಂದವಳು, ಬೇಗಬೇಗ ತೊಳೆಯುತ್ತಿದ್ದಳು. ಮನೆಯ ಹೊರಗೆ ಕೂಗುತ್ತಿದ್ದವರನ್ನು ನೋಡಿ ಶಾರದೆ, "ವಿಚಾರವೇನೆಂದು ಕೇಳು? ಈಗ ತಾನೆ ಕಛೇರಿಯಿಂದ ಬಂದಿದ್ದಾರೆ" ಎಂದು ಮಗಳನ್ನು ವಿಚಾರಿಸಿ ಬರಲು ಸೂಚಿಸದಳು. ಮಗಳು ಹಿಂದಿರುಗಿ "ಅಪ್ಪಾ ಪುನಃ ಕಛೇರಿಗೆ ಹೋಗಬೇಕು" ಎಂದು ವರದಿಮಾಡಿದಳು. ಈ ಹೊತ್ತಿಗೆ ಕಛೇರಿಯಿಂದ ಬಂದಿದ್ದ ಆಳು "ಸಾಹೇಬರು ಕರೆಕಳುಹಿಸಿದ್ದಾರೆ. ಅವಸರದ ಕೆಲಸವಿದೆಯಂತೆ" ಎಂದನು.

ಪತ್ತೇಚಂದನ ವಿಶ್ರಾಂತಿಗೆ ಭಂಗಬಂತು. ಕುಸಿದುಬಿದ್ದವನು, ತಲೆಯೆತ್ತಿ, "ಯಾರವನು?" ಎಂದು ಎದ್ದ.

"ಕಛೇರಿಯ ಆಳು" ಎಂದು ಶಾರದೆ ಹೇಳಿದಳು.

"ಕಛೇರಿಯ ಆಳೆ? ಸಾಹೇಬ ಈಗ ಏಕೆ ಬರಹೇಳಿದ್ದಾನೆ?"

"ಅವಸರದ ಕೆಲಸವಿದೆಯಂತೆ. ನಿಮ್ಮ ಅವಶ್ಯಕತೆ ಸದಾ ಅವನಿಗಿರುವಂತಿದೆ. ಬೆಳಗಿನಿಂದ ಸಂಜೆಯವರೆಗೆ ದುಡಿದಾಯಿತಲ್ಲ, ಸಾಲದೆ? ಈಗ ಬರಲಾಗುವುದಿಲ್ಲವೆಂದು ಹೇಳಿಕಳುಹಿಸಿ. ಎಂತಹ ಸಾಹೇಬನವನು! ಅವನಿಂದೇನಾದೀತು? ಕೆಲಸದಿಂದ ಕಿತ್ತುಹಾಕುವುದು ತಾನೆ" ಎಂದು ಶಾರದೆ ಕೋಪದಿಂದಲೇ ಮಾತನಾಡಿದಳು.

ಪತ್ತೇಚಂದ್ ತನ್ನಷ್ಟಗೆ ತಾನೇ ಮಾತನಾಡಿಕೊಳ್ಳುವಂತೆ ಗೊಣಗುಟ್ಟುತ್ತಾ, "ಇಂದಿನ ಕೆಲಸವನ್ನೆಲ್ಲಾ ಮುಗಿಸಿರುವೆ. ನನ್ನನ್ನೇಕೆ ಬರಹೇಳಿದನೋ ತಿಳಿಯದು. ಎಂತಹ ಹುಡುಗಾಟ ಬಂದುಬಿಟ್ಟಿ" ಎಂದು ಘಟ್ಟಿಯಾಗಿ ಕೂಗುತ್ತಾ ಹೊರಗಡೆ ನಿಂತಿದ್ದ ಆಳಿಗೆ ಸೂಚನೆ ಕೊಟ್ಟು ಹೊರಡಲು ಸಿದ್ಧನಾಗುತ್ತಿದ್ದ.

"ಸ್ವಲ್ಪ ಏನಾದರೂ ಉಪಹಾರ ತೆಗೆದುಕೊಂಡು ಹೋಗಿ. ಅವ ನೊಡನೆ ಮಾತಿಗೆ ನಿಂತರೆ ಎಲ್ಲವನ್ನೂ ಮರೆಯುತ್ತೀರಿ" ಎಂದಳು ಶಾರದೆ.

ಮಸೂರ ಬೀಜದಿಂದ ಮಾಡಿದ ಗಂಜಿಯನ್ನು ಗಂಡನಿಗೆ ತಂದಳು. ಹೊರಡಲನುವಾಗಿದ್ದವನು, ಹೆಂಡತಿ ಗಂಜಿ ಹಿಡಿದು ಬಂದುದನ್ನು ನೋಡಿ ಕುಡಿಯಲಿಕ್ಕೆ ಕುಳಿತ. ಕುಳಿತವನು "ಹುಡುಗರಿಗಾಯಿತೇನು?" ಎಂದು ಶಾರದೆಯನ್ನು ಕೇಳಿದ.

ಈ ಪ್ರಶ್ನೆ ಹಾಕುತ್ತಾರೆಂದು ನಿರೀಕ್ಷಿಸುತ್ತಿದ್ದ ಶಾರದೆ "ಅವರಿಗೆಲ್ಲಾ ಆಯಿತು, ನೀವಷ್ಟು ಕುಡಿಯಿರಿ" ಎಂದು ಮಾರ್ನುಡಿದಳು.

ಈ ವೇಳೆಗೆ, ಎಲ್ಲಿಯೋ ನಿಂತಿದ್ದ ಅವಳ ಕೊನೆಯ ಮಗಳು ಹತ್ತಿರ ಬಂದಳು. ಶಾರದೆ ರೋಷದಿಂದ "ಇಲ್ಲಿ ನಿನಗೇನು ಕೆಲಸ? ಹೊರಗಡೆ ಹೋಗಿ ಆಡಿಕೋ" ಎಂದು ಗದರಿಸಿದಳು.

"ಹುಡುಗರನ್ನೇಕೆ ಗದರಿಸುತ್ತೀಯೆ! ಚಿನ್ನಿ! ಬಾ ಇಲ್ಲಿ. ನೀನೂ ಸ್ವಲ್ಪ ಗಂಜಿ ಕುಡಿ" ಎಂದು ಪತ್ತೇಚಂದ್ ಮಗಳನ್ನು ಕೂಗಿದ.

ತಾಯಿಕಣ್ಣಿನಲ್ಲಿ ಕಂಡ ಕೋಪದ ರೇಖೆಗೆ ಬೆದರಿ, ಚಿನ್ನಿ ಬೀದಿಯ ಕಡೆಗೆ ಓಡಿಬಿಟ್ಟಿದ್ದಳು.

"ಗಂಜಿ ಸ್ವಲ್ಪವೇ ಉಳಿದಿದೆ. ಅದನ್ನು ಎಲ್ಲರಿಗೂ ಇಲ್ಲಿ ಹಂಚಲು ಸಾಧ್ಯವಿಲ್ಲ. ಒಬ್ಬರಿಗೆ ಕೊಂಚ ಕೊಟ್ಟರಾಯಿತು. ಎಲ್ಲರೂ ನಿಮ್ಮ ಹತ್ತಿರ ಬಂದು ನಿಂತುಬಿಡುತ್ತಾರೆ" ಎಂದಳು ಶಾರದೆ.

ಹೊರಗೆ ಕಾಯುತ್ತಾ ನಿಂತಿದ್ದ ಆಳು "ಬಾಪೂಜಿ ಹೊತ್ತಾಯಿತು" ಎಂದು ಅವಸರದಿಂದ ಕೂಗಿಕೊಂಡ.

"ಸಂಜೆ, ಈ ಹೊತ್ತಿನಲ್ಲಿ ಬರಲಿಕ್ಕಾಗುವುದಿಲ್ಲವೆಂದು ಹೇಳಿಕಳುಹಿಸ ಬಾರದೇ?" ಎಂದು ಶಾರದೆ ಗಂಡನನ್ನು ಕೇಳಿದಳು.

"ಹೇಗೆ ಹೇಳುವುದು? ಜೀವನ ನಡೆಯುತ್ತಿರುವುದೇ ಉದ್ಯೋಗ ದಿಂದ" ಎಂದ ಪತ್ತೇಚಂದ್.

"ಸಾಯುವ ಹಾಗೆ ದುಡಿಯುತ್ತೀರಿ. ಕನ್ನಡಿಯಲ್ಲಿ ನಿಮ್ಮ ಮುಖವನ್ನು ನೋಡಿಕೊಳ್ಳಿ. ಆರು ತಿಂಗಳಕಾಲ ಕಾಹಿಲೆ ಬಿದ್ದವರಂತೆ ಕಾಣುವಿರಿ"ಎಂದಳು.

ಪತ್ತೇಚಂದ್ ಸ್ವಲ್ಪ ಗಂಜಿ ಕುಡಿದು, ಬಾಯಿಗೆ ನೀರನ್ನೆತ್ತಿ ಸುರವಿಕೊಂಡು ಮನೆಯಿಂದ ಹೊರಬಿದ್ದ. ಅವನ ಹೆಂಡತಿ ಕೊಡಬೇಕೆಂದಿದ್ದ ಎಲೆಅಡಿಕೆ ತೆಗೆದುಕೊಳ್ಳಲು ಸಹಾ ಅವನಿಗೆ ಶಾಂತತೆಯಿರಲಿಲ್ಲ.

ಆಳು "ಬಹಳ ಹೊತ್ತು ಮಾಡಿದಿರಿ ಬಾಪೂಜಿ. ಬೇಗಬೇಗ ನಡೆಯಿರಿ. ಸಾಹೇಬ ರೇಗಿಯಾನು" ಎಂದ.

ಪತ್ತೇಚಂದ್ ಹೆಜ್ಜೆ ಹಾಕಲು ಯತ್ನಿಸಿದ. ಅದು ಸಾಗದೇ ಹೋಯಿತು.

"ಸಾಹೇಬ ರೇಗಿದರೆ ಚಿಂತೆಯಿಲ್ಲ, ಅವನಿಗಾಗಿ ನಾನು ಓಡಲಾರೆ! ಅವನೇನು ಕಛೇರಿಯಲ್ಲಿದ್ದಾನೆಯೋ ಬಂಗಲೆಯಲ್ಲಿದ್ದಾನೆಯೋ?"

ಆಳಿಗೆ ಬೇಗ ನಡೆಯುವ ಅಭ್ಯಾಸವಿತ್ತು. ಪತ್ತೇಚಂದನಿಗೆ ಬೇಗ ನಡೆದು ಹೋಗುವ ಅಭ್ಯಾಸವಿರಲಿಲ್ಲ. ಸರಿಸಮವಾಗಿ ಅವರು ಹೋಗಲಾಗಲಿಲ್ಲ. ಪತ್ತೇ ಚಂದನ ಎದೆಯಲ್ಲಿ ಇದ್ದಕ್ಕಿದ್ದ ಹಾಗೆ ನೋವು ಕಾಣಿಸಿತು. ಉಸಿರಾಡುವುದು ಕಷ್ಟವಾಯಿತು. ಇಡೀದೇಹ ತೂಗಾಡಿತು. ದಣಿದು ಬೆವರಿನಿಂದ ತೊಯ್ದು ಹೋಗಿದ್ದ. ಹೇಗೂ ಅವನು ನಡೆಯುತ್ತಿದ್ದಾಗ, ಮಿಂಚುಹುಳುಗಳು ಅವನ ಕಣ್ಣಿನ ಮುಂದೆ ಸುಳಿದಾಡಿ ಪೀಡಿಸುತ್ತಿದ್ದವು. ಆಳು, ಪತ್ತೇಚಂದನನ್ನು ಎಚ್ಚರಿಸಿ "ಬಾಪೂಜಿ ಬಹಳ ನಿಧಾನವಾಯಿತು" ಎಂದು ಬೆದರಿಸಿದ.

ಪತ್ತೇಚಂದನಿಗೆ ಮಾತನಾಡುವುದೇ ಕಷ್ಟವಾಯಿತು. "ನೀನು ಮುಂದೆ ಹೋಗುತ್ತಿರು. ಸ್ವಲ್ಪ ಹೊತ್ತಿನಲ್ಲಿ ನಾನು ಬರುವುದಾಗಿ ತಿಳಿಸು" ಎಂದ.

ರಸ್ತೆಯ ಬದಿಯಲ್ಲಿ ಮುಂದೆ ಹೆಜ್ಜೆಯಿಡಲಾರದೆ ಅವನು ಕುಳಿತುಬಿಟ್ಟ. ಶರೀರವನ್ನು ಒತ್ತರಿಸಿ, ಸಿಡಿಯುತ್ತಿದ್ದ ತಲೆಯನ್ನು ಎರಡು ಕೈಗಳಿಂದ ಬಲವಾಗಿ ಹಿಡಿದು ಕುಳಿತ. ಆಳು ಇವನ್ನೆಲ್ಲಾ ನೋಡುತ್ತ ಹೋಗುತ್ತಿದ್ದ. ಆಳು ಹೋಗುತ್ತಿದ್ದ ವೇಗವನ್ನು ನೋಡಿದ ಪತ್ತೇಚಂದನಿಗೆ ಭಯವಾಯಿತು. ಚೇತರಿಸಿಕೊಂಡು ಅವನೂ ಎದ್ದ. ಈ ಬಲಹೀನ ಸ್ಥಿತಿಯಲ್ಲಿದ್ದ ಪತ್ತೇಚಂದನನ್ನು ಸಣ್ಣ ಮಗುವೊಂದು

ಉರುಳಿಸಿಬಿಡಬಹುದಾಗಿತ್ತು. ಹೇಗೋ ಅವನು ಮುಗ್ಗರಿಸುತ್ತಾ ಸಾಹೇಬನ ಬಂಗಲೆಯೊಳಗೆ ಬಂದ.

ಪಡಸಾಲೆಯ ಹತ್ತಿರ ನಿಂತ ಆಳು "ಹುಜೂರ್, ಪತ್ರೇಚಂದ್ ಬಹಳ ನಿಧಾನಿಸಿಬಿಟ್ಟ. ಅಲ್ಲಿಂದಿಲ್ಲಿಗೆ ಓಡಿಬರಬೇಕಾಯಿತು" ಎಂದು ಹೇಳುತ್ತಿದ್ದ.

ಹರುಕುಮುರುಕು ಹಿಂದೂಸ್ಥಾನಿಯಲ್ಲಿ ಸಾಹೇಬ "ಅವನೇನು ಹೇಳಿದ?" ಎಂದು ಪ್ರಶ್ನಿಸಿದ.

"ಬರುತ್ತಿದ್ದಾನೆ. ಮನೆಯಿಂದ ಹೊರಗೆ ಬರಲು ಒಂದು ಘಂಟೆ ವೇಳೆ ಬೇಕಾಯಿತು" ಎಂದ.

ಈ ಹೊತ್ತಿಗೆ ಪತ್ರೇಚಂದ್ ಪಡಸಾಲೆ ಹತ್ತಿರಕ್ಕೆ ಬಂದು, ಸಾಹೇಬನಿಗೆ ನಮಸ್ಕಾರಮಾಡಿ ನಿಂತುಕೊಂಡ. ಇವನನ್ನು ನೋಡಿದ ಸಾಹೇಬ "ಏಕೆ ಇಷ್ಟು ಹೊತ್ತಾಯಿತು?" ಎಂದು ಕೇಳಿದ. ಸಾಹೇಬ ಹಾರಿಬಿದ್ದು ಕೇಳಿದುದನ್ನು ನೋಡಿ, ಪತ್ರೇಚಂದನಿಗೆ ಭಯವಾಯಿತು.

"ಹುಜೂರ್, ಸ್ವಲ್ಪ ಹೊತ್ತಿಗೆ ಮುಂಚೆ ಕಛೇರಿ ಬಿಟ್ಟೆ. ಆಳು ಬಂದು ಕೂಗಿದೊಡನೆಯೇ ಮನೆಯಿಂದ ಬಂದೆ" ಎಂದ.

"ಸುಳ್ಳು ಹೇಳುತ್ತಿದ್ದೀಯೆ! ನಾನಿಲ್ಲಿ ನಿಂತು ಒಂದು ಘಂಟೆ ಹೊತ್ತಾಯಿತು."

"ಹುಜೂರ್, ನಾನು ಸುಳ್ಳು ಹೇಳುತ್ತಿಲ್ಲ. ಇಲ್ಲಿಗೆ ಬರಲಿಕ್ಕೆ ಸ್ವಲ್ಪ ಹೊತ್ತಾಯಿತಷ್ಟೆ. ಅಸ್ವಸ್ಥನಾಗಿರುವೆ. ಆಳು ಬಂದು ಕೂಗಿದ ಕೂಡಲೆ ಮನೆಯಿಂದ ಬಂದುದು ಖಂಡಿತ" ಎಂದ.

ಸಾಹೇಬ ಬೆತ್ತ ಹಿಡಿದಿದ್ದ. ಬೆತ್ತವನ್ನು ಝುಳಪಿಸುತ್ತಾ "ಬಾಯಿಮುಚ್ಚು ಹಂದಿ! ನಿನಗೆ ಕಾಯುತ್ತಾ ನಿಂತು ಘಂಟೆಯಾಯಿತು. ಕಿವಿ ಹಿಡಿದು ಕ್ಷಮೆಬೇಡು" ಎಂದು ಗರ್ಜಿಸಿದ. ಅವನು ಕುಡಿದು ಮತ್ತೇರಿ ಮಾತನಾಡುತ್ತಿದ್ದುದು ಪತ್ರೇಚಂದನಿಗೆ ಗೊತ್ತಾಯಿತು. ಸಹನೆಯಿಂದ "ಹುಜೂರ್, ಈದಿನ ಕಛೇರಿಯಲ್ಲಿ ಹತ್ತುಘಂಟೆಯ ಕಾಲ ಕೆಲಸ ಮಾಡಿದೆ............ಯಾವಾಗಲೂ............"

"ಬಾಯಿ ಮುಚ್ಚು ಹಂದಿ. ಎಲ್ಲಿ! ಕಿವಿಹಿಡಿದುಕೊ..........."

"ನಾನು ಅಪರಾಧ ಮಾಡಿಲ್ಲ!"

ಪತ್ತೇಚಂದ್, ಸಾಹೇಬನೊಂದಿಗೆ ವಾದಕ್ಕೆ ನಿಂತದ್ದು ಸರಿಯೆನಿಸ ಲಿಲ್ಲ. ಸಾಹೇಬ ಆಳನ್ನು ಕೂಗಿ "ಈ ಹಂದಿಯ ಕಿವಿಹಿಂಡು" ಎಂದು ಪತ್ತೇಚಂದನ ಕಡೆಗೆ ಕೈತೋರಿದ.

ಆಳು ಮೆತ್ತಗೆ ಮತ್ತು ಧೃಢವಾಗಿ "ಹುಜೂರ್, ಅವನು ನನ್ನ ಮೇಲಣ ಅಧಿಕಾರಿ, ಅವನ ಮೇಲೆ ನಾನು ಕೈಹಾಕಲಾರೆ" ಎಂದ.

"ನೀನು ಹಿಂಡದಿದ್ದರೆ ಬಿಗಿಯುತ್ತೇನೆ" ಎಂದ ಸಾಹೇಬ ಆಳನ್ನು ಬೆದರಿಸಿದ.

"ಹುಜೂರ್! ನಾನಿರುವುದು ಕಛೇರಿಯಲ್ಲಿ ಕೆಲಸಮಾಡಲಿಕ್ಕೆ. ಹೊಡೆತ ತಿನ್ನುವುದಕ್ಕಲ್ಲ. ನನಗೂ ಆತ್ಮಗೌರವವಿದೆ. ನನ್ನಂತೆಯೇ ಆತ್ಮಗೌರವ ಉಳ್ಳವನ ಮೇಲೆ ಕೈಹಾಕಲಾರೆ. ಇಂತಹ ಕೆಲಸ ಮಾಡಿ ಪ್ರಪಂಚದಲ್ಲಿ ವೈರಿಗಳನ್ನು ಬೆಳಸಿಕೊಳ್ಳಲಾರೆ" ಎಂದ.

ಸಾಹೇಬ ಕೋಪವನ್ನು ತಡೆಯಲಾರದೆ, ಆಳಿನ ಮೇಲೆ ಬೀಳಲಿಕ್ಕೆ ಹೋದ. ಕೋಲಿನಿಂದ ಬಡಿತ ಬೀಳುವುದು ತಪ್ಪದೆಂದು ಗ್ರಹಿಸಿಕೊಂಡ ಆಳು, ಮೊದಲೇ ಅಲ್ಲಿಂದ ಓಡಿಬಿಟ್ಟಿದ್ದ.

ಪತ್ತೇಚಂದ್ ನಿಂತಲ್ಲಿಯೇ ಇದ್ದುದನ್ನು ನೋಡಿ ಸಾಹೇಬ, ಅವನ ಮೇಲೆ ಬಿದ್ದು, ಕಿವಿಗಳೆರಡನ್ನು ಎಳೆದು "ಹಂದಿ, ಅವಿಧೇಯ! ಕಛೇರಿಯಿಂದ ಕಾಗದದ ಕಟ್ಟನ್ನು ತೆಗೆದುಕೊಂಡು ಬಾ" ಎಂದು ಅಪ್ಪಣೆ ಮಾಡಿದ.

ಕಿವಿಯನ್ನು ಸವರಿಕೊಳ್ಳುತ್ತಾ, ಪತ್ತೇಚಂದ್ "ಯಾವ ಕಾಗದದ ಕಟ್ಟು" ಎಂದು ಕೇಳಿದ.

"ಯಾವುದು? ಯಾವುದು?........ನಿನಗೆ ಕೇಳಿಸುವುದಿಲ್ಲವೇನು?"

ಧೈರ್ಯವಹಿಸಿ, ಬೇಸರಧ್ವನಿಯಲ್ಲಿ "ಯಾವ ಕಾಗದದ ಕಟ್ಟು ಬೇಕಾಗಿದೆ?" ಎಂದು ಪುನಃ ಕೇಳಿದ.

ಈ ಮಾತು ಸಾಹೇಬನಿಗೆ ಕೇಳಿಸಲಿಲ್ಲ. ಅವನಿಗೆ ಅರ್ಥವಾಗುವಂತೆ ಹೇಳಲು ಪತ್ತೇಚಂದನಿಗೆ ಸಾಧ್ಯವಿರಲಿಲ್ಲ. ಸಾಹೇಬ ಮೇಲಾಗಿ ದುಷ್ಟ,

ಕುಡಿದಿದ್ದ. ಕುಡುಕ ಏನು ಅನರ್ಥ ನಡೆಸುವವನಿದ್ದನೋ ಹೇಳುವಂತಿರ ಲಿಲ್ಲ. ಇದನ್ನೆಲ್ಲಾ ಗ್ರಹಿಸಿದ ಪತ್ತೇಚಂದ್ ಕಛೇರಿಯು ಕಡೆಗೆ ತಿರುಗಿದ.

"ಓಡು! ಓಡು" ಎಂದು ಸಾಹೇಬ ಹಿಂದಿನಿಂದ ಗರ್ಜಿಸಿದ.

"ಹುಜೂರ್ ಓಡಲಾರೆ" ಎಂದು ಪತ್ತೇಚಂದ್ ಹೆಜ್ಜೆಯಿಡುತ್ತಿದ್ದ.

"ವೈಗಳ್ಳನಾಗುತ್ತಿದ್ದೀಯೆ, ಹೇಗೆ ಓಡುವುದೆಂಬುದನ್ನು ತೋರುವೆ" ಎಂದ ಸಾಹೇಬ, ಪತ್ತೇಚಂದನನ್ನು ಹಿಂದಿನಿಂದ ಒದೆದ.

ಪತ್ತೇಚಂದ್ ಕಛೇರಿಯ ನೌಕರನೆ. ಮನುಷ್ಯವರ್ಗಕ್ಕೆ ಸೇರಿ ದವನಲ್ಲವೇನು? ಸಾಹೇಬ ಪಶುವಿನಂತೆ ಅವನನ್ನು ಹೊಡೆದು, ಹಿಂಸಿಸಿ, ಅವಮಾನ ಪಡಿಸಿದ. ಪತ್ತೇಚಂದನ ಆರೋಗ್ಯ ಅಂದು ನೆಟ್ಟಗಿರಲಿಲ್ಲ. ಶಕ್ತಿಯಿದ್ದಿದ್ದಲ್ಲಿ, ಕುಡುಕನಿಂದ ಅವನು ಅಷ್ಟು ತಿರಸ್ಕಾರಕ್ಕೆ ಕಾರಣ ನಾಗುತ್ತಿರಲಿಲ್ಲ. ಮಾನಭಂಗವಾಗದಂತೆ ಎಚ್ಚರಿಕೆಯಿಂದಿರಲು ಆ ದಿನ ಅವನಿಗೆ ಸಾಧ್ಯವಾಗಲಿಲ್ಲ. ಪಡಸಾಲೆ ದಾಟಿ, ಅವನು ರಸ್ತೆಯ ಕಡೆಗೆ ಓಡಿದ.

ಅಲ್ಲಿಂದ ಕಛೇರಿಗೆ ಹೋಗಲಿಲ್ಲ. ಅವನಿಗೆ ಸ್ಪಷ್ಟವಾಗಿ ಸಾಹೇಬ ಯಾವ ಕಾಗದದ ಕಟ್ಟು ಬೇಕಾಗಿದೆಯೆಂದು ತಿಳಿಸಿರಲಿಲ್ಲ. ಅಮಲೇರಿದ್ದ ಸಾಹೇಬನಿಗೆ, ಸ್ಪಷ್ಟವಾಗಿ ಹೇಳಬೇಕೆಂದು ತೋರಲಿಲ್ಲವೇನೋ? ಮಾನ ಭಂಗ ಹೊಂದಿ, ನೋವಿನಿಂದ ವ್ಯಥೆಪಡುತ್ತಾ, ಮನೆಯ ಕಡೆಗೆ ನಿಧಾನ ವಾಗಿ ಹೊರಟುಬರುತ್ತಿದ್ದ ಪತ್ತೇಚಂದನಿಗಿಂತಲೂ, ಸಾಹೇಬ ದಾರ್ಢ್ಯ ಮನುಷ್ಯನೆ; ಹೀಗೆಂದು ಅವನ ಹೀನಕೆಲಸಕ್ಕೆ ಸರಿಯಾದ ಬುದ್ಧಿ ಕಲಿಸ ಬಾರದೆ? ಪಶುವೃತ್ತಿಯನ್ನು ಅನುಸರಿಸಿದವನಿಗೆ, ಪತ್ತೇಚಂದ್ ಕಾಲಿನಿಂದ ಕಳಚಿ ಮುಖದಮೇಲೆ ಎಸೆಯಬೇಕಾಗಿತ್ತು.

ಆಕಸ್ಮಿಕವಾಗಿ ನಡೆದುಹೋದ ಪ್ರಸಂಗದಲ್ಲಿ ತನಗೆ ಏನೂ ಉಪಾಯವಿರಲಿಲ್ಲವೆಂದು ಪತ್ತೇಚಂದನಿಗೆ ತೋರಿತು. ಮತ್ತು ಆಂಗ್ಲ ಅಧಿಕಾರಿ ಪತ್ತೇಚಂದನನ್ನು ಗುಂಡಿಕ್ಕಿ ಕೊಲ್ಲಬಹುದಿತ್ತು. ಈ ಕೃತ್ಯ ನಡೆಸಿದುದಕ್ಕೆ ಸಾಹೇಬ ದಂಡಕಟ್ಟುವಂತೆ ಮಾಡುತ್ತಿದ್ದರು. ಇಲ್ಲವೇ ಎರಡು ತಿಂಗಳ ಕಾಲ ಸೆರೆಮನೆಯಲ್ಲಿರುವಂತೆ ಶಿಕ್ಷೆಕೊಡುತ್ತಿದ್ದರು. ಪತ್ತೇಚಂದನ ಇಡೀ ಸಂಸಾರ ನಾಶವಾಗುತ್ತಿದ್ದಿತಲ್ಲಾ! ಪತ್ತೇಚಂದ್ ಸ್ಥಿತಿವಂತ

ನಾಗಿದ್ದಿದ್ದರೆ, ಸಾಹೇಬನ ಹಿಂಸಾಕೃತ್ಯಕ್ಕೆ ಸರಿಯಾದ ಪಾಠ ಕಲಿಸುತ್ತಿದ್ದ. ತನ್ನ ದುರಾದೃಷ್ಟವನ್ನು ಹಳಿದುಕೊಳ್ಳುತ್ತಾ ಪತ್ತೇಚಂದ್ ಮನೆಗೆ ಬರುತ್ತಿದ್ದ.

ಪತ್ತೇಚಂದ್ ಒಬ್ಬನ ಜೀವಮಾತ್ರಕ್ಕೆ ಧಕ್ಕೆಯಾಗಿದ್ದಿದ್ದರೆ ಚಿಂತೆಯಿರ ಲಿಲ್ಲ. ಜೀವನದಲ್ಲಿ ಅವನಿಗೆ ಸುಖಸಂತೋಷವಿಲ್ಲದಿದ್ದರೂ ಅವನನ್ನು ಆಶ್ರಯಿಸಿ ಬದುಕಿಕೊಂಡಿದ್ದ ಹೆಂಡತಿಮಕ್ಕಳಿದ್ದರು. ಅವನೇನೋ ಆಲೋಚಿಸಿದ. ಆರೋಗ್ಯವನ್ನೇಕೆ ಅಲಕ್ಷ್ಯಮಾಡಿಬಿಟ್ಟನೋ ತಿಳಿಯು ಲಾಗಲಿಲ್ಲ. ಮುಂದೆ ಯಾವಾಗಲೂ ಆತ್ಮರಕ್ಷಣೆಗಾಗಿ ಆಯುಧವೊಂದ ನ್ನಿಟ್ಟುಕೊಂಡಿರಬೇಕು ಎಂದವನು ನಿರ್ಧರಿಸಿ, ಅಂದು ಬರಿಗೈಯಲ್ಲಿ ಸಾಹೇಬನನ್ನು ಕಂಡದು ಒಳ್ಳೆಯದಾಗಲಿಲ್ಲವೆಂದು ಪೇಚಾಡಿಕೊಂಡ. ಒಂದುವೇಳೆ, ಸಾಹೇಬನನ್ನು ತಾನು ಕೊಂದುಬಿಟ್ಟಿದ್ದರೆ, ಮನೆಯಾಳು ಗಳು ಅವನ ಸಹಾಯಕ್ಕೆ ಬಂದು, ತನ್ನನ್ನು ಜ್ಞಾನತಪ್ಪಿ ಬೀಳುವವರೆಗೆ ಹೊಡೆದು ಕೊಂದುಬಿಡುತ್ತಿದ್ದರೆಂದು ಅವನಿಗೆ ತೋರಿತು. ಏನಾದರೇನು? ಅನಾಹುತವನ್ನೆದುರಿಸಿ ಸತ್ತುಹೋದನೆಂದು ಪ್ರಮಾಣವಾಗುತ್ತಿದ್ದಿತೇ ಹೊರತು, ಏನೂ ಆಗುತ್ತಿರಲಿಲ್ಲ ಎಂದುಕೊಂಡ. ಎಂದಾದರೂ ಸಾಯಬೇಕು. ಸತ್ತರೆ ಸಂಸಾರಕ್ಕೆ ದಿಕ್ಕಿಲ್ಲದಂತಾಗುವುದು ಖಂಡಿತ ಎಂದುಕೊಂಡ. ಆಗ ಪತ್ತೇಚಂದನಿಗೆ ಹೊಸ ಆವೇಶ ಬಂತು. ಮನೆಗೆ ಹೋಗುತ್ತಿದ್ದವನು, ಇದ್ದಕ್ಕಿದ್ದಹಾಗೆ ಸಾಹೇಬನ ಬಂಗಲೆಯ ಕಡೆಗೆ ತಿರುಗಿದ. ತಿರುಗಿದವನು, ತೊದಲುಧ್ವನಿಯಲ್ಲಿ ಮಾತನಾಡಿಕೊಳ್ಳುತ್ತಾ, "ಈ ಹೊತ್ತಿನಲ್ಲಿ ಅವ ನೆಲ್ಲಿರುತ್ತಾನೆ? ಕ್ಲಬ್ಬಿಗೆ ಹೋಗಿರುತ್ತಾನೆ. ಬಂಗಲೆಯೊಳಗೆ ನುಗ್ಗಿ ಹೆಚ್ಚಿನ ಉಸಾಬರಿ ಮಾಡಿಕೊಳ್ಳುವುದೇಕೆ? ಇಷ್ಟು ನಡೆದುದೇ ಸಾಕು" ಎಂದವನು, ಪುನಃ ಮನೆಯ ದಿಕ್ಕಿಗೆ ತಿರುಗಿದ.

ಅವನು ಮನೆಗೆ ಬಂದೊಡನೆಯೇ "ಬಹಳ ಹೊತ್ತು ಮಾಡಿದಿರಿ, ಸಾಹೇಬ ನಿಮ್ಮನ್ನೇಕೆ ಬರಹೇಳಿದ?" ಎಂದು ಶಾರದೆ ಗಂಡನನ್ನು ಕೇಳಿದಳು.

"ಅವನು ಕುಡಿದಿದ್ದ. ದೆವ್ವದಂತಹ ಮನುಷ್ಯ. ನನ್ನನ್ನು ಗದರಿಸಿ ಅವಮಾನ ಪಡಿಸಿದ. ಅವನಿಗೆ ಜ್ಞಾನವೇ ಇರಲಿಲ್ಲ. ಇಷ್ಟು ಹೊತ್ತೇಕೇ ಎಂದಬ್ಬರಿಸಿ, ನನ್ನ ಕಿವಿಹಿಡಿದು ಎಳೆಯುವಂತೆ ಆಳಿಗೆ ಅಪ್ಪಣೆಮಾಡಿದ."

ಈ ಮಾತನ್ನು ಕೇಳಿ ಕೆರಳಿದ ಶಾರದೆ "ನೀವು ಮೋಜಿನಿಂದ ಅವನಿಗೆರಡು ಹೊಡೆಯಬೇಕಿತ್ತು" ಎಂದಳು.

ನೊಂದು, ಇಳಿಮೊಗದಿಂದ ಮಾತನಾಡುತ್ತಿದ್ದ ಪತ್ತೇಚಂದ್ "ಆಳು ಒಳ್ಳೆಯವನೆ. ಅಗೌರವ ಕೆಲಸ ಮಾಡಲಾರನೆಂದು ಹೋಗಿಬಿಟ್ಟ" ಎಂದ.

"ಅವನೇ ನಿಜವಾಗಿ ಧೈರ್ಯಸ್ಥ. ಮತಿಗೇಡಿ ಆಂಗ್ಲನಿಗೆ ನೀವು ಚನ್ನಾಗಿ ಬುದ್ಧಿ ಕಲಿಸಿ ಬರಬೇಕಾಗಿತ್ತು."

"ನಾನು ಮೂರು ಬಾರಿ ಅವನನ್ನು ಎಚ್ಚರಿಸಿದೆ. ಕೋಲನ್ನು ಹಿಡಿದಿದ್ದವನು ನನ್ನ ಮೇಲೆ ಬಿದ್ದ. ಅವನನ್ನು ಮೋಜಿನಿಂದ ನಾನು ಹೊಡೆದೆ" ಎಂದ.

ಗಂಡನ ಅಸದಳ ಸಾಹಸದ ಕತೆ ಕೇಳಿದ ಶಾರದೆ, "ಅವನನ್ನು ನಿಜವಾಗಿ ಹೊಡೆದಿರಾ? ಏಟು ತಿಂದವನ ಮುಖ ಕೆಂಪಗಾಗಿ ನೋಡುವುದಕ್ಕೆ ಚನ್ನಾಗಿರುತ್ತದೆ" ಎಂದಳು.

"ಪೊರಕೆಯಿಂದ ಗುಡಿಸಿದ ಹಾಗಿತ್ತು."

"ನಾನಾಗಿದ್ದರೆ, ಅವನನ್ನು ಜೀವಸಹಿತ ಬಿಟ್ಟುಕೊಡುತ್ತಿರಲಿಲ್ಲ" ಎಂದಳು ಶಾರದೆ.

"ಅವನನ್ನೇನೋ ಹೊಡೆದೆ. ಈಗ ಸುಲಭವಾಗಿ ತಪ್ಪಿಸಿಕೊಳ್ಳುವುದು ಕಷ್ಟವೆಂದು ತೋರುತ್ತಿದೆ. ಏನಾಗುವುದೋ ಹೇಳಲಾರೆ. ಕೆಲಸದಿಂದ ನನ್ನನ್ನು ಕಿತ್ತುಹಾಕಬಹುದು. ಸೆರೆಗೆ ಕಳುಹಿಸಬಹುದು."

"ಸೆರೆಹಾಕುತ್ತಾರೇಕೆ? ನ್ಯಾಯಕ್ಕೆ ಬೆಲೆಯಿಲ್ಲವೇನು? ಅವನು ನಿಮ್ಮನ್ನೇಕೆ ಅವಮಾನ ಪಡಿಸಬೇಕು? ಮೊದಲು ಅವನು ನಿಮ್ಮನ್ನು ಹೊಡೆಯಲಿಲ್ಲವೇ?" ಎಂದು ವಾದಿಸಿದಳು.

"ನನ್ನ-ನಿನ್ನ ನ್ಯಾಯ ಕೇಳುವವರಾರು? ನ್ಯಾಯಾಧಿಪತಿ ಅವನು ಹೇಳಿದುದನ್ನೇ ನಂಬುತ್ತಾನೆ."

"ನ್ಯಾಯಕ್ಕೆ ಬೆಲೆ ಸಿಕ್ಕದಿದ್ದರೆ ಬೇಡ! ಮತ್ತೆರಿದ ಆಂಗ್ಲ ಅಧಿಕಾರಿಗೆ ಕೆಳದರ್ಜೆಯ ನೌಕರರನ್ನು ಅವಮಾನಗೊಳಿಸಬಾರದೆಂದು ಎಚ್ಚರಿಕೆ ಇರುತ್ತದೆ."

"ಜ್ಞಾನವಿಲ್ಲದವನು ನನ್ನನ್ನು ಗುಂಡಿಕ್ಕಿ ಕೊಂದಿದ್ದರೆ?"

"ಗುಂಡಿನಿಂದ ಹೊಡೆದಿದ್ದರೆ, ಅದನ್ನು ಯಾರಾದರೂ ತಿಳಿಯ ತ್ತಿದ್ದರು" ಎಂದಳು ಶಾರದೆ.

ಪತ್ತೇಚಂದ್ ಹಸನ್ಮುಖದಿಂದ "ಗುಂಡಿನ ಏಟು ತಿಂದು ನನ್ನ ಗ ಮುಗಿದಿದ್ದರೆ........ಏನಾಗುತ್ತಿತ್ತು?" ಎಂದು ಕೇಳಿದ.

ಧೈರ್ಯವಾಗಿ ಶಾರದೆ "ದೇವರು ನನ್ನನ್ನು ಆಗ ಕಾಪಾಡುತ್ತಿದ್ದ ಮನುಷ್ಯನಿಗೆ, ತನ್ನ ಆತ್ಮಗೌರವ ಉಳಿಸಿಕೊಳ್ಳುವುದು ಪ್ರಥಮ ಕರ್ತವ್ಯ. ಆತ್ಮಗೌರವವಿಲ್ಲದವನು ತನ್ನ ಮಕ್ಕಳನ್ನು ಚನ್ನಾಗಿ ಪಾಲಿಸಲಾರ. ನೀವು ಮತ್ತನಿಗೆ ಬುದ್ಧಿಹೇಳಿ ಬಂದಿರಿ, ಅವಮಾನ ಹೊಂದಿ ಹಿಂದಿರುಗಿ ಬಂದಿದ್ದರೆ, ನಾನು ನಿಮ್ಮಲ್ಲಿಟ್ಟಿದ್ದ ಗೌರವವನ್ನು ಕಳೆದುಕೊಳ್ಳುತ್ತಿದ್ದೆ. ನಿಮ್ಮ ಹೇಡಿಮುಖವನ್ನು ನೋಡದೆ ದ್ವೇಷಿಸುತ್ತಿದ್ದೆ" ಎಂದವಳು ನಿಧಾನ ವಾಗಿ "ಮುಂದೆ ಏನಾಗುವುದೋ ಅಗಲಿ, ಎಲ್ಲಕ್ಕೂ ನಾನು ಸಿದ್ಧಳಿರುವೆ" ಎಂದಳು.

ಹೆಂಡತಿ ಈ ಮಾತು ಹೇಳುತ್ತಿದ್ದಾಗಲೇ ಪತ್ತೇಚಂದ್ ಅವಳಿದ್ದ ಸ್ಥಳದಿಂದ ಬೇಗ ಬೇಗ ಕಾಲನ್ನಿಡುತ್ತಿದ್ದ.

"ನಿಲ್ಲಿ! ನಿಲ್ಲಿ! ಎಲ್ಲಿಗೆ ಹೋಗುತ್ತಿದ್ದೀರಿ!" ಎಂದು ಶಾರದೆ ಗಂಡನನ್ನು ಕೂಗಿಕೊಂಡಳು.

ಹುಚ್ಚುಹಿಡಿದವನಂತೆ, ಬಿರುಸಿನಿಂದ ಸಾಹೇಬನ ಬಂಗಲೆಯ ಕಡೆಗೆ ನಡೆಯುತ್ತಾ, ತಲೆಯೆತ್ತಿ, ಎದೆ ಚಾಚಿಕೊಂಡು, ಹೆಮ್ಮೆಯಿಂದ ಬರುತ್ತಿದ್ದ. ಅವನ ಧೃಡನಿಶ್ಚಯ ಮುಖದಲ್ಲಿ ಎದ್ದು ಕಾಣುತ್ತಿತ್ತು. ಬಂಗಲೆಯೊಳಗೆ ಪ್ರವೇಶಿಸುವುದಕ್ಕೆ ಮೊದಲು, ಸ್ನೇಹಿತನೊಬ್ಬನ ಮನೆಯಿಂದ ದಪ್ಪವಾದ ದೊಣ್ಣೆಯನ್ನು ಪಡೆದು ಬಂದಿದ್ದ.

ಆಗ ಒಂಬತ್ತು ಘಂಟೆಯ ಸಮಯ. ಸಾಹೇಬ ಊಟಮಾಡುತ್ತಿದ್ದ. ಅವನ ಅಪ್ಪಣೆಯಿಲ್ಲದೆ, ಪತ್ತೇಚಂದ್ ಊಟಮಾಡುತ್ತಿದ್ದ ಕಡೆಗೆ ನಡೆದ. ಅಡಿಗೆಯವ ಬಡಿಸಿ ತೆರಳುವುದನ್ನೇ ಕಾಯುತ್ತ ನಿಂತಿದ್ದು, ನಂತರ ಸಾಹೇಬನ ಎದುರುನಿಂತು ಅವನಿಗೆ ಕಾಣಿಸಿಕೊಂಡ. ಒಳಮನೆಗೂ ಊಟದಮನೆಗೂ ಮಧ್ಯೆ ತೆರೆಯಿದ್ದಿತು. ತೆರೆಯನ್ನು ಸರಿಸಿ, ತನ್ನ ಮುಂದೆ

ನಿಂತ ಪತ್ತೇಚಂದನನ್ನು ನೋಡಿದ ಸಾಹೇಬನಿಗೆ ಭಯವಾಯಿತು. ಆದರೂ ಅವನು ದರ್ಪದಿಂದ, "ಅಪ್ಪಣೆಯಿಲ್ಲದೆ ಇಲ್ಲಿಗೇಕೆ ಬಂದೆ?" ಎಂದು ಗರ್ಜಿಸಿದ. ಪತ್ತೇಚಂದ್, ಅವನ ಪ್ರಶ್ನೆಗೆ ಗಮನವೀಯದೆ, ಶುಭ್ರವಾಗಿದ್ದ ಊಟದ ಮನೆ, ವಿದ್ಯುದ್ದೀಪವನ್ನು ನೋಡುತ್ತಾ ತನ್ನ ಮದುವೆಯ ಸಮಯದಲ್ಲಿಯೂ ಇಷ್ಟು ಸೊಗಸಾಗಿ ಅಣಿಮಾಡಿರಲಿಲ್ಲ ವಲ್ಲಾ ಎಂದುಕೊಂಡ.

"ಏ! ತೊಲಗಾಚೆ! ಏಕೆ ಇಲ್ಲಿಗೆ ಬಂದೆ?" ಎಂದ ಸಾಹೇಬ. ಕೈಯಲ್ಲಿ ಹಿಡಿದುಕೊಂಡಿದ್ದ ದೊಣ್ಣೆ ಅವನಿಗೆ ತೋರುವಂತೆ ಹಿಡಿದು, "ಕಾಗದದ ಕಂತೆಯನ್ನು ಈಗ ತಂದಿದ್ದೇನೆ. ಮೊದಲು ಊಟ ಮುಗಿಸಿ ಕೊಂಡು ಬಾ. ನಿಧಾನವಾಗಿ, ಸೊಗಸಾಗಿ ಊಟಮಾಡು, ಅಲ್ಲಿಯವರೆಗೆ ಇಲ್ಲಿ ಕುಳಿತಿರುವೆ. ಇದೇ ನಿನಗೆ ಕೊನೆಯ ಊಟವೋ ಏನೋ" ಎಂದು ಪತ್ತೇಚಂದ್ ಹೇಳಿದ.

ಸಾಹೇಬ, ಈ ಮಾತನ್ನು ಕೇಳಿ ಮಂಕುಹಿಡಿದವನಂತೆ ಕುಳಿತು ಬಿಟ್ಟ. ಏಕಕಾಲದಲ್ಲಿ ಅವನಿಗೆ ಭಯವೂ ಕೋಪವೂ ಬಂತು. ಗುಮಾಸ್ತೆ ಜೀವದ ಹಂಗು ತೊರೆದು, ಏನಾದರೂ ಕೇಡು ಮಾಡಲಿಕ್ಕೆ ಬಂದಿರುವ ನೆಂದು ಅವನಿಗೆ ತೋರಿತು. ಮುಯ್ಯಿಗೆ ಮುಯ್ಯಿ ತೀರಿಸಲಿಕ್ಕೆ ಬಂದಿರು ವಂತಿದೆ, ಈಗ ನಿಧಾನವಾಗಿ ಮಾತನಾಡಿಸಿ, ಸನ್ನಿವೇಶ ಮಾರ್ಪಾಡಿಸಿ ಕೊಳ್ಳಬೇಕೆಂದವನು ಎಚ್ಚೆತ್ತನು. ನಾಯಿ ಏಟು ತಿನ್ನುವವರೆಗೆ ತಿನ್ನುತ್ತಾ ಮುಲುಗುತ್ತಿರುತ್ತದೆ, ಸಹಿಸದೆ ಸಿಟ್ಟಿನಿಂದ ಕವಕ್ಕನೆ ಎದುರುಬಿದ್ದರೆ ಹೊಡೆಯುವವನನಿ ಥರ್ಾರ ಕುಸಿಯುತ್ತದೆ. ಪತ್ತೇಚಂದ್ ಮೆತ್ತನೆಯ ಮನುಷ್ಯ. ಇವನಿಗೆ ಏನು ಮಾಡಿದರೂ ಭಾದಕವಿಲ್ಲವೆಂದು ತಿಳಿದ ಸಾಹೇಬ, ಬಹಳ ಕಠಿಣರೀತಿಯಲ್ಲಿ ವರ್ತಿಸುತ್ತಿದ್ದ. ಪತ್ತೇಚಂದ್ ಮಾರ್ಪಡಿಸಿ, ಜೀವದ ಹಂಗು ತೊರೆದು ಎದುರುಬಿದ್ದುದುದನ್ನು ನೋಡಿದ ಸಾಹೇಬನಿಗೆ ಭಯವಾಯಿತು. ಬೆಕ್ಕು ಲಕ್ಷ್ಯವಿಟ್ಟು ಹೆಜ್ಜೆಹೆಜ್ಜೆ ಕಾಯುತ್ತಾ ಎಚ್ಚರವಿರುವಂತೆ, ಪತ್ತೇಚಂದನ ಚಲನವಲನವನ್ನು ಲಕ್ಷ್ಯ ವಿಟ್ಟು ಸಾಹೇಬ ನೋಡುತ್ತಿದ್ದ. ಆಗ ಸಾಹೇಬನ ಕಾಠಿನ್ಯವೃತ್ತಿ ಸಡಲಿತು. ಒಂದು ಪ್ರತಿನಿಂದೆಯ ಮಾತು ಹೊರಬಿದ್ದರಾಯಿತು, ದೊಣ್ಣೆಯ ಪೆಟ್ಟು

ಖಂಡಿತವೆಂದವನು ತಿಳಿದ. ಸಾಹೇಬನು ಪತ್ರೀಚಂದನನ್ನು ಸೆರೆ
ಹಾಕಿಸಬಹುದಿತ್ತು. ಆದರೆ, ಅಪಚಾರ, ಅನಾಹುತ ಇವೆರಡರಿಂ
ಪಾರಾಗಲವನಿಗೆ ಸಾಧ್ಯವಿರಲಿಲ್ಲ. ನಮ್ರಭಾವದಿಂದ ಅವನು "ನನ್ನಿಂ
ನಿನಗೇನೋ ಅಪಚಾರವಾದಂತಿದೆ. ಅಂತಹ ಕೆಲಸವೇನು ಜರುಗಿತು
ನಿನ್ನ ಮನನೋಯುವಂತಹ ಮಾತನಾಡಿದೆನೇನು?" ಎಂದ.

"ಅರ್ಧಘಂಟೆಯ ಮುಂಚೆ, ನೀನು ನನ್ನ ಕಿವಿಹಿಡಿದೆಳೆದೆ. ಸಾವಿರ
ಬಾರಿ ಅವಿಧೇಯನೆಂದು ಸಾರಿದೆ. ಇದನ್ನೆಲ್ಲವನ್ನು ಇಷ್ಟು ಬೇಗ
ಮರೆತೆಯಾ?"

"ನಾನು ನಿನ್ನ ಕಿವಿಹಿಡಿದೆಳೆದೆನೇ! ಹುಡುಗಾಟದ ಮಾತು. ಹಾಗೆ
ಮಾಡಲು ನಾನೇನು ಹುಚ್ಚನೇ?"

"ನಿನ್ನ ವರ್ತನೆಗೆ ಆಳುಗಳೇ ಸಾಕ್ಷಿ. ಅವರೆಲ್ಲ ಆಗ ನೋಡು
ತ್ತಿದ್ದರು."

"ಇದೆಲ್ಲಾ ನಡೆದದ್ದು ಯಾವಾಗ?"

"ಅರ್ಧಘಂಟೆಯ ಹಿಂದೆ, ನೀನು ನನ್ನನ್ನು ಬರಹೇಳಿ ಕಿವಿ
ಎಳೆಯಲಿಲ್ಲವೇ?"

"ಓ! ಹೀಗಾಯಿತು. ಬಾಪೂಜಿ! ಹಾಗಾದರೆ ನಾನು ಕುಡಿದು
ಮತ್ತನಾಗಿದ್ದಾಗ ನಡೆದಿರಬಹುದು. ನಿತ್ಯವೂ ಕೊಡುತ್ತಿದ್ದುದಕ್ಕಿಂತ,
ಹೆಚ್ಚಿಗೆ ಪಾನವನ್ನು ಅವನು ಈ ದಿನ ಬಟ್ಟಲಿಗೆ ಸುರವಿಬಿಟ್ಟ. ಅಯ್ಯೋ
ದೇವರೆ! ಹೀಗೆ ನಡೆಯಿತೇ?"

"ನೀನು ಕುಡಿದುಬಿಟ್ಟು ಮತ್ತನಾಗಿದ್ದ ವೇಳೆಯಲ್ಲಿ ನನ್ನನ್ನು
ಗುಂಡಿಕ್ಕಿ ಕೊಲ್ಲುತ್ತಿದ್ದೆ. ನಾನು ಆಗ ಸತ್ತುಹೋಗುತ್ತಿರಲಿಲ್ಲ
ವೇನು? ಕುಡುಕ ನಡೆಸುವ ಎಲ್ಲಾ ಅಪರಾಧ ಕ್ಷಮಾರ್ಹವಾಬುದೆಂದು
ನೀನು ಭಾವಿಸಿರುವಂತಿದೆ. ಎಲ್ಲಿ! ನೀನು ಕಿವಿಹಿಡಿದು ತಪ್ಪಾಯಿತೆಂದು
ನನ್ನ ಕ್ಷಮೆಬೇಡು. ಈಗ ನಾನು ಕುಡಿದು ಬಂದಿದ್ದೇನೆ. ಮುಂದೆ ಈ
ರೀತಿ ವರ್ತಿಸುವುದಿಲ್ಲವೆಂದು ಕೇಳಿಕೋ, ನಿನಗೆ ಪಾಠ ಕಲಿಸಲು
ನಾನಿಲ್ಲಿಗೆ ಬಂದಿದ್ದೇನೆ. ಕೇಳಿಕೊ! ಸ್ಥಳಬಿಟ್ಟು ಕದಲಬೇಡ—ಕದಲಿದರೆ
ತಲೆಬುರುಡೆ ಒಡೆಯುತ್ತೇನೆ. ಕೇಳಿಕೋ........ಕಿವಿಹಿಡಿದು ಬೇಡು........"

ಸಾಹೇಬ ಈ ಮಾತನ್ನು ಕೇಳಿ ನಗಲಾರಂಭಿಸಿ "ನೀನು ಪ್ರತಿಯಾಗಿ ಹಾಸ್ಯಮಾಡಲು ಬಂದಂತಿದೆ. ಒಳ್ಳೆಯ ತಮಾಷೆಗಾರ ನಿದ್ದೀಯೆ! ನಿನ್ನನ್ನು ಹಾಗೆ ಕೇಳಿಕೊಳ್ಳಲು ನಾನೇನು ಅಪರಾಧ ಮಾಡಿರುವೆ?" ಎಂದು ಕೇಳಿದ.

"ಕಿವಿಹಿಡಿದುಕೋ!" ಎಂದು ಕೂಗಿ, ಪತ್ತೇಚಂದ್ ಹಿಡಿದ ದೊಣ್ಣೆಯನ್ನು ಝುಳಪಿಸಿ, ಸಾಹೇಬನ ಬರಿದಾಗಿದ್ದ ಬುರುಡೆಯಮೇಲೆ ಒಂದು ಬಿಟ್ಟ.

ಆಂಗ್ಲ ಅಧಿಕಾರಿ, ಏನಾದರೂ ಕ್ಷಮೆ ಕೇಳಿಕೊಳ್ಳಲು ಸಿದ್ಧನಿರಲಿಲ್ಲ. ಕುಳಿತಿದ್ದ ಸ್ಥಳದಿಂದ ನೆಗೆದು, ಪತ್ತೇಚಂದನ ಕೈಯಲ್ಲಿದ್ದ ದೊಣ್ಣೆಯನ್ನು ಕಸಿದುಕೊಳ್ಳಲು ಪ್ರಯತ್ನಿಸಿದ. ಸಾಹೇಬ, ಈ ಚಟವಟಿಕೆ ನಡೆಸುವ ಮೊದಲೇ ಅವನ ಬುರುಡೆಯಿಂದ ಸ್ವರವೇಳುವಂತೆ ಪತ್ತೇಚಂದ್ ಏಟು ಬಿಗಿದಿದ್ದ.

ಏಟು ತಿಂದ ಸಾಹೇಬ, ತಲೆಯನ್ನು ಎರಡು ಕೈಗಳಿಂದಲೂ ಹಿಡಿದು ಕೊಂಡು "ನಿನ್ನನ್ನು ಕೆಲಸದಿಂದ ತೆಗೆದುಹಾಕುವೆ" ಎಂದ.

"ನಾನು ಅದನ್ನು ಲಕ್ಷಿಸುವುದಿಲ್ಲ, ನೀನು ಈಗ ಕಿವಿಹಿಡಿದುಕೊಂಡು, ಎಂದೆಂದಿಗೂ ಹೀಗೆ ವರ್ತಿಸುವುದಿಲ್ಲವೆಂದು ಕೇಳಿಕೋ. ಕೇಳಿಕೊಳ್ಳು ವೆಯೋ ಇಲ್ಲವೆ ಎರಡನೆ ಹೊಡೆತ ತಿನ್ನುವೆಯೋ?" ಎಂದು ದೊಣ್ಣೆಯನ್ನು ಪುನಃ ಮೇಲಕ್ಕೆತ್ತಿದ.

ಮೊದಲನೆಯ ಏಟಿನ ಪ್ರಭಾವ ಕಂಡಿದ್ದ ಸಾಹೇಬನು ಪುನಃ ಅದರ ಸವಿಯನ್ನು ಇಚ್ಛಿಸದೆ, ಕಿವಿಗಳನ್ನು ಹಿಡಿದುಕೊಂಡು "ನೋಡು, ಈಗ ತೃಪ್ತಿಯಾಯಿತೇ?" ಎಂದ.

"ಇನ್ನು ಮೇಲೆ ಯಾರನ್ನೂ ಬಯ್ಯುವುದಿಲ್ಲವಲ್ಲ!"

"ಇಲ್ಲ."

"ಇನ್ನೆಂದಾದರೂ ಜನರಿಗೆ ಉಪದ್ರವ ಕೊಟ್ಟೆಯೋ, ನಾನೇನೂ ದೂರದಲ್ಲಿರುವುದಿಲ್ಲ."

"ಆ ಗೊಡವೆಗೆ ಹೋಗುವುದಿಲ್ಲ."

"ಒಳ್ಳೆಯದು. ನಾನಿನ್ನು ಹೋಗುವೆ. ಇಂದಿನಿಂದ ನಾನು ನಿ
ಗುಮಾಸ್ತೆಯಲ್ಲ. ನೀನು ನನ್ನ ಅಧಿಕಾರಿಯಲ್ಲ. ನಾನೇ ಖುದ್ದಾ
ಬರೆದ ರಾಜೀನಾಮೆ ಪತ್ರವನ್ನು ನಾಳೆ ಆಫೀಸಿಗೆ ಕಳುಹಿಸಿಕೊಡುವೆ.
ಪತ್ರದಲ್ಲಿ, ಕೆಟ್ಟವರ್ತನೆಯುವನೊಂದಿಗೆ ಕೆಲಸಮಾಡಿಕೊಂಡಿರಲು ಸಾಧ
ವಿಲ್ಲವೆಂದು ಸ್ಪಷ್ಟಪಡಿಸುವೆ" ಎಂದು ಪತ್ತೇಚಂದ್ ತಿಳಿಸಿದ.

"ರಾಜೀನಾಮೆ ಪತ್ರವೇಕೆ? ನಿನ್ನನ್ನು ಕೆಲಸದಿಂದ ತೆಗೆಯು
ದಿಲ್ಲ" ಎಂದ ಸಾಹೇಬ.

ನಿನ್ನಂತಹ ದುಷ್ಟನೊಂದಿಗೆ ಕೆಲಸಮಾಡಲೆನಗೆ ಒಪ್ಪಿಗೆಯಿಲ್ಲ."

ಸಾಹೇಬನಿಗೆ ಮಾಡುವ ಶಿಕ್ಷೆ ಮಾಡಿ, ತೃಪ್ತಿಯಿಂದ, ಸರ
ಮನಸ್ಸಿನಿಂದ ಪತ್ತೇಚಂದ್ ಮನೆಯ ಕಡೆಗೆ ನಡೆದು ಬರುತ್ತಿದ್ದ. ಅಂದ
ಅವನಿಗೆ ಹೆಮ್ಮೆ ಬಂದಿತು. ಜಯೋತ್ಸಾಹದಿಂದ ಬರುತ್ತಿದ್ದವನಿ
ವ್ಯಕ್ತಿ ಸ್ವಾತಂತ್ರ್ಯವೇನೆಂಬುದರ ಅರ್ಥ ಪೂರ್ಣವಾಗಿ ತಿಳಿಯಿತು
ಅವನು ಜೀವನದಲ್ಲಿ ಎಂದೂ ಕಾಣದ ಆನಂದಸುಖವನ್ನು ಅಂದ
ಅನುಭವಿಸಿದ.

# ಜ್ಯೋತಿಷಿ

ಅವರು ಈಗಿಲ್ಲ, ತೀರಿಕೊಂಡಿದ್ದಾರೆ. ಅವರ ಬಗ್ಗೆ, ನಾನು ಬೇಕಾದಷ್ಟು ಈಗ ನಿರ್ಭಯವಾಗಿ ಬರಿಯಬಹುದು. ಅವರು ನನಗೆ ನೆಂಟರು, ಜ್ಯೋತಿಷ್ಯ ಶಾಸ್ತ್ರಕ್ಕೆ ಪೂರಾ ಗಂಟುಬಿದ್ದಿದ್ದರು. ಈ ಜ್ಯೋತಿಷಿಗಳ ವಿಚಾರವೇ ಈಗ ಬರಿಯುತ್ತಿರುವುದು. ಅವರ ಜೀವಿತಕಾಲದಲ್ಲಿ ನಾನು ಈ ವಿವರಣೆ ಬರೆದಿದ್ದರೂ ಅವರು ನೋಡುತ್ತಿರಲಿಲ್ಲವೆಂದು ಈಗ ತಿಳಿಯುತ್ತೇನೆ. ಏಕೆಂದರೆ, ಅವರಿಗೆ ಅವರ ಶಾಸ್ತ್ರ ವಿನಹ ಸಾಹಿತ್ಯದ ಬಗ್ಗೆ ಅಭಿರುಚಿ ಎಳ್ಳಷ್ಟೂ ಇರಲಿಲ್ಲ. ಜ್ಯೋತಿಷ್ಯ, ಭವಿಷ್ಯ, ಭವಿಷ್ಯೋತ್ತರವನ್ನಷ್ಟುಮಾತ್ರ ಹೇಳುವ, ತಿಳಿದುಕೊಳ್ಳುವ ಆಸಕ್ತಿಯಿತ್ತು. ತಮ್ಮ ಶಾಸ್ತ್ರಪ್ರಪಂಚದಲ್ಲಿದ್ದು ಶೋಧನೆ ನಡೆಸುವುದೇ ಸಾಕಾಗಿ, ಬೇರೆ ಪ್ರಪಂಚ ವಿಷಯಗಳು ಅವರ ಪಾಲಿಗೆ ಇಲ್ಲದಂತಾಗಿತ್ತು. ಅದೇ ಈ ಜ್ಯೋತಿಷಿಗಳಿಗೆ, ಗ್ರಹಮಾನ, ನಕ್ಷತ್ರ ಶಾಸ್ತ್ರ ವಿಷಯಗಳ ಮೇಲೆ ಅಭಿರುಚಿ ಬೆಳೆದಿದ್ದಲ್ಲಿ, ಚರಿತ್ರೆಯೇ ಬೇರೆಯಾಗುತ್ತಿತ್ತು. ಸೃಷ್ಟಿಗರ್ಭದಲ್ಲಿ ಅಡಗಿಕೊಂಡಿದ್ದ ಎಷ್ಟೋ ತತ್ವಗಳನ್ನವರು ಹೊರಗೆಡಹಿ, ಕೀರ್ತಿಶಾಲಿಗಳಾಗುತ್ತಿದ್ದರು ಎನ್ನುವುದರಲ್ಲಿ ಸಂಶಯವೇ ಇರಲಿಲ್ಲ.

ಒಂದು ದಿನ ನಾನು ಈ ಜ್ಯೋತಿಷಿಗಳೊಂದಿಗೆ ಹೋಗುತ್ತಿದ್ದೆ. ಆಗ ಸಂಜೆಯ ಸಮಯ. ಕಿರಣಗಳು ಬೆಳಗುತ್ತಿದ್ದವು. ತಲೆಯೆತ್ತಿ ಅವುಗಳನ್ನು ನೋಡುತ್ತಾ ಜ್ಯೋತಿಷಿಗಳು, "ನೋಡು! ಅವೇ ನಮ್ಮ ಗೊತ್ತುಗುರಿಗಳನ್ನು ನಿರ್ಣಯಿಸುವುದು. ಈ ಪ್ರಪಂಚದ ಎಣಿಕೆ, ಕುಣಿಕೆ ಎಲ್ಲಾ ಇವುಗಳಿಂದಲೇ ಬದಲಾಯಿಸಲ್ಪಡುವುವು. ಇವುಗಳ ಬಗ್ಗೆ ತಿಳಿದುಕೊಳ್ಳಬೇಕೆಂಬುದೇ ನನ್ನ ಹಂಬಲ" ಎಂದರು.

"ಜ್ಯೋತಿಷಿಗಳನ್ನು, ಜ್ಯೋತಿಷ್ಯ ಶಾಸ್ತ್ರವನ್ನು, ಪ್ರಾಕೃತಿ ಜ್ಯೋತಿಷಿಗಳು ಲೆಕ್ಕಿಸುವುದೇಯಿಲ್ಲವಲ್ಲಾ! ನೀವೂ ಅವರಂತೆಯೇ ಸಂಶೋಧನಾ ಪಂಡಿತರಾದಲ್ಲಿ ಎಷ್ಟೋ ಮರ್ಯಾದೆ ನಿಮಗೆ ದೊರೆಯುತ್ತಿತ್ತಲ್ಲಾ!" ಎಂದೆ.

"ಖಗೋಲ ಶಾಸ್ತ್ರಜ್ಞರೋ! ಅವರೇನು ಮಾಡುತ್ತಿರುವುದು ಒಹ
ದುರ್ಬೀನಿನಿಂದ ಕೆಲಸಕ್ಕೆ ಬಾರದುದನ್ನು ನೋಡುತ್ತಿರವುದು ತಾನ
ಜ್ಯೋತಿಷ್ಯ ಶಾಸ್ತ್ರದ ಬೆಲೆ, ಏನುಗೊತ್ತು ಅವರಿಗೆ? ಎಣಿಸಿ, ಗುಣಿ
ಫಲಾಫಲಗಳನ್ನು, ಜೀವನದ ಆಗು ಹೋಗುಗಳನ್ನು ತಿಳಿಯುವುದೆಂದ
ಸುಲಭದ ಕೆಲಸವಲ್ಲ. ಶಾಸ್ತ್ರವೆಂದರೆ ಜ್ಯೋತಿಷ್ಯ ಶಾಸ್ತ್ರವೇ ಶಾಸ್
ಮೇಲುಗೈ" ಎಂದರು.

ಹೀಗೆ ಮಾತನಾಡುತ್ತಾ, ಟೀಕಿಸುತ್ತಾ ಜ್ಯೋತಿಷಿಗಳು ನಡೆ
ಬರುತ್ತಿದ್ದರು. ಜೀವನಾಂಶದಲ್ಲಿ, ನಕ್ಷತ್ರಪಾತ್ರ ಬಹಳ ಮುಖ್ಯವಾದ
ಬೆಂದು ಅವರು ಜನರೊಡನೆ ಸದಾ ಪ್ರತಿಪಾದಿಸುತ್ತಿದ್ದರು. ಸರಿ, ಮೂ
ನಂಬಿಕೆಯಿಂದ ಕೈಕಟ್ಟಿ ಕುಳಿತವರು ಇವರ ಬಳಿ "ಉಳಲಿಕ್ಕೆ ಕಾ
ಯೋಗ್ಯವಾಗಿದೆಯೇ? ಕೊಯಲಿಗೆ ಯಾವ ದಿನ ಪ್ರಶಸ್ತವಾಗಿದೆ?
ಎಂದು ಕೇಳಿದರಾಯಿತು. ಈ ಪ್ರಶ್ನೆಗಳನ್ನೆಲ್ಲಾ ಕೇಳಿ ಮುಗಿಸಿದ ಮೇಲ
ಜ್ಯೋತಿಷಿಗಳು ಗಾಢವಾಗಿ ತಮ್ಮ ಗುಣಿತದಲ್ಲಿ ಮುಳುಗಿಹೋಗುತ್ತಿದ್ದರು
ಗ್ರಹಮಾನ್ಯ ಅರಿತುಕೊಂಡ ಎಷ್ಟೋ ಹೊತ್ತಿನಮೇಲೆ ಪ್ರಶ್ನೆ ಕೇ
ದವರಿಗೆ ಅನುಕೂಲ ಪ್ರತಿಕೂಲಗಳನ್ನು ತಿಳಿಸುತ್ತಿದ್ದರು.

ಯಾರಾದರೂ ಜನನ, ವಿವಾಹ ಮುಹೂರ್ತ ಮುಂತಾದ ಶು
ದಿನಗಳನ್ನು ಗೊತ್ತುಮಾಡಿಕೊಳ್ಳಲು ಜ್ಯೋತಿಷಿಗಳನ್ನು ಕೇಳುತ್ತಿದ್ದರು
ಹಲಗೆಯ ಮೇಲೆ ಬರೆದು, ಗುಣಿಸಿ, ಪಂಚಾಂಗವನ್ನು ತಿರುವಿಹಾ
ಎಷ್ಟೋಕಾಲ ಕಳೆದಮೇಲೆ, ಮುಂದಿನ ಆರು ತಿಂಗಳಲ್ಲಿ ಯಾವುದೊ
ದಿನವನ್ನು ಸೂಚಿಸಿ ಆ ದಿನ ಪ್ರಶಸ್ತವಾಗಿದೆಯೆಂದು ಹೇಳುತ್ತಿದ್ದರು.

ಹುಟ್ಟಿದ ಮಗುವಿನ ಜಾತಕಫಲ ತಿಳಿಯುವುದೆಂದರೆ, ಅವರಿ
ಮತ್ತೂ ಜಟಿಲಸಮಸ್ಯೆಯಾಗಿದ್ದಿತು. ಅವರಿಗೆ ತಮ್ಮ ಶಾಸ್ತ್ರದ ಮೇಲಿ
ಆಸಕ್ತಿ, ಪ್ರಿಯತೆ, ಅಭಿಮಾನ ಎಲ್ಲೆಮೀರಿತ್ತು. ಜೀವಧಾರಣದಿಂ
ಮರಣದವರೆಗೆ ಜರುಗುವ ಫಲಾಫಲಗಳನ್ನು ತಿಳಿಯುವ ಹುಬ್ಬಯ
ಅವರದು. ಜನರ ಶುಭಾಶುಭ ಫಲಗಳನ್ನಾಗಲೀ ಇಲ್ಲವೆ ಕೇಡಕನ್ನಾಗಲಿ
ನಿರ್ಭಯವಾಗಿ ಅವರು ತಿಳಿಸಿಬಿಡುತ್ತಿದ್ದರು.

ಶುಭವೂ ಅಶುಭವೂ ಎರಡೂ ಅವರಿಗೆ ಪ್ರಿಯವಾಗಿದ್ದವು. ಯಾವುದೋ ಸಮಯದಲ್ಲಿ ಮೊದಲನೆಯ ಮಹಾಯುದ್ಧ ನಡೆಯುವ ಸೂಚನೆಯನ್ನವರು ಮುಂದಾಗಿ ನುಡಿದುಬಿಟ್ಟಿದ್ದರಂತೆ. ಈ ಸೂಚನೆಯನ್ನು ಮುಂದಾಗಿ ನುಡಿದ ಜ್ಯೋತಿಷಿಗಳಿಗೆ ಹೆಮ್ಮೆ ಬಂದುಬಿಟ್ಟಿತು. ಪ್ರಮಾದ, ಮಹಾ ವಿಪತ್ತು, ಮೊದಲಾದ ಸಂಕಟ ಕಂಟಕಗಳನ್ನು ಜನರಿಗೆ ಎಚ್ಚರಿಕೆಗಾಗಿ ತಿಳಿಸುತ್ತಿದ್ದರು. ಇವರು ಸೂಚಿಸಿದ ಕಂಟಕ ನಿಜವಾಗಿ ಜರುಗಿಹೋದಲ್ಲಿ ತೀರಿತು. ಅವರ ಸಂತೋಷ ಮಿತಿಮೀರುತ್ತಿತ್ತು. ತಿಂಗಳಾನುಗಟ್ಟಲೆ ಈ ವಿಚಾರವೆತ್ತಿ, ತಮ್ಮನ್ನು ತಾವೇ ಹೊಗಳಿಕೊಳ್ಳುತ್ತಿದ್ದರು. ಈ ನಡುವೆ, ಜ್ಯೋತಿಷ್ಯಶಾಸ್ತ್ರದ ವೈಭವ ವರ್ಣನೆ ನಿರ್ವಿಘ್ನವಾಗಿ ಅವರ ಬಾಯಿಂದ ಹೊರಬೀಳುತ್ತಿತ್ತು.

"ಆ ಗೌಡತಿ ಮಗನ ವಿಚಾರ ತಿಳಿದಿಲ್ಲವೇನು?" ಹೀಗೆಂದು, ಅವನು ಬಾರಿಬಾರಿಗೂ ಸಿಕ್ಕಿದವರನ್ನು ಕೇಳಿಬಿಡುತ್ತಿದ್ದರು. ಅವನನ್ನು ಒಂದು ಎತ್ತು ತಿವಿದು, ಬಾವಿಯಲ್ಲಿ ಕೆಡವಿ ಘಾಸಿಪಡಿಸಿತ್ತು. "ಅವನು ಮೊದಲೇ ತನ್ನ ಗ್ರಹಮಾನ ತಿಳಿದು ಎಚ್ಚರವಾಗಿದ್ದಲ್ಲಿ ಮೇಲಾಗುತ್ತಿದ್ದಿತಲ್ಲಾ! ಅವನಿಗೆ ಮುಂದೆ ನೀರಿನಿಂದ, ಬೆಂಕಿಯಿಂದ, ಪ್ರಾಣಿಯಿಂದ ಅಪಾಯ ಸಂಭವಿಸುವುದಿದೆಯೆಂದು ಮುಂಚಿತವಾಗಿಯೇ ತಿಳಿಸುತ್ತಿದ್ದೆನಲ್ಲಾ! ಅಯ್ಯೋ ಹುಡುಗ!" ಎಂದವರು ಪ್ರಲಾಪಿಸುತ್ತಿದ್ದರು.

ಮುಂದೊದಗುವ ಘಟನೆಗಳನ್ನು ಅವರೆಷ್ಟೋ ಸೂಚಿಸಿದ್ದುದು ನಿಜ. ಅವುಗಳಲ್ಲಿ ಬಹಳ ಸುಳ್ಳಾಗುತ್ತಿದ್ದವು. ಈ ಸೋಲಿನ ಬಗ್ಗೆ ಯಾರಾದರೂ ಟೀಕಿಸಿ ಮಾತನಾಡಿದರೆ, ಎಲ್ಲೋ ಎಣಿಕೆಯಲ್ಲಿ ತಪ್ಪುಬಿದ್ದಿರಬೇಕು, ನಕ್ಷತ್ರಫಲ ತಪ್ಪಾಗಿರಲಾರದು ಎಂದು ಸುಲಭವಾಗಿ ಜಾರಿಕೊಳ್ಳುತ್ತಿದ್ದರು. ಅವರು ಸೂಚಿಸಿದಂತೆ ಮಹಾಯುದ್ಧ ನಡೆಯಿತಲ್ಲ ಎಂದು ಈ ವಿಚಾರವೆತ್ತಿ, ವಾದಮಾಡಿ ಸಮರ್ಥಿಸುತ್ತಿದ್ದರು.

ವಿಧಿಯು ಈ ಜ್ಯೋತಿಷಿಗಳಿಗೆ ಅವರ ಮನವರಿತು ಸಹಕರಿಸುವ ಗೃಹಿಣಿಯನ್ನು ಇತ್ತಿರಲಿಲ್ಲ. ಗೃಹಿಣಿ, ಈ ಶಾಸ್ತ್ರ ಪಂಡಿತರಿಗೆ ಉತ್ತೇಜನವಾಗಿ ಬೆಂಬಲ ನೀಡುವವಳಾಗಿರಲಿಲ್ಲ. ಈ ಸಹಕಾರವೂ ಇವರಿಗೆ

ಒದಗಿದ್ದರೆ ಎಷ್ಟು ಪ್ರಯೋಜನವಾಗುತ್ತಿದ್ದಿತೋ? ಗಂಡನನ್ನು ಕಂಡ ಹೆಂಡತಿಗೆ ಸೈರಣೆಯಿರುತ್ತಿರಲಿಲ್ಲ. ಬೆಳಗಿನಿಂದ ಬೈಗಿನವರೆಗೆ ತನ್ನ ಮತ್ತು ಮನೆಗೆಲಸವನ್ನು ಪಾಲುಮಾಡುತ್ತಿದ್ದ ಗಂಡನನ್ನು ಹೆಂಡತಿ ತಿರಸ್ಕರಿಸ ಬಿಟ್ಟಾಳೆಯೇ? "ಕೈಗೆ ಎಟುಕದ, ಕಣ್ಣಿಗೆ ಕಾಣದ ನಕ್ಷತ್ರವನ್ನೇಕೆ ಕುರಿತು ಚಿಂತಿಸುತ್ತೀರಿ? ನಿಮ್ಮ ಆಯವ್ಯಯದ ತನಿಖೆ ನೋಡಿಕೇಳಿ ಇದರಿಂದಲಾದರೂ ನಿಮ್ಮ ತಪಸ್ಸಾಧನೆಗೆ ತಕ್ಕ ಪ್ರತಿಫಲ ಸಿಕ್ಕೀತು" ಎಂದು ಟೀಕಿಸುತ್ತಿದ್ದಳು.

ಜ್ಯೋತಿಷಿಗಳು, ಹೆಂಡತಿಯ ಬೇಸರದ ಮಾತಿಗೆ "ಆಯ್ಯೋ ವಿಧಿಯೇ! ನಿನಗೇನು ತಿಳಿದೀತು? ನಮ್ಮ ಫಲಾಫಲಗಳನ್ನು ಗ್ರಹ ಮಾನ್ಯ ಕಾದುಕೊಂಡಿರುತ್ತದೆ. ಆ ಗ್ರಹಗಳೇ ಪ್ರಕೃತ ಜೀವನಕ್ಕೆ ಕಾರಣವಾಗಿರುವಾಗ, ನಾನು-ನೀನು ಏನು ಮಾಡಲಾದೀತು?" ಎನ್ನು ತ್ತಿದ್ದರು.

ಗಂಡನ ಈ ಸದುತ್ತರ, ಹೆಂಡತಿಗೆ ಸಮಂಜಸವಾಗಿ ಕಾಣುತ್ತಿರ ಲಿಲ್ಲ. ಆಕೆ, ಟೀಕಿಸಿ, ನಿಂದಿಸಿ, ಅಪಶಕುನದ ಉತ್ಪಾತ ಮಾಡು ತ್ತಿದ್ದಳು. ಏನಾದರೇನು? ನಕ್ಷತ್ರ, ಗ್ರಹಮಾನ್ಯಕ್ಕೆ ಗಂಟುಬಿದ್ದ ಜ್ಯೋತಿಷಿ, ಯಾವುದನ್ನೂ ಗಮನಿಸುತ್ತಿರಲಿಲ್ಲ.

ಜ್ಯೋತಿಷಿಯ ಮನೆಯಲ್ಲಿ ದಪ್ಪನೆಯ ಹೊತ್ತಿಗೆಯಿದ್ದಿತು. ಆ ಹೊತ್ತಿಗೆಯಲ್ಲಿ, ವೈಭವವೆತ್ತ ಈ ಮಹಾಪುರುಷನ ಜನ್ಮಕುಂಡಲಿಯನ್ನು ಯಾರೋ ಹಿಂದಿನ ಜ್ಯೋತಿಷಿಗಳು ಗುರುತಿಸಿದ್ದರು. ಗುರುತಿಸಿದವರು ಎಂದೋ ತೀರಿಕೊಂಡಿದ್ದರು. ಒಂದುಸಾರಿ ಜ್ಯೋತಿಷಿ ತನ್ನ ಕುಂಡಲಿ ಯನ್ನು ವಿಮರ್ಶಿಸಿಕೊಂಡ. ನಕ್ಷತ್ರಗಣ, ತನ್ನ ಮೇಲೆ ಅಪೂರ್ವ ವರ್ಚಸ್ಸು ಬೀರಿದೆಯೆಂದು ತಿಳಿದ ಅವರಿಗೆ ಬಹಳ ಹೆಮ್ಮೆಯಾಯಿತು. ಒಂದು ವಿಚಿತ್ರವಾದ ಭಾವನೆ ಬಹಳ ದಿನದವರೆಗೆ ಅವರಿಗೆ ಉಂಟಾ ಯಿತು. ತನ್ನ ಕುಂಡಲಿ ಗುರುತಿಸಿದ ದೈವಜ್ಞರಿಗೆ, ಜ್ಯೋತಿಷ್ಯಶಾಸ್ತ್ರ ಗಂಧವೇ ಇರಲಿಲ್ಲವೆಂದು, ಕೊನೆಗವರು ಮನಸ್ಸಿನ ಕೂಗಾಡಿದರು. ಆಗ ಅವರಿಗೆ, ತಮಗೊದಗುವ ಅಪಾಯದಿಂದ ಎಚ್ಚರವಾಗಿರಬೇಕೆಂದು

ತೋರಿತು. ಜನ್ಮ ಕುಂಡಲಿಯನ್ನು ಪುನಃ ಪುನಃ ನೋಡುತ್ತಾ ನೋಡುತ್ತಾ, ಅಂಶ ಅಂಶವಾಗಿ ಫಲಗಳನ್ನರಿಯುತ್ತಾ ಬಂದರು. ಹೀಗೆ ತಮ್ಮ ಜಾತಕಫಲ ತಿಳಿಯಲವರಿಗೆ ಬಹಳ ಕಾಲವಾಯಿತು. ಆಗ ಮನೆಯಿಂದ ಹೊರಗೆ ತಲೆಹಾಕುವುದನ್ನೇ ಮರೆತು ಕುಳಿತುಬಿಟ್ಟರು. "ಹೊರ ಬಯಲಲ್ಲಿ ದುಡಿಯಲು ಮನಸ್ಸಿಲ್ಲದವರು, ಇಲ್ಲಿ ಕೂತು ಕಾಲ ವ್ಯಯಮಾಡುತ್ತಿದ್ದಾರೆ" ಎಂದವರ ಹೆಂಡತಿ ನಿರ್ಭಯವಾಗಿ ಗಂಡನನ್ನು ಆಡಿಕೊಳ್ಳುತ್ತಿದ್ದರು.

ಜಾತಕ ಫಲ ತಿಳಿದುಕೊಂಡವರು, ಅರವತ್ತೆಂಟನೆಯ ವಯಸ್ಸಿಗೆ ತಮ್ಮನ್ನು ಮೃತ್ಯು ಒಯ್ಯುವನೆಂದು ತಿಳಿದರು. ಮರಣದ ವೇಳೆಯನ್ನು ತಿಳಿಯಲು ಗುಣಿಸಿ, ಭಾಗಿಸಿ, ಬಹಳ ಕಷ್ಟಪಟ್ಟು ಅದನ್ನು ಗುರುತಿಸಿ ಕೊಂಡು, ಸಿಕ್ಕಿದವರಿಗೆಲ್ಲಾ ವಿಧಿಯು ತಮ್ಮನ್ನು ಅರವತ್ತೆಂಟನೆಯ ವಯಸ್ಸಿನಲ್ಲಿ ಒಯ್ಯುವುದೆಂದು ಹೇಳುತ್ತಾ ಬಂದರು.

ತಮ್ಮ ಜೀವಿತದ ಕೊನೆಯ ಗಳಿಗೆಯನ್ನು ತಿಳಿದು, ಬಹಳ ಸಂತೋಷದಿಂದ "ನನ್ನ ಸಾವು ನಿಶ್ಚಯ. ಮುಂಚಿತವಾಗಿಯೇ ಸಾರುತ್ತಿದ್ದೇನೆ ಇದರಿಂದಲಾದರೂ ಜನರಿಗೆ ಶಾಸ್ತ್ರದ ಮಹಿಮೆ ಗೊತ್ತಾದೀತು" ಎಂದು ನುಡಿಯುತ್ತಾ ಬಂದರು. ಯಾರಿಗಾದರೂ ಸಾವು ಹತ್ತಿರವಾಗುತ್ತಿದೆಯೆಂದು ತೋರಿದರೆ ಎಷ್ಟೋ ಭೀತಿಯುಂಟಾಗುವುದು ಸಹಜ. ಈ ಜ್ಯೋತಿಷಿಗಳಿಗೆ ಭೀತಿಯೇ ಹುಟ್ಟಲಿಲ್ಲ. ಸಂತೋಷದಿಂದಲೇ ಅವರು, ತಮ್ಮ ಸಾವನ್ನು ಸಾರುತ್ತಿದ್ದರು. "ನೀವು ಎಷ್ಟು ಟೀಕಿಸಿದರೇನು? ಗ್ರಹಮಾನ ತಡೆಯಲಾರಿರಿ. ಅದರಿಂದ ತಪ್ಪಿಸಿಕೊಳ್ಳಲಾರಿರಿ" ಎಂದು ತಮ್ಮ ಮಾತಿಗೆ ಪ್ರತಿಯಾಗಿ ಟೀಕಿಸಿ, ಹಾಸ್ಯಮಾಡುತ್ತಿದ್ದವರಿಗೆ ಹೇಳುತ್ತಿದ್ದರು.

ತಮ್ಮನ್ನು ಮೃತ್ಯು ಸೆಳೆದೊಯ್ಯುವ ದಿನಕ್ಕೆ ಮೊದಲಲ್ಲಿಯೇ ತಮ್ಮ ಗೆಳೆಯರನ್ನು, ಬಂಧುಗಳನ್ನು ಕಾಣುತ್ತಾ, "ಕೊನೆಯ ಸಂದರ್ಶನವೆಂದು ಹೇಳಿಕೊಳ್ಳುತ್ತಾ" ಬಂದರು. ಹಳ್ಳಿಯಲ್ಲಿ ಇದು ಏತರದ ಕೋಲಾಹಲವೆಂದು ಜನರ ನಗೆಗೀಡಾದರೂ, ಲೆಕ್ಕಿಸದೆ ಜ್ಯೋತಿಷಿಗಳು ತಮ್ಮ

ಸಾಧನೆಯನ್ನು ನಡೆಸಿದರು. ಇವರ ಸ್ಥೈರ್ಯವನ್ನು ತಿಳಿದ ಹಲವರಿಗೆ, ಮಾತಿನಲ್ಲಿ ಏನೋ ತತ್ವವಿದೆಯೆಂಬ ನಂಬಿಕೆ ಬಂತು. ಕೊನೆಗೆ ಇಡೀ ಹಳ್ಳಿಯ ಜನ ಸಾವನ್ನಪ್ಪುವ ದಿನವನ್ನು ಎದುರು ನೋಡುತ್ತಿದ್ದರು.

ಈ ವೇಳೆಗೆ ಅಂದವಾದ ಹಸುರು ಬಣ್ಣದ ಬಟ್ಟೆಯನ್ನು ಶರೀರಕ್ಕೆ ಸುತ್ತಿಕೊಳ್ಳಲು ಕೊಂಡುತಂದರು. ಮರಣಕಾಲಕ್ಕೆ ಸರಿಯಾಗಿ ಸ್ನೇಹಿತರು, ಬಂಧುಗಳು ಹತ್ತಿರವಿರಬೇಕೆಂದು ಅವರಿಗೆಲ್ಲಾ ಮುಂದಾಗಿ ಸೂಚನಾ ಪತ್ರ ತಲುಪಿಸಿದರು. ತಮ್ಮ ಮರಣ ಪ್ರಕರಣ ಮುಗಿದಮೇಲೆ, ಶಾಸ್ತ್ರ ಅಲ್ಲಗೆಳೆಯುತ್ತಿದ್ದ ಅನೇಕರಿಗೆ ಮುಂಚಿತವಾಗಿಯೇ ಔತಣದ ಊಟವನ್ನು ಏರ್ಪಡಿಸಿದ್ದರು.

ಸಾವನ್ನಪ್ಪುವ ಕಾಲ ಮಧ್ಯಾಹ್ನ ಎರಡರಿಂದ ಐದರವೊಳಗೆ ಎಂದು ಗೊತ್ತುಮಾಡಿಕೊಂಡಿದ್ದ ಜ್ಯೋತಿಷಿಗಳು, ತಮ್ಮ ಅಂತ್ಯಕ್ರಿಯೆಯೆಲ್ಲಾ ಗದ್ದೆಯ ಬಡುವಿನ ಬಳಿ ನಡೆಯಲೆಂದು ಸೂಚಿಸಿದ್ದರು. ರುದ್ರಭೂಮಿ ವಿವಿಧ ಪುಷ್ಪ ಪರಿಮಳದಿಂದ ಶೋಭಿಸುತ್ತಿತ್ತು. ಉತ್ಸವ, ಮಹಾ ಸಂಭ್ರಮ ನಡೆಯುವ ಜಾಗದಲ್ಲಿ ತೋರಣ ಕಟ್ಟಿ ಅಲಂಕರಿಸಿರುವಂತೆ, ಜ್ಯೋತಿಷಿ, ಯಮನನ್ನು ಸಂಧಿಸುವ ಜಾಗದಲ್ಲಿಯೂ ತೋರಣವನ್ನು ಕಟ್ಟಿದ್ದರು. ಈ ವೈಭವವನ್ನೆಲ್ಲಾ ನೋಡಿದರೆ, ವಿವಾಹ ಸಂಬಂಧವಾದ ನೋಟ ಜರುಗುವುದೋ ಎನ್ನುವ ಹಾಗೆ ಕಾಣುತ್ತಿತ್ತು. ಮರಣ ಸೂಚನೆಯ ಕಿಂಚಿತ್ ಅಂಶವಾದರೂ ಕಾಣಬರುತ್ತಿರಲಿಲ್ಲ. ಜ್ಯೋತಿಷಿ, ಸುಡುಗಾಡು ಚಟ್ಟದ ಮೇಲೆ ಮಲಗಿದ ಕೂಡಲೇ ಸುತ್ತಮುತ್ತ ಮಂತ್ರಪಠನೆ ನಡೆಯುತ್ತಿರಬೇಕೆಂದು, ಪುರೋಹಿತರನ್ನು ಬೇರೆ ನಿಯಮಿಸಿ ನಿಲ್ಲಿಸಿದ್ದರು.

ಬೇಸಿಗೆಯ ಕಾಲ. ವ್ಯೋಮಪಟ ತೆರವಾಗಿದ್ದಿತು. ಆ ಹೊತ್ತಿನಲ್ಲಿ ನಕ್ಷತ್ರ ಕಾಣಿಸದಿದ್ದರೂ ಅದು ತನ್ನ ಪ್ರಭಾವವನ್ನು, ಜ್ಯೋತಿಷಿಯ ಮಹಾ ನಂಬಿಕೆಯನ್ನು ದೂರದಿಂದಲೇ ನೋಡುತ್ತಿರುವಂತಿತ್ತು. ಕುತೂಹಲಾಸಕ್ತರಾಗಿ ನೆರೆದಿದ್ದ ಜನರು, ಶಾಂತಭಾವದಿಂದ ಏನಾಗುವುದೋ ಕಾಣಬೇಕೆಂದು ಬಿಸಿಲನ್ನೂ, ಸೆಕೆಯನ್ನೂ ಸಹಿಸಿಕೊಂಡು

ಕಾಯುತ್ತಿದ್ದರು. ಇವರಷ್ಟೇ ಅಲ್ಲದೆ, ಸಂಶಯಾತ್ಮ ನಾಸ್ತಿಕರು ದೈವಜ್ಞಾನ ಮಹಿಮೆಯನ್ನು ಕಾಣಲು ಬಂದಿದ್ದರು. ಜ್ಯೋತಿಷಿ ಸತ್ತರೇನು, ಬದುಕಿದರೇನು, ಶಾಸ್ತ್ರ ಸುಳ್ಳಾಗಲಿ, ನಿಜವಾಗಲಿ ನಾಸ್ತಿಕರು ದೈವವಿರುವುದನ್ನು ಒಪ್ಪುತ್ತಾರೆಯೇ? ಎಂದು ಜನರಾಡಿಕೊಳ್ಳುತ್ತಿದ್ದರು.

ಬಿಸಿಲಿನ ಝಳಕ್ಕೆ ಸೋತು, ತೋಯ್ದು ಜನಸ್ತೋಮ ಕಾಯುತ್ತಿದ್ದಾಗ ಜ್ಯೋತಿಷಿ, ಚಿತೆಯೇರಿ ಮಲಗಲು ಒಂದೂವರೆ ಘಂಟೆಗೆ ಸರಿಯಾಗಿ ದೇವಾಲಯದಿಂದ ಹೊರಬಿದ್ದರು. ಅವರ ಶಾಂತಿ, ಸಹನೆ. ವರ್ಚಸ್ಸು, ನಿರಾಳ ಮನಸ್ಸು, ಅಪಾರವಾದ ನಂಬಿಕೆಯನ್ನು ಜನರು ಮೆಚ್ಚಿ, ಹೊಗಳುತ್ತಾ, ಮುಂದೇನಾಗುವುದೋ ನೋಡಬೇಕೆಂದು ಅತ್ಯಾತುರದಿಂದ ಕಾಯುತ್ತಿದ್ದರು. ಜ್ಯೋತಿಷಿ ಯಾವುದನ್ನೂ ಗಮನಿಸದೆ, ದೂರ ಎಲ್ಲಿಗೋ ಪ್ರಯಾಣ ಹೊರಟವರಂತೆ ಚಿತೆಯ ಹತ್ತಿರಕ್ಕೆ ಬಂದರು. ಇಡೀ ಜೀವಮಾನದಲ್ಲಿ ಜ್ಯೋತಿಷಿಯನ್ನು ತೆಗಳುತ್ತಾ, ಮೂಗು ಮುರಿಯುತ್ತಿದ್ದವರೂ ಅವರ ಕೊನೆಗಾಲವನ್ನು ನೆನೆದು ಮರುಕ ತೋರುತ್ತಿದ್ದರು. ಈ ಅಸಾಧ್ಯಪ್ರಯತ್ನ ತಪ್ಪಿಸಬೇಕೆಂದು ಪ್ರಯತ್ನಿಸುತ್ತಿದ್ದ ಜ್ಯೋತಿಷಿಯ ಹೆಂಡತಿ ಯತ್ನವಿಲ್ಲದೆ, ತಾವಾಡಿದ ಅವಾಚ್ಯ ನಿಂದೆಗಳನ್ನು ಮರೆತು, ಮನ್ನಿಸಬೇಕೆಂದು ಕೊನೆಯಸಾರಿ ಗಂಡನನ್ನು ಬೇಡಿಕೊಂಡು, ಅಳುವುದಕ್ಕೆ ಮೊದಲು ಮಾಡಿದಳು.

ಜ್ಯೋತಿಷಿ, ತಾನಾಗಿ ಆರಿಸಿ ಸುತ್ತಿಕೊಂಡಿದ್ದ ವಸ್ತ್ರದೊಂದಿಗೆ ಚಿತೆಯೇರಿಬಿಟ್ಟ ಅವನ ಸುತ್ತ ಅವನ ಹೆಂಡತಿ ಮತ್ತು ಬಂಧುವರ್ಗದವರು ರೋಧಿಸುತ್ತಾ ನಿಂತರು. ಇನ್ನೂ ಈ ಪ್ರಕರಣದಲ್ಲಿ ನಂಬಿಕೆಬಾರದ ಕೆಲವರು. ಈ ವಿಚಿತ್ರ ಶೋಕವರ್ತನೆಯನ್ನು ಭಯಭೀತಿಯಿಂದ ನೋಡುತ್ತಿದ್ದರು. ಜನಗಳ ಕಾಯುವಿಕೆ, ಮಂತ್ರಪಠನೆ. ಬಂಧುವರ್ಗದವರ ಶೋಕಪ್ರದರ್ಶನ ಮೂರು ಘಂಟೆಗಳ ಕಾಲ ನಡೆಯಿತು. ಮಂತ್ರ, ಪಠಿಸುತ್ತಿದ್ದವರು ನೋಡಿ ನೋಡಿ ಬೇಸತ್ತು, ಚಿತೆಯೇರಿದವನು ಸತ್ತನೋ ಇಲ್ಲವೋ ಎಂದು ತಿಳಿಯಲು, ಅನುಮಾನದಿಂದ ಬಾಗಿ ನೋಡುತ್ತಿದ್ದರು. ಸಮಯ ಐದೂವರೆಯಾಗಿತ್ತು, ಆದರೂ ಜ್ಯೋತಿಷಿಯ ಅಂತರಾಳದಲ್ಲಿ ಉಸಿರಾಡುತ್ತಲೇಯಿತ್ತು.

ಬೇಸರಪಟ್ಟು ಜನರು ಸರಿಯತೊಡಗಿದರು. ಕೆಲವರು ಕೋಪದಿಂದ ಜರಿದು, ಟೀಕಿಸುತ್ತಾ ಹೊರಟಮೇಲೆ, ನಾಸ್ತಿಕರು ಮತ್ತೂ

ಹೆಚ್ಚಿನ ಅಪನಂಬಿಕೆಯಿಂದ ಹಾಸ್ಯಮಾಡುತ್ತಾ ಸಾಗಿದರು. ಮಂತ್ರ ಪಠನೆ ಇನ್ನೂ ಒಂದು ಘಂಟೆಯಕಾಲ ಮುಂದುವರಿಯಿತು. ಆಗ ಜ್ಯೋತಿಷಿಗೆ, ತಾನು ಎಣಿಕೆಯಲ್ಲಿ ತಪ್ಪಿಬಿದ್ದಿರುವೆನೋ ಏನೋ ಎಂಬ ಸಂದೇಹ ಬಂತು. ಮಂತ್ರಪಠನೆ ಮತ್ತು ಶೋಕಪ್ರದರ್ಶನ ಮಾಯ ವಾಗಿ ಕೋಪತಾಪಕ್ಕೆ ಎಡೆಗೊಟ್ಟಿತು. ಕತ್ತಲಾಗುವುದಕ್ಕೆ ಮೊದಲು, ಸತ್ತವನ ಹಾಗೆ ಮಲಗಿದ್ದ ಜ್ಯೋತಿಷಿಯು ಎದ್ದು ಬರಬೇಕೆಂದವರು ಬಲಾತ್ಕಾರ ಮಾಡಿದರು. ಎಲ್ಲರೂ ಸಿಕ್ಕುಪಟ್ಟೆ ಜ್ಯೋತಿಷಿಯ ಹುಡು ಗಾಟ, ಶಾಸ್ತ್ರ, ರೀತಿನೀತಿಯನ್ನು ಅಲ್ಲಗಳೆದರು. ಜ್ಯೋತಿಷಿ ಯಾವ ಬಗೆಯ ವೈಪರೀತ್ಯವನ್ನೂ ಮನಸ್ಸಿಗೆ ತಂದುಕೊಳ್ಳದೆ, ನೆಟ್ಟಗೆ ಮನೆಗೆ ಓಡಿದರು. ನಿತ್ಯವೂ ಅಧ್ಯಯನಕ್ಕೆ ಕೂಡುತ್ತಿದ್ದ ಸ್ಥಳಕ್ಕೆ ಹೋಗಿ, ಇಡೀ ಜಾತಕವನ್ನು ಪುನಃ ವಿಮರ್ಶಿಸತೊಡಗಿ, "ನಾನು ಎಣಿಕೆಯಲ್ಲಿ ಅಷ್ಟು ಪರಿಣಿತನಲ್ಲ. ಎಲ್ಲಿಯೋ ಜಾರಿರುವೆ. ಶಾಸ್ತ್ರವೆಂದೂ ಸುಳ್ಳಾಗ ಲಾರದು", ಎಂದು, ಎಂದಿನಂತೆ ತಪ್ಪಿಸಿಕೊಳ್ಳುವ ಮಾತನಾಡಿದರು. ಅಂದು ರಾತ್ರಿಯೆಲ್ಲಾ ಕುಳಿತು, ದೀರ್ಘವಾಗಿ ಅವರು ಲೆಕ್ಕಾಚಾರ ಮುಗಿಸಿ, ಇನ್ನೂ ತಾವು ಐದುವರ್ಷ ಜೀವಿಸಲು ಅವಕಾಶವಿದೆಯೆಂದು ನೆಂಟರಿಷ್ಟರಿಗೆ ತಿಳಿಸಿದರು. ಅವರಲ್ಲೊಬ್ಬ ಕಡುಕೋಪಿ "ನಿಮಗೆ ಜೀವಿ ಸಲು ಇನ್ನೂ ಅವಧಿಯಿದೆಯೆಂದು ನಮಗೆ ಚೆನ್ನಾಗಿ ಗೊತ್ತು. ನಿಮ್ಮ ನಕ್ಷತ್ರ ಈ ದಿನ ನಿಮ್ಮನ್ನು ಬಿಟ್ಟುಕೊಟ್ಟಿತು" ಎಂದು ಟೀಕಿಸಿದರು.

ಇನ್ನೂ ತಮ್ಮ ಕೊನೆಗಾಲವನ್ನು ಇತರರಿಗೆ ಹೇಳಿಕೊಳ್ಳುತ್ತಾ ಅವರು ಬರುತ್ತಿದ್ದಾಗ, ಎಲ್ಲರೂ ಅವರನ್ನು, ಅವರ ಮರುಳುತನವನ್ನು ತೆಗಳು ತ್ತಿದ್ದಾಗ, ಫಲಾಫಲಗಳನ್ನು ಅರಿಯಲು ಶೋಧನೆ ನಡಿಸುತ್ತಿರುವಾಗ, ವಿಧಿ ಅವರನ್ನು ಸೆಳೆದೊಯ್ಯಿತು. ಇನ್ನೂ ಐದುವರ್ಷಕಾಲ ತನಗೆ ಜೀವಿಸಲು ಸಾಧ್ಯವಿದೆಯೆಂದು ಮನದಟ್ಟು ಮಾಡಿಕೊಂಡಿದ್ದ ಜ್ಯೋತಿಷಿಯನ್ನು, ಎರಡುವರ್ಷ ಕಳೆಯುವುದರಲ್ಲಿಯೇ ಕಾಲನು ಸೆಳೆದುಕೊಂಡುಬಿಟ್ಟಿದ್ದ. ನಕ್ಷತ್ರ ರಾಶಿಯನ್ನು, ಫಲಾಫಲಗಳ ವೈಭವವನ್ನು, ತಮ್ಮ ದಪ್ಪ ಪಂಚಾಂಗ ಹೊತ್ತಿಗೆಯನ್ನು ನೋಡುತ್ತಾ, ಇಡೀ ದಿನ ಕಾಲ ದೂಡುತ್ತಿದ್ದ ಜ್ಯೋತಿ ಷಿಯ "ಎಣಿಕೆ ತಪ್ಪಾಗಿರಬೇಕು, ಶಾಸ್ತ್ರವೆಂದೂ ಸುಳ್ಳಾಗದು" ಎಂಬ ಅವರ ಮಾತುಗಳು ನೆನಪಿಗೆ ಬರುತ್ತಲೇ ಇರುತ್ತದೆ.

# ಅಕ್ಕ-ತಂಗಿ

ರೂಪಕುಮಾರಿ, ರಾಮದುಲಾರಿ ಇವರಿಬ್ಬರೂ ಸಹೋದರಿಯರು. ಬಹಳ ದಿನದ ಮೇಲೆ, ಸಹೋದರಿಯರಿಬ್ಬರೂ ಅವರ ಬಂಧುಗಳೊಬ್ಬರ ಮನೆಯಲ್ಲಿ ಸಂಧಿಸಿದರು. ಹಿರಿಯ ಸಹೋದರಿಯಾದ ರೂಪಕುಮಾರಿಗೆ, ತಂಗಿ ರಾಮದುಲಾರಿಯು ಧರಿಸಿದ್ದ ವೇಷಭೂಷಣಗಳನ್ನು ಕಂಡು ಅಚ್ಚರಿಯಾಯಿತು. ತಲೆಯಿಂದ ಕಾಲಿನವರೆಗೆ ಭೂಷಣ ಧರಿಸಿ, ಹೆಚ್ಚು ಬೆಲೆಬಾಳುವ ಥಳಿಕಿನ ಪೀತಾಂಬರವನ್ನುಟ್ಟು ಬಂದಿದ್ದ ತಂಗಿಯನ್ನು ಸಂಧಿಸಿದ ಅಕ್ಕನಿಗೆ ಅಚ್ಚರಿಯಾದುದೇನು ಹೆಚ್ಚಲ್ಲ. ಆದರೆ ರೂಪಿನಲ್ಲಿ. ಮಾಧುರ್ಯದಲ್ಲಿ ಒಂದೇ ಬಗೆಯಾಗಿ ಕಾಣಿಸಿಕೊಂಡ ರಾಮದುಲಾರಿಯನ್ನು ಅವಳು ಕಂಡುದು ಅದೇ ಮೊದಲು. ರಾಮದುಲಾರಿ ಮೊದಲಿನಂತೆ ಸರಳವಾಗಿ ಸಹಜವಾಗಿ ಮಾತನಾಡದೆ, ಎಚ್ಚರಿಕೆಯಿಂದ ಜಾಣತನದಿಂದ ದೊಡ್ಡಸ್ತಿಕೆಯ ಮಾತುಗಳನ್ನಾಡುತ್ತಿದ್ದುದು ರಾಮದುಲಾರಿಗೆ ಕಂಡಿತು. ಅಕಸ್ಮಿಕವಾಗಿ, ತಂಗಿಗೆ ಇಷ್ಟು ವಿವೇಕ, ಸೌಭಾಗ್ಯಸಂಪತ್ತು ಲಭಿಸಿದೆಯಲ್ಲಾ ಎಂದು ತಿಳಿದುಕೊಂಡ ರೂಪಕುಮಾರಿಗೆ ಅಸೂಯೆ ಹುಟ್ಟಿತು. ರಾಮದುಲಾರಿಯನ್ನು ಚಿಕ್ಕಂದಿನಿಂದಲೂ ನೋಡಿದ್ದ ರೂಪಕುಮಾರಿಗೆ, ಇವಳಿಗೆ ಇಷ್ಟು ಸೌಭಾಗ್ಯ ಹೇಗೆ ಲಭಿಸಿತೆಂದು ತಿಳಿಯದೇ ಹೋದುದೇ ಮುಖ್ಯವಾಗಿ ಅಸೂಯೆಪಡಲು ಕಾರಣವಾಯಿತು. ರಾಮದುಲಾರಿ, ಚಿಕ್ಕಂದಿನಲ್ಲಿ ಬಹಳ ಒರಟಾಗಿ, ಕೊಳಕಿನ ಕುಮಾರಿಯಂತೆ ಇದ್ದುದನ್ನು ರೂಪಕುಮಾರಿ ಕಂಡಿದ್ದಳು. ಅಲ್ಲದೆ, ಮನೆ ಸೇರದೆ, ಎಲ್ಲೆಲ್ಲಿಯೋ ಹೊತ್ತು ಕಳೆಯುತ್ತಿದ್ದ ಹೆಣ್ಣು, ಇಷ್ಟು ಬೇಗ ಬದಲಾಯಿಸಿ, ಸೌಂದರ್ಯದ ಖನಿಯಾಗಿ, ಸೌಭಾಗ್ಯದೇವತೆಯಾಗಿ ಕಣ್ಣಿಗೆ ಬಿದ್ದುದು, ರೂಪಕುಮಾರಿಗೆ ಸಹಿಸದೇ ಹೋಯಿತು. ಮದುವೆಯ ವೇಳೆಯಲ್ಲಿಯೂ ರಾಮದುಲಾರಿ ನಡೆವಳಿಕೆ ತಿಳಿದುಕೊಂಡ ಕನ್ಯೆಯಂತೆ ಕಾಣಿಸಿರಲಿಲ್ಲ. ಇವಳಲ್ಲಿ ಇಷ್ಟು ಶೋಭಾರಾಶಿ ಅಡಗಿದ್ದಿತೇ? ಮೊಗ್ಗು ಒಡೆದ ಹೂವಿನಂತೆ, ಈದಿನ ಎಲ್ಲಾ

ಸೌಂದರ್ಯರಾಶಿ ಕಾಣಿಸುತ್ತಿದೆಯೇ? ಎಂದವಳು, ಎಷ್ಟು ಬಗೆಯಾಗಿ ಯೋಚಿಸಿದರೂ ತಿಳಿಯಲಾಗಲಿಲ್ಲ. ಏನಾದರೇನು? ಹಿರಿಯ ಸಹೋದರಿ ರೂಪಕುಮಾರಿಗೆ, ತಂಗಿ ರಾಮದುಲಾರಿ ಧರಿಸಿದ್ದ ಸೌಂದರ್ಯಸಾಧನಗಳೆಲ್ಲಾ ಜನರನ್ನು ತನ್ನ ಕಡೆ ಸೆಳೆದುಕೊಳ್ಳಲು ತೊಟ್ಟಿರುವ ಉಪಕರಣಗಳೆಂದು ಮಾತ್ರ ಕಾಣಲಿಲ್ಲ.

ಅಕ್ಕ-ತಂಗಿಯರು ಭೇಟಿಯಾದರಷ್ಟೆ. ತಂಗಿಯ ರೂಪವನ್ನು ಕಂಡು ಅಸೂಯೆಪಟ್ಟ ಅಕ್ಕ, ತನ್ನ ಸೌಂದರ್ಯವನ್ನು ನೋಡಿಕೊಳ್ಳಲು ಆಶಿಸಿದಳು. ಮನೆಯಿಂದ ಹೊರಡುವ ಮೊದಲೇ, ರೂಪಕುಮಾರಿ ಸೌಂದರ್ಯ ಪೂರೈಕೆ ಮುಗಿಸಿಯೇ ಹೊರಟಿದ್ದಳು. ತನಗಿಂತಲೂ ಹೆಚ್ಚು ಸೌಂದರ್ಯವತಿಯಾಗಿ ಕಾಣುತ್ತಿದ್ದ ತಂಗಿ ರಾಮದುಲಾರಿಯನ್ನು ಕಂಡೊಡನೆಯೇ ಅವಳಿಗೆ ಸಹಿಸಲಾಗಲಿಲ್ಲ. ನಾನೇಕೆ ಅವಳಿಗಿಂತ ಕಡಿಮೆಯೆನಿಸಲಿ? ನನ್ನಲ್ಲಿ ಕುಂದೇನಿದೆ? ಎಂದು ತಿಳಿಯಲವಳಿಗೆ, ಕನ್ನಡಿಯಲ್ಲಿ ನೋಡಿಕೊಳ್ಳಬೇಕೆಂಬ ಆಶೆಯಾಯಿತು. ಮುಂಗುರುಳು ತಿದ್ದಿ, ಸೌಂದರ್ಯ ರೇಖಾಚಿತ್ರದ ಗೆರೆಯನ್ನು ಬಾರಿಬಾರಿ ಕನ್ನಡಿಯಲ್ಲಿ ನೋಡಿಕೊಂಡು, ತೃಪ್ತಳಾಗಿ ಮನೆಯಿಂದ ಹೊರಟವಳಿಗೆ ಎಲ್ಲಿಯೋ ಏನೋ ಕುಂದಿದೆಯೆಂಬ ಭಾವನೆಯಾಯಿತು. ಚಂಚಲವಾಗಿ, ಮನಸ್ಸಿನಲ್ಲಿ ಒಂದು ಬಗೆಯ ಹೊಯ್ದಾಟ ನಡೆಯಿತು. ಇನ್ನೊಂದು ಬಾರಿ ಕನ್ನಡಿಯಲ್ಲಿ ಮುಖ ನೋಡಿಕೊಂಡಾಗ, ರಾಮದುಲಾರಿಯ ಸೌಂದರ್ಯದೊಂದಿಗೆ ಪರಿಶೀಲಿಸಿಕೊಂಡಾಗ, "ಅವಳು ಇಷ್ಟು ಸುಂದರಿಯಾಗಿ ಕಾಣಿಸಿಕೊಳ್ಳಲು ಕಾರಣವೇನಿರಬಹುದು ತಿಳಿಯಬೇಕು" ಎಂದುಕೊಂಡಳು. ಬಂಧುಗಳ ಮನೆಯಲ್ಲಿ ಸೌಂದರ್ಯ ಸಾಧನೋಪಕರಣಗಳು ಸಿದ್ಧವಾಗಿದ್ದವು. ರೂಪಕುಮಾರಿಗೆ ಒಳಮನೆಯ ಕೋಣೆಗೆ ಹೋಗಿ, ಹಿಂದಿರುಗಿ ಬಂದು ಕೂಡುವುದು ಸರಿಯಲ್ಲವೆಂದು ತೋರಿದ್ದರಿಂದ, ಅವಳು ಸುಮ್ಮನಿರಬೇಕಾಯಿತು. ಮನಸ್ಸಿನಲ್ಲಿ ಹುಟ್ಟಿದ ಭಾವನೆ, ಅಸೂಯೆ ಅವಳನ್ನು ಅಷ್ಟಕ್ಕೆ ಬಿಟ್ಟುಕೊಡಲಿಲ್ಲ. ಹೆಂಗಳೆಯರೆಲ್ಲಾ ಹಾಡುತ್ತಾ ಕುಣಿಯುತ್ತಾ ದೂರದಲ್ಲಿದ್ದಾಗ, ಗಂಡಸರು ಹೊರಬಯಲಲ್ಲಿ ಮಾತನಾಡುತ್ತಾ ಕಳೆತಿದ್ದಾಗ, ರೂಪಕುಮಾರಿ ಮೆಲ್ಲನೆ

ಒಳಮನೆಗೆ ಹೊರಟು, ಗೋಡೆಗೆ ಅಂಟಿಸಿದ್ದ ದೊಡ್ಡ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡು ಹಿಂದಿರುಗಿ ಬಂದಳು. ನೋಡಿಕೊಂಡು ಬಂದ ರೂಪಕುಮಾರಿಗೆ, ತನ್ನಲ್ಲಿ ಯಾವ ಕುಂದೂ ಇಲ್ಲವೆಂದು ತೋರಿತು. ಕಟ್ಟಕಡೆಗೆ, ಹಿಂದೆ ತನ್ನಲ್ಲಿ ಕಾಣಿಸುತ್ತಿದ್ದ ಹೊಸತನ, ಆಕರ್ಷಣ ಶಕ್ತಿ ಈಗ ಮಾಯವಾಗಿದೆಯೆಂದು ಅವಳಿಗೆ ಕಂಡಿತು. ಮಿಕ್ಕ ವಿಚಾರದಲ್ಲಿ ಲೋಪವೇನೂ ಕಾಣಲಿಲ್ಲ. ಆದರೆ, ಹಿಂದಿನ ಆ ಸಂಪತ್ತು ಮಾಯ ವಾಯಿತೇಕೆ? ಎಂದವಳಿಗೆ ತಿಳಿಯದೇ ಹೋಯಿತು.

ರೂಪಕುಮಾರಿ ಚಿಕ್ಕವಳೆ. ಯೌವನವೇನೋ ಕಳೆದಿತ್ತು. ತಂಗಿ ಗಿಂತ ತಾನು ಕಡಿಮೆ ಮಟ್ಟದವಳು ಎಂದು ಕಾಣಿಸಿಕೊಳ್ಳಲು ಅವಳಿಗೆ ಇಷ್ಟವಿರಲಿಲ್ಲ. ಗಂಡಸರನ್ನು ನೋಡಿ ಆಗ ಅವಳಿಗೆ ಕೋಪ ಬಂತು. "ಗಂಡಸರೆಷ್ಟು ತಿಳಿಗೇಡಿಗಳು! ಇವರಿಗೆ ಸೌಂದರ್ಯದ ಗೊತ್ತುಗುರಿ ಗಳೇನು ಗೊತ್ತು? ತಿಳಿಗೇಡಿಗಳಿಗೆ ಬೇಕಾಗಿರುವುದು ಪ್ರಿಯವಾದ ಸಿಹಿ ಮಾತುಗಳು ತಾನೆ? ಇವರಿಗೆ ಕಣ್ಣಿರುವುದೇ? ನಿಜವಾದ ಸೌಂದರ್ಯ ವನ್ನು ಕಂಡಿರುವರೇ? ತಂತ್ರದಿಂದ, ಸಿಹಿಮಾತಿನಿಂದ, ಹೆಂಗೆಳೆಯರನ್ನು ಪರವಶಮಾಡಿಕೊಳ್ಳುವಂತಹ ಈ ಮೂಢರಿಗೆ, ಸೌಂದರ್ಯ ಸತ್ವ ತಿಳಿಯದು. ಪರಮ ಸೌಂದರ್ಯದ ಮೇಲ್ಮಟ್ಟ ಯಾವಾಗಲೂ ಅಚ್ಚಳಿ ಯದೆ ಉಳಿದಿರುತ್ತದೆ" ಎಂದು ತನ್ನಲ್ಲಿಯೇ ಅಂದುಕೊಂಡಳು. ಹೆಚ್ಚೇಕೆ? ರಾಮದುಲಾರಿ ತನ್ನಂತೆ ಅಲಂಕಾರ ಮಾಡಿಕೊಂಡು ಒಂದೆಡೆ ಯಲ್ಲಿ ಕೂಡಲಿ, ಯಾರಾದರೂ ನಮ್ಮಿಬ್ಬರ ರೂಪರೇಖೆಯನ್ನು ಪರಿಶೀಲಿಸಿ, ಯಾರು ನಿಜವಾಗಿ ಹೆಚ್ಚು ರೂಪವತಿಯರೆಂದು ತೀರ್ಮಾನಿಸಲಿ, ಆಗ ಸತ್ಯ ಹೊರಬೀಳುತ್ತದೆ ಎಂದುಕೊಂಡಳು. ತೀರ್ಮಾನವಾದಲ್ಲಿ, ರಾಮದುಲಾರಿಯ ಬಾಹ್ಯ ಸೌಂದರ್ಯವೆಲ್ಲಾ ಮಾಯವಾಗುತ್ತದೆಯೆಂದೂ, ತಾನು ಹೆಚ್ಚು ರೂಪಿಣಿಯೆಂದು ತಿಳಿ ಯುವರೆಂದೂ ರೂಪಕುಮಾರಿಗೆ ತೋರಿತು. ರಾಮದುಲಾರಿ ನಿಜವಾಗಿ ಸೌಂದರ್ಯವತಿಯಲ್ಲ, ಕುರೂಪಿಣಿಯೆಂದು ಜನರು ತಿಳಿದರೆ ಸಾಕು, ಎಂದವಳಿಗೆ ತೋರಿತು. ಇದೆಲ್ಲಾ ನೆನೆದವಳು, ಭ್ರಾಂತ ಜನರಿಗೆ ಎಲ್ಲ ವನ್ನೂ ವಿವರಿಸಿ ಹೇಳಲು ಯಾರಿಂದ ಸಾಧ್ಯವಾದೀತು ಎಂದುಕೊಂಡಳು.

ರಾಮದುಲಾರಿಯ ಮನೆಯವರು ಅಷ್ಟು ಸಿರಿವಂತರಲ್ಲ. ಅವ
ಮದುವೆಯಲ್ಲಿಯೂ ಸಾಕಷ್ಟು ಒಡವೆ, ದಕ್ಷಿಣೆ ಸಿಕ್ಕಿರಲಿಲ್ಲ. ಏನಾದರ
ತೃಪ್ತಿಯಾಗುವಷ್ಟು ಸಂಪತ್ತು ಸೇರಿರಲಿಲ್ಲ. ಉಳಿತಾಯ ದೃಷ್ಟಿಯಿಂದಲ
ಹಣ ಶೇಖರವಾಗಿರಲಿಲ್ಲ. ರಾಮದುಲಾರಿಯ ಮಾವ ಯಾವುದೊ
ಸಂಸ್ಥಾನದಲ್ಲಿ ನ್ಯಾಯಾಧಿಪತಿಯಾಗಿದ್ದ. ಅವಳ ಪತಿ, ಇನ್ನೂ
ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದ. ಮದುವೆಯಾಗಿ ಎರಡುವರ
ಮಾತ್ರವಾಗಿತ್ತು. ಈ ಅಂತರದಲ್ಲಿ ಇಷ್ಟು ಸಿರಿ ಸಂಪತ್ತು ಹೇಗೆ ಸೇ
ತೆಂದು ರೂಪಕುಮಾರಿಗೆ ತಿಳಿಯದೇ ಹೋಯಿತು. ಕೊನೆಗೆ, ಹೊತ್ತು
ತೊಟ್ಟು ಬಂದಿರುವ ಒಡವೆವಸ್ತ್ರಗಳು ಯಾರಿಂದಲಾದರೂ ಎರವು ತಂದಿ
ಬೇಕೆಂದು ತೋರಿತು. ಹೆಂಗಸರಿಗೆ ಹೆಚ್ಚಿನ ಸೋಗು, ಅಂತಸ್ತು
ತೋರ್ಪಡಿಸುವುದೆಂದರೆ ಹೆಮ್ಮೆ. ಇರಲಿರಲಿ, ಈ ಮಾಯಾ ಮುಸುಕ
ನಲ್ಲಿರಬೇಕೆಂಬುವವಳಿರಲಿ, ಎಂದು ರೂಪಕುಮಾರಿ ಅಂದುಕೊಂಡಳು.
ಇನ್ನು ಮುಂದೆ ತಾನು ಸೌಂದರ್ಯವೃದ್ಧಿ ಮಾಡಿಕೊಳ್ಳಬೇಕೆಂಬ ಆಶೆ
ಅವಳಿಗಾಯಿತು. ಅವಳ ಮನೆಯಲ್ಲಿ ಸಾಕಷ್ಟು ತಿನ್ನಲಿಕ್ಕೆ ಇರುತ್ತಿರಲಿಲ್ಲ.
ರೂಪಕುಮಾರಿಯ ಪತಿ ಗುಮಾಸ್ತೆಯೆನಿಸಿ, ಎಪ್ಪತ್ತೋ ಎಂಬತ್ತೋ
ಸಂಪಾದಿಸುತ್ತಿದ್ದ. ಅವನ ಆದಾಯ ಕಡಿಮೆಯಿತ್ತು. ಆದರೂ ರೂಪ
ಕುಮಾರಿ ಮನೆಯಿಂದ ಹೊರಬಿದ್ದ ಕೂಡಲೇ, ರಾಜಕುವರಿಯಂತೆ
ಅಲಂಕಾರಮಾಡಿಕೊಂಡು ತೋರ್ಪಡಿಸಿಕೊಳ್ಳುತ್ತಿದ್ದಳು. ದರ್ಜಿಯವರು,
ಬಟ್ಟೆ ವ್ಯಾಪಾರಿಗಳು, ಇತರರು ಕೊಡುವ ಎಲ್ಲಾ ಉಪಟಳವನ್ನು ಸಹಿಸಿ,
ಅನುಸರಿಸಿ, ಅವಳು ಶೃಂಗಾರ ಪೂರೈಕೆ ಮಾಡಿಕೊಳ್ಳಬೇಕಾಗಿತ್ತು.
ಪತಿಯನ್ನು ಜರಿದು, ಅತ್ತು ಕರೆದು, ಜಗಳವಾಡಿ, ಬೇಗೆಯನ್ನು ಕಾಣ
ಬೇಕಾಗಿತ್ತು.

ಇನ್ನು ರಾಮದುಲಾರಿಯ ವಿಚಾರ. ಇವಳ ಹುಡುಗಾಟ ವರ್ತನೆ
ಯನ್ನು ಕಂಡು ಮನೆಯವರು ಟೀಕೆಮಾಡುತ್ತಿದ್ದರು. ಹಟಮಾರಿ
ಹುಡುಗಿ ರಾಮದುಲಾರಿ, ಈ ಟೀಕೆ ಟಿಪ್ಪಣಿಯನ್ನು ಲಕ್ಷ್ಯಮಾಡುತ್ತಿರ
ಲಿಲ್ಲ. ಇದೆಲ್ಲವೂ ಏಕೆಂದರೆ, ತಾನು ಗಂಡಸರೆದುರಿಗೆ ಎಲ್ಲಿ ಸುಳಿದರೂ
ಅವರ ಕಣ್ಣು ಮನ ಒಪ್ಪುವಂತೆ ಕಾಣಿಸಿಕೊಳ್ಳಬೇಕೆಂಬ ಹಟದಿಂದ

ಮಾತ್ರವಾಗಿದ್ದಿತು. "ಸರಿ, ತಂಗಿಯೊಬ್ಬಳು ಲಜ್ಜೆಗೇಡಿ, ಬೇರೆಯವರಿಂದ ಎರವಲು ತಂದ ಒಡವೆಗಳನ್ನು ಹೊತ್ತು ಬಂದಿದ್ದಾಳೆ" ಎಂದು ರೂಪಕುಮಾರಿ ಅಂದುಕೊಂಡಳು.

ಆತ್ಮಗೌರವ ತಾನು ಉಳಿಸಿಕೊಂಡವಳಂತೆ ಬಗೆದ ರೂಪಕುಮಾರಿಯ ಮೊಗದ ಬಣ್ಣ ಆಗ ಬದಲಾಯಿತು. ಸೌಂದರ್ಯ ಸಾಧನೋಪಕರಣಗಳು ತನಗಿಲ್ಲದಿದ್ದರೇನು? ನಿರ್ಭಯದಿಂದ, ಮಾನಗೆಡದೆ, ತಲೆ ಎತ್ತಿಕೊಂಡಿರಬಹುದಲ್ಲಾ ಎಂದವಳಿಗೆ ತೋರಿತು. ಪ್ರಪಂಚದಲ್ಲಿ, ಒಡವೆಗಳಿಗಿಂತ ಹೆಚ್ಚಾಗಿ ತನಗೆರಡು ಗಂಡುಮಕ್ಕಳಿವೆಯಲ್ಲಾ, ಅವಕ್ಕೆ ದೇವರು ಆಯಸ್ಸು ಕೊಟ್ಟು ಕಾಪಾಡಲಿ ಎಂದು ಬಯಸಿದಳು. ಇಷ್ಟಾದರೆ, ಜೀವನ ತೃಪ್ತಿಕರವಾಗಲಿಲ್ಲ. ಹೀಗೆ ತಿಳಿದು ಸುಮ್ಮನಿರಲಾಗದು ಎಂದವಳು ಯೋಚಿಸಿದಳು. ಪತಿಯ ಮನೆಯವರು ಬಡವರೆ. ಆದರೇನು? ಗೌರವ ಸನ್ಮಾನಗಳಿಗೆ ಕೊರತೆಯೇನಿಲ್ಲ. ಅನ್ಯಾಯವೇನೂ ನಡೆದಿಲ್ಲ. ಅಂತಹ ಅವಮಾನ ಪ್ರಸಂಗಗಳಿಗೇನು ಸಿಕ್ಕಿಕೊಂಡಿಲ್ಲ. ಯೋಚಿಸಿ, ವಿಮರ್ಶಿಸಿ, ತೀರ್ಮಾನಕ್ಕೆ ಬಂದ ರೂಪಕುಮಾರಿ, ತಂಗಿ ರಾಮದುಲಾರಿಯ ಬಳಿಗೆ ಬಂದಳು.

ಆಗ ರಾಮದುಲಾರಿ "ನಿನ್ನ ಗಂಡನಿಗೆ ಹೆಚ್ಚಿನ ಬಡ್ತಿ ಸಿಕ್ಕಿತೇನು? ಇನ್ನೂ ಎಪ್ಪತ್ತೈದರಲ್ಲಿಯೇ ಕೊಳೆಯುತ್ತಿದ್ದಾರೆಯೇ?" ಎಂದು ಗರ್ವದಿಂದ ರೂಪಕುಮಾರಿಯನ್ನು ಕೇಳಿದಳು.

ಈ ಮಾತನ್ನು ಕೇಳಿದ ರೂಪಕುಮಾರಿಗೆ ಬಹಳ ಸಿಟ್ಟು ಬಂತು. "ಏನು ಜಂಭ ಇವಳಿಗೆ" ಎಂದು ಮನಸ್ಸಿನಲ್ಲಿ ಅಂದುಕೊಂಡವಳು, ಇವಳ ಗಂಡನಿಗೇನು ಮಹಾ ಮಂತ್ರಿಪದವಿ ಸಿಕ್ಕಿರುವುದು? ಎಂದು ಜರಿಯುತ್ತಾ, ಅದೇ ಧ್ವನಿಯಲ್ಲಿ "ಹೆಚ್ಚಿನ ಬಡ್ತಿ ಸಿಕ್ಕಿದೆ. ಈಗ ನೂರು ರೂಪಾಯಿ ಬರುತ್ತಿದೆ. ಈ ಕಾಲಕ್ಕೆ ಇಷ್ಟೆ ವಾಸಿ. ಬಿ. ಏ. ಎಂ. ಏ. ಮಾಡಿದ ಪದವೀಧರರಿಗೂ ಕೆಲಸ ಸಿಗದ ಕಾಲದಲ್ಲಿ ನೂರು ರೂಪಾಯಿ ಸಿಗುವುದು ಕಡಿಮೆಯೇನಿಲ್ಲ. ನಿನ್ನ ಗಂಡನು ಬಿ. ಏ. ತರಗತಿಯಲ್ಲಿದ್ದಾನೇನು?" ಎಂದು ಕೇಳಿದಳು.

ರಾಮದುಲಾರಿ ಹೂಗುಟ್ಟುತ್ತಾ "ಅವರು ಓದುವುದನ್ನು
ಎಷ್ಟೋ ಕಾಲವಾಯಿತು. ಓದಿನಿಂದ ವೃತ್ತಿಗೆ ಹಾನಿಯೇ ಹೊ
ಬೇರೆಯೇನು? ಈಗ ಒಂದು ಜೀವವಿಮಾ ಕಂಪನಿಯ ದಳ್ಳಾಳಿಗ
ಕೆಲಸಮಾಡುತ್ತಿದ್ದಾರೆ. ತಿಂಗಳಿಗೆ ಇನ್ನೂರೈವತ್ತು ರೂಪಾಯಿ ವರವ
ಬರುತ್ತಿದೆ. ದಳ್ಳಾಳಿ ಸಮೇತ ಐನೂರು ರೂಪಾಯಿ ಸಿಗುವುದು.
ಖರ್ಚು ನೂರೈವತ್ತು. ಇಷ್ಟು ವೃತ್ತಿಗೌರವ ಕಾಪಾಡಿಕೊಳ್ಳಲು ಅ
ವಶ್ಯಕ. ಉಳಿದ ಮುನ್ನೂರೈವತ್ತರಲ್ಲಿ ನನ್ನ ಖರ್ಚಿಗೆ ನೂರು ರೂಪಾ
ಕೊಡುತ್ತಾರೆ. ಮಿಕ್ಕ ಹಣ ಸಂಸಾರ ನಿರ್ವಾಹಕ್ಕಾಗುವುದು. ಅ
ಎಂ. ಏ. ಮುಗಿಸಿದ್ದರೆ, ಏನೂ ಪ್ರಯೋಜನವಾಗುತ್ತಿರಲಿಲ್ಲ" ಎ
ತನ್ನ ಗರ್ವ, ಠೀವಿ ಪ್ರಕಟಣೆಮಾಡಿ, ಆದಾಯ ವೆಚ್ಚದ
ವಿವರಿಸಿದಳು.

ರೂಪಕುಮಾರಿ, ತಂಗಿ ಹೇಳಿದುದನ್ನೆಲ್ಲಾ ಕೇಳಿ, ತಿಳಿದು
ಶೀಲಿಸಿಕೊಳ್ಳುತ್ತಾ, ಇದೆಲ್ಲವೂ ಉದ್ದನೆಯ, ಸತ್ವವಿಲ್ಲದ, ಸುಳ್ಳಿನಕ
ಯೆಂದು ತಿಳಿದುಕೊಂಡಳು. ಬೇಕಾದಷ್ಟು ಹೇಳಲಿ, ಹೇಳಿಕೆಯ ಸಾ
ರಲ್ಲಿ ಒಂದಂಶವಾದರೂ ನಿಜವಿದ್ದರೆ ಸಾಕು. ಒಂದು ಸಾರಿ ಅವಳ ಮನ
ಹೋಗಿ, ಪರಿಸ್ಥಿತಿಯನ್ನು ಕಂಡುಕೊಂಡು ಬಂದರೆ, ಆಯವ್ಯಯದ ಟೀ
ಟಿಪ್ಪಣಿಯ ನಿಜಾಂಶ ತಿಳಿಯುವುದು ಎಂದುಕೊಂಡಳು. ಅಲ್ಲಿಯವರೆ
ಸಹನೆ, ಅಸೂಯೆ ಕಟ್ಟಿ ಒಡೆಯದೆ ನಿಂತಲ್ಲಿಯೇ ಉಳಿಯಬೇಕಲ್ಲ
ಇಷ್ಟು ವಿವರ ಕೇಳಿದ ರೂಪಕುಮಾರಿಗೆ, ತಂಗಿಯ ನೇರದಲ್ಲಿ ನಿಲ್ಲಲ
ತಾನು ತಕ್ಕವಳಲ್ಲವೆಂದು, ಸರಿಸಮಾನದವಳಲ್ಲವೆಂದು ಕಂಡಿತು
ಅಯ್ಯೋ! ನನ್ನ ದುರಾದೃಷ್ಟಕ್ಕೆ ಏನು ಮಾಡಲಾದೀತು! ಅಸೂಯೆ
ಅತೃಪ್ತಿ ಕಟ್ಟೆ ಒಡೆಯದೆ ಹೇಗೆ ನಿಂತೀತು! ಹೇಳಿಕೆಯೆಲ್ಲಾ ನಿಜವಾ
ಬೇಕಲ್ಲ! ಇನ್ನೂರು ರೂಪಾಯಿ ಸಂಪಾದಿಸಿ, ಗೌರವದಿಂದ ಸಂಸಾ
ನಿರ್ವಹಿಸುವುದು ಕಷ್ಟವಾಗಿರುವಾಗ, ರಾಮದುಲಾರಿಯ ಗಂಡ ಐನೂರು
ತರುತ್ತಾನೆಂದು ಹೇಳುತ್ತಿದ್ದಾಳೆ. ಇದೆಲ್ಲ ಹೇಗೆ ನಿಜವಾದೀತು
ಗಳಿಸಿದುದರಲ್ಲಿಯೇ ಕಾಲ ತಳ್ಳುವುದು ಕಷ್ಟವಾಗಿದೆ. ಹೀಗಿರುವಾಗ, ತನ್ನ
ಗಂಡ ನೂರಕ್ಕಿಂತ ಹೆಚ್ಚಿಗೆ ಸಂಪಾದಿಸಲು ಸಾಧ್ಯವಿಲ್ಲವಲ್ಲಾ ಎಂದವಳಿಗೆ

ತೋರಿತು. ರೂಪಕುಮಾರಿಯ ಮನದಲ್ಲಿ ಈ ಬೇಗೆ ಜೇಯುತ್ತಿರುವಾಗ, ರಾಮದುಲಾರಿಗೆ ಒಂದು ಬಗೆಯ ಸಂತೋಷವಾಯಿತು.

ಬಹು ಕಷ್ಟದಿಂದ, ಸಹನೆಯಿಂದ, ರೂಪಕುಮಾರಿ "ವಿಮಾ ಕಂಪನಿಯ ದಳ್ಳಾಳಿಗಳಿಗೆ ಇಷ್ಟು ಆದಾಯ ಸಿಗುವುದು ಖಂಡಿತವಾದರೆ, ಇನ್ನು ಶಾಲೆ, ಕಾಲೇಜುಗಳೇಕೆ? ಅವನ್ನೆಲ್ಲಾ ಏಕೆ ಮುಚ್ಚಿಬಿಡಬಾರದು? ಹುಡುಗರೇಕೆ ವ್ಯರ್ಥವಾಗಿ ಓದಿ ಕಾಲಹರಣ ಮಾಡಬೇಕು?" ಎಂದಳು.

ಅಕ್ಕನ ತೊಳಲಾಟದ ನೋವನ್ನು ತಿಳಿದುಕೊಂಡ ರಾಮದುಲಾರಿ ಗರ್ವದಿಂದ "ನೀನೆನ್ನುವುದು ತಪ್ಪು. ಯಾರಾದರೂ ಎಂ. ಎ. ಪದವೀ ಧರರಾಗಬಹುದು. ಎಲ್ಲರೂ ವಿಮಾ ದಳ್ಳಾಳಿಗಳಾಗಿ ನಿಲ್ಲಲು ಸಾಧ್ಯವಿಲ್ಲ. ಅದು ದೇವರ ಕರುಣೆ. ಒಬ್ಬನು ಇಡೀ ಜೀವಿತವನ್ನು ಓದಿನಲ್ಲಿ ಮುಗಿಸ ಬಹುದು. ಆದರೆ ಅವನು ಸಮರ್ಥ ದಳ್ಳಾಳಿಯಾಗಲಾರ. ವಿದ್ಯಾವಂತ ನಾಗುವುದು ಬೇರೆ, ವಿಮಾ ದಳ್ಳಾಳಿಯಾಗುವುದೇ ಬೇರೆ. ನಮ್ಮ ಕಂಪನಿ ಶ್ರೇಷ್ಠ, ಇತರ ಕಂಪನಿ ಕೀಳು, ಎಂದು ಜನಗಳನ್ನು ನಂಬಿಸಿ ವಿಮೆಯನ್ನು ಕುದುರಿಸುವುದು ಬಹಳ ಕಷ್ಟ. ತನಗಿಂತಲೂ ಹೆಚ್ಚಿನ ಮೇಧಾವಿಗಳನ್ನು ಸಂಧಿಸಿ, ನಾನಾರೀತಿ ಹೇಳಿ, ತಿದ್ದಿ ಕೆಲಸ ನೆರವೇರಿಸಿ ಕೊಳ್ಳಬೇಕು. ಇದೆಲ್ಲಾ ಆ ವೃತ್ತಿಜೀವನದಲ್ಲಿ ಕಾಣಬೇಕಾದ ಸೋಗಿನ ವಿಚಾರ. ಶ್ರೀಮಂತರನ್ನು ವಿಮೆಗೆ ಎಳೆಯಬೇಕು. ಅವರ ಮನ ಒಪ್ಪುವಂತೆ ಅನುಸರಿಸಿ, ಸಮಯ ಕಾಯಬೇಕು. ಸಾಧಾರಣ ಮನುಷ್ಯ ನಿಗೆ ಶ್ರೀಮಂತರ ಠಾವಿನಲ್ಲಿ ಎಡೆಯೇ ಸಿಗದು. ಅವರನ್ನು ಭೇಟಿ ಮಾಡುವುದೇ ಕಷ್ಟ. ಆರಂಭದಲ್ಲಿ ಅವರು ಬಹಳ ಸಂಕೋಚ ಪಟ್ಟು ಕೊಳ್ಳುತ್ತಿದ್ದರು. ಈಗ ಹಾಗೇನೂ ಇಲ್ಲ. ಉಪಾಯದಿಂದ, ಜಾಣತನ ದಿಂದ, ಕೆಲಸ ನೆರವೇರಿಸಿಕೊಳ್ಳುತ್ತಾರೆ. ಅವರಿಗೆ ಮುಂದಿನ ವರ್ಷ ಹೆಚ್ಚಿನ ಬಡ್ತಿ ಸಿಗುವುದಿದೆ" ಎಂದಳು.

ರಾಮದುಲಾರಿಯಾಡಿದ ಮಹತ್ವ ಮಾತುಗಳನ್ನು ಕೇಳಿದ ರೂಪ ಕುಮಾರಿಗೆ, ಆಕಾಶವೇ ತಲೆಯಮೇಲೆ ಕಳಚಿಬಿದ್ದಂತೆ ಕಂಡಿತು. ರಕ್ತ ನಾಳದಲ್ಲಿ ರಕ್ತ ಪ್ರವಹಿಸದೆ ನಿಂತಂತೆ ಕಂಡಿತು. ಭೂಮಿ ಏಕೆ ಬಾಯ್ದೆರೆದು

ತನ್ನನ್ನು ಅಡಗಿಸಿಕೊಳ್ಳಬಾರದು, ಇವೆಲ್ಲಾ ಎಂತಹ ಅನ್ಯಾಯ ಮಾತುಗಳು? ಎಂದುಕೊಂಡಳು. ತಾನು ಸೌಂದರ್ಯವತಿಯಾಗಿ ಸುಗುಣಿಯಾಗಿ, ಗಂಡನಿಗೆ ಪ್ರೀತಿಪಾತ್ರದವಳಾಗಿ, ಒಳ್ಳೆಯ ಗೃಹಿಣಿಯಾಗಿದ್ದರೂ, ದೈವವೇಕೆ ಅಧೋಗತಿಗೆ ಎಳೆದಿದೆಯೆಂದವಳಿಗೆ ತಿಳಿಯಲಾಗಲಿಲ್ಲ. ರಾಮದುಲಾರಿಯ ಗರ್ವ, ಹೆಮ್ಮೆ, ಸುಖಪ್ರಿಯತೆಯ ಸತ್ವ ತಿಳಿಯಲು, ತನಗೆ ಯಾವ ಮಾರ್ಗವೂ ಸಿಗಲಿಲ್ಲವಲ್ಲಾ ಎಂದವಳಿಗೆ ಬೇಸರವಾಯಿತು. ಸಿಕ್ಕೀತು, ಎಂಬ ನಂಬಿಕೆಯಿಂದ ಅವಳ ಗರ್ವವನ್ನು ಕೆಣಕುವ ಧ್ವನಿಯಲ್ಲಿ "ನಿನ್ನ ಪತಿಗೆ ಆಗ ಒಂದು ಸಾವಿರ ರೂಪಾಯಿ ವರಮಾನ ಸಿಗುವುದು" ಎಂದಳು. "ಸಾವಿರ ಸಿಗಲಾರದು, ಆರುನೂರು ರೂಪಾಯಿ ಸಿಗುವುದು ಖಂಡಿತ" ಎಂದು ರಾಮದುಲಾರಿ ಪ್ರತ್ಯುತ್ತರ ಕೊಟ್ಟಳು.

ಕೊನೆಗೂ ರೂಪಕುಮಾರಿಗೆ ತೃಪ್ತಿ ಕಾಣಲಿಲ್ಲ. ಹುಡುಗಾಟದ ಚಪಲದಿಂದವಳು "ಎಲ್ಲಿಯೋ ಹಣದ ಬೆಲೆಯುನ್ನರಿಯದ ಯಜಮಾನ ನಿನ್ನ ಗಂಡನ ಕೈಗೆ ಸಿಕ್ಕಿಬಿದ್ದಿರಬೇಕು" ಎಂದಳು.

"ಅಕ್ಕ! ಹಣಗಳಿಸುವ ಶ್ರೀಮಂತರು ನಿಜವಾಗಿ ನನ್ನ-ನಿನ್ನಂತೆ ಅನುಭವವಿಲ್ಲದವರೇನು? ಬೆಲೆಯುನ್ನರಿಯದವರೆಂದು ಹೇಳಬೇಡ. ಅವರು ಚಾಣಾಕ್ಷರು. ನಮ್ಮಿಂದ ಅವರಿಗೆ ಆರು ಸಾವಿರ ರೂಪಾಯಿ ಸಂಪಾದನೆಯಾಯಿತೆಂದರೆ, ನಮಗೆ ಆರುನೂರು ರೂಪಾಯಿ ಕೊಡುತ್ತಾರೆ ಅಷ್ಟೆ. ಪ್ರಪಂಚವನ್ನೇ ಮೋಸಗೊಳಿಸಿ ತಮ್ಮ ಹಿಡಿಯಲ್ಲಿಟ್ಟುಕೊಳ್ಳುವ ಈ ಧನಿಕರು, ಖಂಡಿತವಾಗಿ ಇತರರ ಮೋಸಕ್ಕೆ ಒಳಗಾಗುವುದಿಲ್ಲ" ಎಂದಳು.

ಈ ಸಾಧನೆ, ಒರಸೆ, ಒಳ್ಳಿತಾಗಲಿಲ್ಲವೆಂದು ತಿಳಿದ ರೂಪಕುಮಾರಿ ತಂಗಿಯನ್ನು ಪೂರಾ ಮುಳುಗಿಸಿ ಅವಹೇಳನ ಮಾಡಲು "ನೀನೆನ್ನುವುದು ಸರಿಯಿಲ್ಲ! ಎಲ್ಲವೂ ಮೋಸ. ಒಬ್ಬನು ಒಂದು ದಿನದ ಅಶನಕ್ಕೆ ಸುಳ್ಳಿನ ಕಂತೆಯನ್ನೇ ಕಟ್ಟಬೇಕು" ಎಂದಳು.

ರಾಮದುಲಾರಿ "ಒಬ್ಬನೇಕೆ? ವಕೀಲರೂ, ಫಿರ್ಯಾದು ನಡೆಸುವವರೂ ಮೋಸಗಾರರೇ. ಕಕ್ಷಿಗಾರರ ಪ್ರಯೋಜನಕ್ಕಾಗಿ, ತಮ್ಮ ಭಾಂಡಾರ

ಪೋಷಣೆಗಾಗಿ, ಜನಕ್ಕೆ ಸುಳ್ಳನ್ನೂ ಹೇಳಲು ಸಿದ್ಧರಿರುತ್ತಾರೆ. ಸುಳ್ಳು ಸಾಕ್ಷಿ ಕಲೆಹಾಕಿ, ಧೈರ್ಯವಾಗಿ ಸತ್ಯವನ್ನು ಮರೆಮಾಚಿ, ಸುಳ್ಳನ್ನು ನಿಜವೆಂದು ಪ್ರತಿಪಾದಿಸುತ್ತಾರೆ. ಹಾಗೆಯೇ ಸಭಾಸದಸ್ಯರು, ನ್ಯಾಯಾಡಳಿತಗಾರರು, ತಮ್ಮ ಚುನಾವಣೆಯ ಸಂದರ್ಭದಲ್ಲಿ, ಹಾರಾಟವಾಡಿ, ಹೊಗಳಿಕೆ ಆಡಂಬರ ತೋರಿ. ಸಿಹಿಮಾತುಗಳಿಂದ ತಮ್ಮ ಮತವನ್ನು ಗಳಿಸಿಕೊಂಡು ಮೋಸಪಡಿಸುತ್ತಾರೆ. ಇದೆಲ್ಲಾ ಮೋಸವಲ್ಲವೇನು? ಪ್ರಪಂಚವೇ ಸುಳ್ಳಿನ ಮೂಟೆ. ಮೊದಲಿನಿಂದಲೂ ಹೀಗೆಯೇ ನಡೆಯುತ್ತಿದೆ. ಹಣಕ್ಕೆ ಇಲ್ಲಿ ಹೆಚ್ಚು ಮೌಲ್ಯ. ಈ ಪ್ರಪಂಚದಲ್ಲಿ ಯಾರೂ ಹಣವನ್ನು ಹೇಗೆ ಸಂಪಾದಿಸಿ ತಾವು ತರುತ್ತಾರೆಂದು ತಿಳಿಯುವ ಗೋಜಿಗೆ ಹೋಗರು. ಹಣದ ಮುಂದೆ ಪರಿಮಳವನ್ನು ಎರಚಿ ಕುಣಿಯುತ್ತಾರಷ್ಟೆ? ದುರ್ದೈವಿಗಳು, ಹಣಗಳಿಸಲಾರದವರು, ಶಕ್ತಿಯಿಲ್ಲದವರು ಮಾತ್ರ ತಮ್ಮ ದೈವವನ್ನು ಜರಿಯುತ್ತಾ, ತಾವು ಅನುಸರಿಸುವ ನೈಜಮಾರ್ಗ ರೀತಿನೀತಿಗಳನ್ನು, ತೆಗಳುತ್ತಾ, ಕಣ್ಣೀರಿಡುತ್ತಿರುತ್ತಾರೆ. ಅವರ ನೈಜ ಮಾರ್ಗ ನೀತಿರೀತಿಗಳಿಗೆ ಬೆಲೆಯೆಲ್ಲಿದೆ?"

ಈ ಮಾತು, ಸಂಭಾಷಣೆಯನ್ನೆಲ್ಲಾ ಕೇಳಿ, ರಾಮದುಲಾರಿಯ ಅಂತಸ್ತು ತಿಳಿದು ಅಸೂಯೆ ಪಡುತ್ತಿದ್ದ ರೂಪಕುಮಾರಿಗೆ, ಇನ್ನು ಮಾತನಾಡಿ ಕೆದಕುವುದರಿಂದ ತನಗೇನೂ ಲಾಭವಿಲ್ಲವೆಂದು ತೋರಿತು. ನಿಜವಾಗಿ ರಾಮದುಲಾರಿ ಅದೃಷ್ಟಶಾಲಿನಿ, ಎಂದವಳು ಮನಸ್ಸಿನಲ್ಲಿ ತಿಳಿದುಕೊಂಡಳು. ಇನ್ನು ಮಾತು ಮುಂದುವರಿಸಿದರೆ, ತನ್ನ ಮೊಟಕು ಬುದ್ಧಿ ತೋರಿದಂತಾಗುವುದೆಂದು ಅವಳಿಗೆ ಕಂಡಿತು. ಏನೋ ಯಾವುದೋ ನೆಪದಿಂದ ರಾಮದುಲಾರಿಯ ಮನೆಸೇರಿ, ನಿಜತ್ವವನ್ನು ತಿಳಿಯೋಣ ಎಂದವಳು ಸುಮ್ಮನಾದಳು. ಕೊನೆಗೆ, ಪ್ರಪಂಚದಲ್ಲಿ ನ್ಯಾಯಕ್ಕೆ ಬೆಲೆಯಿಲ್ಲ, ದುರ್ದೈವಿಗಳಿಗೆ ಎಡೆಯಿಲ್ಲ, ಸತ್ಯವೇ ಅತ್ಯುತ್ತಮವಾದ ನೀತಿಯಲ್ಲ ಎಂದವಳಿಗೆ ತೋರಿತು.

ರೂಪಕುಮಾರಿಗೆ ಕೊನೆಗೂ ಸಮಾಧಾನವಾಯಿತೇನು? ಪ್ರಪಂಚದಲ್ಲಿ ಪ್ರಾಮಾಣಿಕರು ಯಾರು? ಪ್ರಾಮಾಣಿಕರಿಗೆ, ಅಪ್ರಮಾಣಿಕರಾಗಿ ವರ್ತಿಸಲು ಸಮಯ ಸಿಕ್ಕದಿರಬಹುದು, ಇಲ್ಲವೆ; ಅವರಿಗೆ ಅಂತಹ

ಸಮಯ ಒದಗಿಸಿಕೊಳ್ಳುವ ಚತುರತೆ, ಧೈರ್ಯ ಇಲ್ಲದೇ ಹೋಗ ಬಹುದು. ರೂಪಕುಮಾರಿಯ ಗಂಡ ಎಪ್ಪತ್ತೈದು ರೂಪಾಯಿ ಗಳಿ ತ್ತಿದ್ದ. ಅವನಿಗೆ ಇನ್ನೂ ಹೆಚ್ಚು ಹತ್ತುರೂಪಾಯಿ ಗಳಿಸುವುದ ಮನಸ್ಸಿರಲಿಲ್ಲವೇನು? ವಿರುದ್ಧವಾಗಿ ನಡೆಯಲವನಿಗೆ ಅವಕಾಶ ಸಿಗು ಹಾಗಿರಲಿಲ್ಲ. ಅವನ ಉದ್ಯೋಗದಲ್ಲಿ ಹಾಗೆ ವರ್ತಿಸಲು ಸಮಯವ ಸಿಗುತ್ತಿರಲಿಲ್ಲ. ಒಂದುವೇಳೆ, ಉದ್ಯೋಗದ ಹಾದಿಯಲ್ಲಿ ಅಂತ ಭಾವನೆ ಸುಳಿದಿದ್ದರೂ, ಅದು ಬಹು ಬೇಗ ಮಾಯವಾಗುತ್ತಿತ್ತು ರಾಮದುಲಾರಿ ನೀತಿನಡತೆಯಲ್ಲಿ ಸ್ವಚ್ಛಳಿದ್ದು, ಗಂಡನ ಅನ್ಯಾಯ ಸಂಪಾದನೆಯನ್ನು ತಡೆಗಟ್ಟಲು ಶಕ್ತಳಾಗಿದ್ದಳೇನು? ಇಲ್ಲ, ಇಲ್ಲ ಅಂತಹವನನ್ನು ಇನ್ನೂ ಬೆನ್ನುತಟ್ಟಿ ಪ್ರೋತ್ಸಾಹಿಸಿ, ಹೆಚ್ಚುಗಳಿ ಸಂಸಾರಕ್ಕೆ ತಂದೊಡ್ಡುವಂತೆ ಪ್ರೇರೇಪಿಸುತ್ತಿದ್ದಳು. ಇಂತಹ ಅತ್ಯಾಶೆಯ ಹೆಂಗಸು, ಗಂಡನನ್ನು ಪ್ರೇರೇಪಿಸಿ, ಪ್ರೋತ್ಸಾಹಿಸಿ ಕಳುಹಿಸಿಕೊಟ್ಟು ಉತ್ಸಾಹದಿಂದ ಅವನು ಬರುವಿಕೆಯನ್ನು ಎದುರುನೋಡುತ್ತಾ ಕೂಡು ತ್ತಿದ್ದಳು. ಅವಳ ನಿರೀಕ್ಷೆ, ಪ್ರತ್ಯಾಶೆಗೆ ಅನುಗುಣವಾಗಿ ಅವನು ಕಛೇರಿಯಿಂದ ಮನೆಗೆ ಬಂದಾಗ, ಆತುರದಿಂದ ಅವನ ಕಿಸೆಗೆ ಕೈಹಾಕಿ ಶೋಧಿಸಿಬಿಡುತ್ತಿದ್ದಳು.

ಹೊರ ಬಯಲಲ್ಲಿ ಗಾಯನ ಮೇಳ ಕೂಡಿತ್ತು. ರಾಮದುಲಾರಿ ಅಲ್ಲಿಗೆ ಹೋಗಿ ಸೇರಿಕೊಂಡಳು. ಉದಾಸೀನ ಭಾವದಿಂದ ರೂಪಕುಮಾರಿ ದೂರ ಕುಳಿತುಕೊಂಡಿದ್ದಳು. ಅವಳ ತಲೆ ಕಾಯುತ್ತಿತ್ತು. ಸಂತೋಷ ಸಂಭ್ರಮದಲ್ಲಿ ಭಾಗವಹಿಸದೆ ಉದಾಸೀನದಿಂದವಳು ಇದ್ದು ಬಿಟ್ಟಳು. ಆಗ ಅವಳು, ತಾನೊಬ್ಬ ನಿರ್ಭಾಗ್ಯ ಹೆಣ್ಣೆಂದು, ಅಳುವುದಕ್ಕೆ ಮಾತ್ರ ಹುಟ್ಟಿದವಳೆಂದು ಭಾವಿಸಿದಳು.

ಒಂಬತ್ತು ಘಂಟೆಯಾಯಿತು. ಬಂದ ಅತಿಥಿಗಳು ಒಬ್ಬೊಬ್ಬರಾಗಿ ಹೊರಗೆ ಕಾಲಿಡುತ್ತಿದ್ದರು. ರೂಪಕುಮಾರಿ ಎಲ್ಲರಂತೆ ತಾನೂ ಹೊರಡ ಲನುವಾಗುತ್ತಿದ್ದಳು. ಗಾಡಿಯವನನ್ನು ಕರೆದು ಅವಳು ವಿಚಾರಿಸು ತ್ತಿರುವಾಗ, ರಾಮದುಲಾರಿ "ಬೇರೆ ಗಾಡಿಯೇಕೆ? ನಮ್ಮ ಮೋಟಾರು ಸ್ವಲ್ಪ ಹೊತ್ತಿನೊಳಗೆ ಇಲ್ಲಿಗೆ ಬರುವುದಿದೆ. ನನ್ನೊಂದಿಗೆ ಬಂದುಬಿಡು,

ಸ್ವಲ್ಪ ದಿನ ನಮ್ಮ ಮನೆಯಲ್ಲಿದ್ದು ನಂತರ ಹೋಗುವೆ. ನಿನ್ನ ಗಂಡನಿಗೆ ಹೇಳಿ ಕಳುಹಿಸುತ್ತೇನೆ" ಎಂದಳು.

ರೂಪಕುಮಾರಿ ಎಣಿಸಿದ ಹವಣಿಕೆ ಆಗ ವ್ಯರ್ಥವಾಯಿತು. ತಂಗಿಯ ಮನೆ ಹೊಕ್ಕು ನಿಜವನ್ನರಿಯಬೇಕೆಂದಿದ್ದ ಅವಳಾಶೆ ನೀರು ಪಾಲಾಯಿತು. ಹರಕು ಬಟ್ಟೆಯನ್ನುಟ್ಟು, ತಂಗಿಯ ಮನೆಗೆ ಹೇಗೆ ಹೋಗುವುದು? ಅದರ ಬದಲು, ಮೊಗ ಮುಚ್ಚಿ ಮೂಲೆಯಲ್ಲಿ ಅಡಗಿ ಕಣ್ಣೀರಿಡುವುದು ಒಳ್ಳೆಯದೆಂದವಳು, "ಈ ದಿನ ಬೇಡ. ಇನ್ನೊಂದು ದಿನವಾಗಲಿ, ಮನೆಯಲ್ಲಿ ಹುಡುಗರು ಕಾಯುತ್ತಿರುತ್ತಾರೆ" ಎಂದಳು.

"ಹೋಗಲಿ, ಈ ರಾತ್ರಿಯಾದರೂ ನಮ್ಮ ಮನೆಯಲ್ಲಿ ನಿಲ್ಲಲಿಕ್ಕಾಗುವುದಿಲ್ಲವೇನು?"

"ಇಲ್ಲ."

"ಎಂದು ಬರುವೆ ಹೇಳು? ಅಂದು ಮೋಟಾರು ಕಳುಹಿಸುವೆ."

"ಆಗಲಿ, ಮುಂದೆ ತಿಳಿಸುವೆ."

"ನೀನು ಮರೆಯುವೆ. ನಿನ್ನನ್ನು ಭೇಟಿಯಾಗಿ ಒಂದು ವರ್ಷವಾಯಿತು. ಎಂದಾದರೂ ನೀನು ನನ್ನನ್ನು ನೆನೆಸಿರುವೆಯಾ? ನಿನ್ನಿಂದ ಕರೆ ಬಂದೀತೇ ಎಂದು ನಾನು ಕಾಯುತ್ತಿದ್ದೆ. ಇಬ್ಬರೂ ಈ ಊರಿನಲ್ಲಿದ್ದರೂ ಪರಸ್ಪರ ಭೇಟಿಯಾಗುವುದೆಂದರೆ ತಿಂಗಳು ಗಟ್ಟಲೆಯೆ" ಎಂದಳು ರಾಮದುಲಾರಿ.

ರಾಮದುಲಾರಿಗೆ ಪ್ರತಿಯಾಗಿ ಹೇಳಲು ರೂಪಕುಮಾರಿಗೆ ಏನೂ ತೋರಲಿಲ್ಲ. ಮನೆಗೆಲಸದಿಂದ ಬಿಡುವಾಗುವುದಿಲ್ಲವೆಂದೂ, ತಂಗಿಯನ್ನು ಕರೆಸಿಕೊಳ್ಳಬೇಕೆಂಬ ಇಚ್ಛೆಯಿದ್ದರೂ ಸಮಯ ಒದಗಲಿಲ್ಲವೆಂದೂ ಅವಳು ಹೇಳಿಕೊಳ್ಳಬೇಕಾಯಿತು.

ಅಷ್ಟು ಹೊತ್ತಿಗೆ, ರಾಮದುಲಾರಿಯ ಗಂಡ ಶ್ರೀ ಗುರುಸೇವಕ ಅಲ್ಲಿಗೆ ಬಂದ. ಗೌರವದಿಂದವನು ರೂಪಕುಮಾರಿಗೆ ವಂದಿಸಿ, ಮಾತನಾಡಿಸಿದ. ಪಾಶ್ಚಾತ್ಯ ಉಡುಪು ತೊಟ್ಟು ಬಂದಿದ್ದವನಿಗೆ ಚನ್ನಾಗಿ ಅದು

ಒಪ್ಪುತ್ತಿತ್ತು. ಮಣಿಕಟ್ಟಿನಲ್ಲಿ ಹೊಳೆಯುತ್ತಿದ್ದ ಚಿನ್ನದ ಗಡಿಯಾರ ಕಣ್ಣನ್ನು ಅಲಂಕರಿಸಿದ ಚಿನ್ನದ ಸುಲೋಚನ, ಬಾಯಲ್ಲಿ ಹೊ ಯಾಡುತ್ತಿದ್ದ ಚುಟ್ಟಾ, ಈ ಠೀವಿ ಮನುಷ್ಯನನ್ನು ನೋಡಿದ ರೂ ಕುಮಾರಿಗೆ ಸಂತೋಷವಾಯಿತು. ಇವನು ಇಷ್ಟು ಠೀವಿಯಿಂದ ಕಾಣುವನೆಂದು ಅವಳು ಎಣಿಸಿಯೇ ಇರಲಿಲ್ಲ. ಸೌಮ್ಯನಾಗರೀಕನಂತೆ ಗುಣಾಢ್ಯನಂತೆ ಅವನು ತೋರುತ್ತಿದ್ದ. ತನಗಿಂತಲೂ ಚಿಕ್ಕವನು, ತಂಗಿಯ ಗಂಡನು, ಹಿರಿಯಳಾದ ತನಗೆ ವಂದಿಸಿ ಮಾತನಾಡಿಸಿದಾಗ; ರೂಪಕುಮಾರಿ ಸಂತೋಷದಿಂದ ಅವನನ್ನು ಆಶೀರ್ವದಿಸುತ್ತಾ, "ನಾನು ಇಲ್ಲಿಗೆ ಬಾರದೆ ಮನೆಯಲ್ಲಿ ಉಳಿದಿದ್ದರೆ, ನಿನ್ನ ಭೇಟಿ ಸಿಗುತ್ತಲೇಯಿರ ಲಿಲ್ಲ" ಎಂದಳು.

ರೂಪಕುಮಾರಿ ಹೇಳಿದುದನ್ನು ಕೇಳಿ ನಗುತ್ತಾ ಅವನು "ಒಳ್ಳೆಯ ಮಾತು ಹೇಳುತ್ತೀರಿ! ನನ್ನನ್ನು ಎಂದಾದರೂ ನಿಮ್ಮ ಮನೆಗೆ ಬಾರೆಂದು ಕರೆಕಳುಹಿಸಿದಿರಾ? ಎಂದಾದರೂ ನಾನು, ಬರಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿದೆನೇ?" ಎಂದ.

"ನನ್ನಮನೆಯೇನು? ನನ್ನ ಮನೆ ನಿಮ್ಮದೇ ಆಗಿಲ್ಲವೇನು? ಹೀಗಿರುವಾಗ ನೀವು ಅತಿಥಿಯೆಂದು ನಾನು ಹೇಗೆ ಭಾವಿಸಲಿ?" ಎಂದಳು ರೂಪಕುಮಾರಿ.

ರೂಪರುಮಾರಿ ಈವರೆಗೆ ತಾಳಿದ ಅಸೂಯೆ, ಕೋಪ, ತಾಪ ಎಲ್ಲಾ ಕುಸಿದುಬಿತ್ತು. ಗುರುಸೇವಕನ ಮತ್ತು ರಾಮದುಲಾರಿಯ ವಿನಯ, ಪ್ರೀತಿಯ ಮಾತು, ಗೌರವಾದರಗಳು ಅವಳ ಕಣ್ಣಿಗೆ ಹೊಸ ದಾಗಿ ಕಂಡಿತು.

ಕ್ಷಮೆ ಬೇಡುವನಂತೆ ಗುರುಸೇವಕ "ಅತ್ತಿಗೆ, ತಪ್ಪು ನನ್ನದೆ- ಹಾಗೆಂದು ನಾನು ತಿಳಿಯಲಿಲ್ಲ. ಈ ರಾತ್ರಿ ನೀವು ನಮ್ಮ ಮನೆಯಲ್ಲಿದ್ದು ಹೋಗಬೇಕು" ಎಂದನು.

"ಈ ದಿನ ನನಗೆ ಬಿಡುವಿಲ್ಲ. ಇನ್ನೊಂದು ದಿನವಾಗಲಿ, ಹುಡುಗರು ನನಗಾಗಿ ಕಾಯುತ್ತಿರುತ್ತಾರೆ" ಎಂದಳು.

ಆಗ ರಾಮದುಲಾರಿ "ನಾನೆಷ್ಟೋ ಕೇಳಿ ನೋಡಿದೆ, ಅವಳು ಒಪ್ಪುವುದೇ ಇಲ್ಲ" ಎಂದಳು.

ಮೋಟಾರು ಹಿಂಬದಿಯ ಜಾಗದಲ್ಲಿ ಅಕ್ಕ-ತಂಗಿಯರು ಕುಳಿತು ಕೊಂಡರು. ಗುರುಸೇವಕ ಮೋಟಾರು ನಡೆಸುವ ಜಾಗ ಹಿಡಿದು ಕುಳಿತ. ಐದು ನಿಮಿಷ ಕಳೆಯುವುದರೊಳಗಾಗಿ ರಾಮದುಲಾರಿಯ ಮನೆ ಸಿಕ್ಕಿತು. ಮತ್ತೊಂದುಬಾರಿ ಅವಳು, ರೂಪಕುಮಾರಿಯನ್ನು ನಿಲ್ಲಿಸಿಕೊಳ್ಳಲು ಯತ್ನಿಸಿದಳು. ರೂಪಕುಮಾರಿ ಒಪ್ಪದೆ ಹೋದ್ದರಿಂದ, ರಾಮದುಲಾರಿ ಮೋಟಾರಿನಿಂದಿಳಿದು ಮನೆಯೊಳಗೆ ಹೋದಳು. ಗುರುಸೇವಕ ಮತ್ತೆ ಮೋಟಾರು ನಡಿಸಿ, ರೂಪಕುಮಾರಿಯನ್ನು ಅವಳ ಮನೆಗೆ ಬಿಡಲು ಹೊರಟ. ಈ ನಡುವೆ ರೂಪಕುಮಾರಿ, ಒಂದು ಬಾರಿ ರಾಮದುಲಾರಿಯ ಮನೆಯ ಕಡೆಗೆ ದೃಷ್ಟಿಯಿಟ್ಟು ನೋಡಿದಳು.

ಸ್ವಲ್ಪದೂರ ಹೋಗುವುದರೊಳಗಾಗಿ ಗುರುಸೇವಕ "ಅತ್ತಿಗೆ, ನನ್ನ ವೃತ್ತಿಯನ್ನು ನಾನಾಗಿಯೇ ಆರಿಸಿಕೊಂಡಿದ್ದೇನೆ. ಇದೇ ವೇಗದಲ್ಲಿ ನಾನು ವೃತ್ತಿ ಅನುಸರಿಸಿದರೆ, ಮೂರು ವರ್ಷಗಳಲ್ಲಿ ಬೇರೆಯವನಾಗಿ ಬಿಡುತ್ತೇನೆ" ಎಂದ.

ಸಂತಾಪಸೂಚಕಧ್ವನಿಯಲ್ಲಿ ರೂಪಕುಮಾರಿ "ರಾಮದುಲಾರಿ ಎಲ್ಲವನ್ನೂ ನನಗೆ ತಿಳಿಸಿದ್ದಾಳೆ. ದೇವರು ನಿನ್ನನ್ನು ಕಾಪಾಡುತ್ತಿರಲಿ. ಎಚ್ಚರಿಕೆಯಿಂದ ಮಾತ್ರ ಹೆಜ್ಜೆಯಿಡುತ್ತಿರು" ಎಂದಳು.

"ಯಜಮಾನನ ಗಮನಕ್ಕೆ ತಾರದೆ ಅವನ ಹಣವನ್ನು ಉಪಯೋಗಿಸುವುದು ಪಾಪವೆಂದು ತಿಳಿಯುತ್ತೇನೆ. ಮನುಷ್ಯ ನಂಬಿಕೆಯನ್ನು ಉಳಿಸಿಕೊಂಡು ಬಾಳುವವರೆಗೆ ಚೆನ್ನಾಗಿಯೇ ಬಾಳುತ್ತಾನೆ. ಸಂಪೂರ್ಣತೆಯನ್ನು ಬಿಟ್ಟು, ಭಾವಶುದ್ಧಿಯನ್ನು ತೊರೆದು ಹಣ ಸಂಪಾದಿಸುವುದರಿಂದ ಪ್ರಯೋಜನವಿಲ್ಲ. ಹಾಗೆ ಸಂಪಾದಿಸುವುದು ವ್ಯರ್ಥವೇ ಸರಿ. ನನಗೆ ಎದುರಾಗಿ ಯಾರೂ ಇಲ್ಲ; ಯಾರಿಗೂ ನಾನು ಭಯ ಪಡಬೇಕಾದುದಿಲ್ಲ. ದಾಖಲೆಯೂ ನನ್ನ ವಶದಲ್ಲಿದೆ ಯಜಮಾನ ನೆನಿಸಿದವನು ಸತ್ತುಹೋಗಿದ್ದಾನೆ. ಅವನ ಎಲ್ಲಾ ಸಂಪತ್ತು ಅವನ

ಹೆಂಡತಿಯ ಪಾಲಿಗೆ ಬಂದು ನನ್ನ ವಶಕ್ಕೆ ಸಿಕ್ಕಿದೆ. ಯಜಮಾನ ತೀರಿದಾಗ ಅವನ ಎಲ್ಲಾ ಸಂಪತ್ತನ್ನು ನಾನೇ ಆಧೀನಕ್ಕೆ ತೆಗೆದುಕೊಂಡೆ. ಇಲ್ಲದಿದ್ದಲ್ಲಿ ಎಲ್ಲವೂ ನಾಶವಾಗಿ ಹೋಗುತ್ತಿತ್ತು. ನಾನು ವೃತ್ತಿಗೆ ಸೇರಿದ ಮೂರು ತಿಂಗಳೊಳಗಾಗಿ ಯಜಮಾನ ತೀರಿದ. ಮನುಷ್ಯನ ಬೆಲೆಯನ್ನರಿತುಕೊಳ್ಳುವ ಶಕ್ತಿ ಆವನಿಗೆ ಚನ್ನಾಗಿ ತಿಳಿದಿತ್ತು.

ಯಜಮಾನ ನನಗೆ ತಿಂಗಳಿಗೆ ನೂರು ರೂಪಾಯಿ ಕೊಡಲೊಪ್ಪಿ ಕೆಲಸಕ್ಕೆ ನಿಯಮಿಸಿದ. ತಿಂಗಳ ಅಂತ್ಯದಲ್ಲಿ ಇನ್ನೂರೈವತ್ತು ರೂಪಾಯಿ ಸೇರಿಸಿಕೊಡುತ್ತಿದ್ದ. ಅದೃಷ್ಟವಶಾತ್ ನಾನು ಕೆಲಸಕ್ಕೆ ಸೇರಿದ ಮೊದಲನೆಯ ತಿಂಗಳಿನಲ್ಲಿಯೇ ಹನ್ನೆರಡು ಸಾವಿರ ರೂಪಾಯಿ ವ್ಯಾಪಾರ ಗಿಟ್ಟಿಸಿದೆ.

ಗುರುಸೇವಕನೊಡನೆ ಸಂಭಾಷಣೆಯನ್ನು ಮುಂದುವರಿಸುವ ಇಚ್ಛೆಯಿಂದ ರೂಪಕುಮಾರಿ, "ನೀನು ನಡೆಸುತ್ತಿರುವ ವ್ಯಾಪಾರ ಯಾವರೀತಿಯದು?" ಎಂದು ಕೇಳಿದಳು.

ಉತ್ಸಾಹಧ್ವನಿಯಲ್ಲಿ ಗುರುಸೇವಕ "ಹೊರಗಿನಿಂದ ಯಂತ್ರಗಳನ್ನು ತರಿಸಿ ಮಾರುವ ವ್ಯಾಪಾರ" ಎಂದ.

ಸಂಭಾಷಣೆ ನಡೆಯುತ್ತಿರುವಾಗಲೇ ಅಂದಚಂದವಿಲ್ಲದ ರೂಪಕುಮಾರಿಯ ಮನೆ ಕಾಣಿಸಿತು. ಹೊರಬಾಗಿಲಲ್ಲಿ ನೇತುಹಾಕಿದ್ದ ಲಾಂದ್ರ ತೆಳ್ಳನೆಯ ಬೆಳಕು ಬೀರುತ್ತಿತ್ತು. ಪತ್ನಿಯ ಬರುವಿಕೆಯನ್ನೇ ನಿರೀಕ್ಷಿಸುತ್ತ ಶತಪಥ ತಿರುಗಾಡುತ್ತಿದ್ದ ರೂಪಕುಮಾರಿಯ ಗಂಡ ಉಮಾನಾಥ, ಬಾಗಿಲ ಬಳಿ ಮೋಟಾರು ನಿಂತದ್ದನ್ನು ನೋಡಿದ. ರೂಢಿಯಂತೆ, ಗುರುಸೇವಕನನ್ನು ಮನೆಯೊಳಗೆ ಬಂದು ಹೋಗುವಂತೆ ರೂಪಕುಮಾರಿ ಕೇಳಿಕೊಂಡಳು. ಅವನು ತನ್ನ ಬಡಮನೆಯ ಒಳಗೆ ಬಾರದಿದ್ದರೆ ಒಳ್ಳೆಯದೇ ಎಂದವಳಿಗೆ ಎನಿಸಿತು. ಆದರೂ ಗೌರವಪೂರ್ವಕವಾಗಿ ಅವನನ್ನು ಮನೆಯೊಳಗೆ ಬಾರೆಂದು ಆಹ್ವಾನಿಸಿದಳು. ಗುರುಸೇವಕ ಮೋಟಾರಿನಿಂದ ಕೆಳಗಿಳಿಯಲಿಲ್ಲ. ಇನ್ನೊಂದು ಸಾರಿ ಬರುವೆನೆಂದು ಹೇಳಿ ಹೊರಟ. ರೂಪಕುಮಾರಿಯ ಪತಿಯೂ ಗುರು

ಸೇವಕನನ್ನು ಸಂಧಿಸಿ ಮಾತನಾಡಿಸಲಿಲ್ಲ. ಹೆಚ್ಚು ಒತ್ತಾಯಪಡಿಸದೆ, ರೂಪಕುಮಾರಿ ಗುರುಸೇವಕನನ್ನು ಕಳುಹಿಸಿಬಿಟ್ಟಳು.

ಬೇಸರ, ಬೇಗೆ, ಅಸೂಯೆ ನಾನಾ ಬಗೆಯ ಭಾವನಾರೂಪದಲ್ಲಿದ್ದು ಮನೆಗೆ ಬಂದ ರೂಪಕುಮಾರಿಗೆ, ಅವಳ ಮನೆ ಮಸಣದಂತೆ, ಮಹಾ ಕತ್ತಲೆಯ ಗವಿಯಂತೆ ಕಾಣಿಸಿತು. ಬಂಧುಗಳ ಮನೆಯಲ್ಲಿ ಕಾಣಿಸಿದ ಓರಣ ವಸ್ತುಗಳು ತನ್ನ ಮನೆಯಲ್ಲಿ ಒಂದೂ ಇಲ್ಲವೆಂದವಳಿಗೆ ಕಂಡಿತು. ಕುರ್ಚಿಮೇಜುಗಳಿರದ, ಹೂಕುಂಡವಿಲ್ಲದ, ನೆಲಕ್ಕೆ ಹಾಸುವ ರತ್ನಗಂಬಳಿ ಕಾಣದ ಅವಳ ಮನೆ ಕಂಡು ಅವಳಿಗೇ ಬೇಸರವಾಯಿತು. ಅವಳ ಮನೆಯಲ್ಲಿ ಓರಣವಸ್ತುಗಳ ಬದಲಾಗಿ ಹಳೆಯದಾದ ಮಂಚಗಳು ಮಾತ್ರ ಇದ್ದವು. ಮುಂಜಾನೆ ಈ ಮನೆಯಿಂದ ಹೊರಟ ಅವಳಿಗೆ ಮೆಚ್ಚುಗೆಯಾಗಿತ್ತು. ಬೇರೆಯವರ ಮನೆಗೆ ಹೋಗಿ ಓರಣವಸ್ತುಗಳನ್ನು ಕಂಡು ಹಿಂದಿರುಗಿ ಬಂದಮೇಲೆ ತನ್ನ ಮನೆ ಬೇಸರವಾಗಿ ಕಂಡಿತು. ರೂಪಕುಮಾರಿಯು ಮನೆಗೆ ಬರುವುದನ್ನು ಕಾಯುತ್ತಿದ್ದ ಮಕ್ಕಳು "ಅಮ್ಮ, ಅಮ್ಮ" ಎಂದು ಆದರದಿಂದ ಹತ್ತಿರಕ್ಕೆ ಬಂದವು. ಅವಳು ಬೇಸರದಿಂದ ಅವುಗಳನ್ನು ಸರಿಸಿ, "ಸರಿಯಿರಿ. ತಲೆಶೂಲೆಯಿಂದ ಬಾಧೆ ಪಡುತ್ತಿದ್ದೇನೆ. ನನಗೀಗ ಬಿಡುವು ಕೊಡಿ" ಎಂದು ಅಟ್ಟಬಿಟ್ಟಳು. ಮನೆಯಲ್ಲಿ ಅಡಿಗೆ ಸಿದ್ಧವಾಗಿರಲಿಲ್ಲ. ಸಿದ್ಧಮಾಡಿಡಲು ಯಾರಿದ್ದರು? ಚಿಕ್ಕ ಮಕ್ಕಳು ಹಾಲು ಕುಡಿದಿದ್ದವು. ಉಮಾನಾಥನಿಗೆ ಮಾತ್ರ ತಿನ್ನಲಿಕ್ಕೆ ಏನೂ ಇರಲಿಲ್ಲ. ಅವನು, ಹೆಂಡತಿ ಬರುತ್ತಾಳೆ, ಅಡಿಗೆ ಮಾಡಿ ಬಡಿಸುತ್ತಾಳೆ ಎಂದು ಕಾಯುತ್ತಿದ್ದ. ತಲೆನೋವೆಂದು ರೂಪಕುಮಾರಿ ಹೇಳುತ್ತ ಮಲಗಿದಾಗ, ಅವನು ಬೇರೆ ದಾರಿಕಾಣದೆ, ಅಂಗಡಿಯಿಂದ ಅವಲಕ್ಕಿ ಕೊಂಡುಬರಲು ಹೊರಟ

ಮಿತಿಮೀರಿದ ಬೇಸರ ಮತ್ತು ಜಿಗುಪ್ಸೆಯಿಂದ ಮನೆಗೆ ಬಂದ ರೂಪಕುಮಾರಿ "ನನಗಾಗಿ ಕಾಯುತ್ತಿದ್ದುದೇಕೆ? ನಿಮ್ಮ ಮನೆಯಲ್ಲಿ ಸದಾ ಬೇಯಿಸುವೆನೆಂದು ಕರಾರು ಬರೆದುಕೊಟ್ಟಿರುವೆನೇ? ಈ ರಾತ್ರಿ ನಾನು ಅಲ್ಲಿಯೇ ನಿಂತುಬಿಟ್ಟಿದ್ದರೇನು ಮಾಡುತ್ತಿದ್ದಿರಿ? ಅಡಿಗೆಯವನನ್ನೇಕೆ

ಗೊತ್ತುಮಾಡಬಾರದು? ಜೀವಪರ್ಯಂತ ನಾನೇ ದುಡಿಯಬೇಕೇನು?" ಎಂದು ಕೂಗಾಡಿದಳು.

ಈ ಕೋಪದ ಮಾತುಗಳನ್ನು ಕೇಳಿದ ಉಮಾನಾಥನಿಗೆ ಆಶ್ಚರ್ಯವಾಯಿತು. ಕಾರಣವಿಲ್ಲದೆ ಹೀಗೆ ರೇಗಾಡುತ್ತಿರುವುದೇಕೆ ಎಂದವನಿಗೆ ತಿಳಿಯಲಿಲ್ಲ. ನಿತ್ಯವೂ ಸಂತೋಷದಿಂದ, ಸಮಾಧಾನದಿಂದ ವರ್ತಿಸುವ ಳೇಕೆ ಈ ದಿನ ಕೂಗಾಡುತ್ತಿದ್ದಾಳೆ ಎಂದವನು ಯೋಚಿಸಿದ. ಎಷ್ಟೋ ಸಾರಿ ಉಮಾನಾಥನೇ ರೂಪಕುಮಾರಿಗೆ ಅಡಿಗೆಯವನನ್ನು ಗೊತ್ತುಮಾಡಿಕೊಡುವೆ ಎಂದು ಹೇಳಿದ್ದ. ಆವಳೇ ಅವನನ್ನು ತಡೆದು "ಅಡಿಗೆಯವನೇಕೆ? ಅವನು ಬಂದರೆ ನಾನು ಕೆಲಸವಿಲ್ಲದೆ ಕೂಡಬೇಕಾಗುತ್ತದೆ. ಈಗಿರುವ ಖರ್ಚಿನ ಹೊರೆಗೆ ಆ ಖರ್ಚುಯೇಕೆ?" ಎನ್ನುತ್ತಿದ್ದಳು.

ಹೀಗೆಂದು ಅಡ್ಡಿಮಾಡುತ್ತಾ ಬರುತ್ತಿದ್ದವಳು, ಗಂಡನನ್ನು ಜರಿಯುತ್ತಾ, ತಿರಸ್ಕಾರ ಮಾಡಿದಳು.

ಉಮಾನಾಥ ಪ್ರತಿಯಾಗಿ ರೂಪಕುಮಾರಿಗೆ "ಎಷ್ಟು ಸಾರಿ ಅಡಿಗೆಯವನನ್ನು ಗೊತ್ತುಮಾಡಿಕೊಡುವೆ ಎಂದು ಕೇಳಲಿಲ್ಲ?" ಎಂದ.

"ಹಾಗಾದರೆ ಏಕೆ ಗೊತ್ತುಮಾಡಲಿಲ್ಲ? ನೀವು ಗೊತ್ತುಮಾಡಿದವನನ್ನು ನಾನು ತೆಗೆದುಹಾಕುವೆನೆಂದು ಗೊತ್ತುಮಾಡಲಿಲ್ಲವೋ?" ಎಂದಳು.

"ತಪ್ಪು ನನ್ನದೋ?" ಎಂದು ಉಮಾನಾಥ ಕೇಳಿದ.

"ನೀವು ಹೀಗೆ ಕೇಳುವುದು ಸರಿಯಲ್ಲ" ಎಂದು ಕೋಪದಿಂದಲೇ ನುಡಿದ ರೂಪಕುಮಾರಿ, "ನನ್ನನ್ನು ಮೆಚ್ಚಿಸಲು ಹಾಗೆ ಹೇಳುತ್ತಿದ್ದಿರಿ. ನಿಜವನ್ನು ತಿಳಿದುಕೊಳ್ಳಲಾರದಂತಹ ಮೂಢಳಲ್ಲ ನಾನು. ನೀವು ಎಂದೂ ನನ್ನ ಕ್ಷೇಮದ ಬಗ್ಗೆ ಯೋಚಿಸಿಯೇ ಇಲ್ಲ. ನಿಮಗೊಬ್ಬ ತೊತ್ತು ದುಡಿಯಲಿಕ್ಕೆ ಸಿಕ್ಕಿದ್ದಾಳೆಂದು ಸಮಾಧಾನದಿಂದಿರುವಿರಿ. ತೊತ್ತಿಗೆ ಉಣಲಿಕ್ಕೆ ಬಟ್ಟೆ, ನಿಲ್ಲಲಿಕ್ಕೆ ಮನೆಯಿದೆ. ನಿಮ್ಮ ಸಂಸಾರ ಆಯವ್ಯಯ ಪಟ್ಟಿಯಲ್ಲಿ ಹಣ ಉಳಿದಾಗಲೇ ತೊತ್ತಿಗೆ ಉಡಲಿಕ್ಕೆ ಬಟ್ಟೆಯ ಯೋಚನೆ ಮಾಡುತ್ತೀರಿ. ನೀವು ತರುವ ಎಪ್ಪತ್ತು ರೂಪಾಯಿ

ನನ್ನ ಕೈಗೆ ಹಾಕುತ್ತೀರಿ. ನಾನೇ ಸಂಸಾರದ ಕೊನೆಮೊದಲನ್ನು ತೂಗಬೇಕು. ನಿತ್ಯವೂ ನನಗೆ "ಯಾವುದನ್ನು ತೊಡಲಿ" ಎಂಬ ತೊಡಕು ಯಿದ್ದೇ ಇರುತ್ತದೆ. ನಿಮ್ಮ ಮನೆಯಲ್ಲಿ ದುಡಿದು ನಾನು ಕೆಟ್ಟೆ. ಪ್ರಪಂಚದ ಬೇರೆಬೇರೆ ಎಡೆಯಲ್ಲಿ ಗಂಡಂದಿರಿದ್ದಾರೆ. ಅವರು ಅವರ ಹೆಂಡಂದಿರ ಪ್ರಿಯತೆಗಾಗಿ ಆಕಾಶದಲ್ಲಿನ ನಕ್ಷತ್ರವನ್ನು ಕಿತ್ತುತರಲು ಸಿದ್ಧರಿರುತ್ತಾರೆ. ಬೇರೆ ಮಾತೇಕೆ? ಗುರುಸೇವಕನನ್ನು ನೋಡಿ! ಅವನು ನಿಮ್ಮಷ್ಟು ವಯಸ್ಸಿನವನಲ್ಲ, ನಿಮ್ಮಷ್ಟು ಓದಿದವನಲ್ಲ. ಐನೂರು ರೂಪಾಯಿ ತರುತ್ತಿದ್ದಾನೆ. ಅವನ ಹೆಂಡತಿ ರಾಣಿಯಂತೆ ಠೀವಿಯಿಂದ ಮೆರೆಯುತ್ತಾಳೆ. ನಿಮಗೆ ಎಪ್ಪತ್ತು ಗಳಿಸುವುದೇ ತೃಪ್ತಿಯಾಗಿದೆ. ಹೆಚ್ಚಿಗೆ ಸಂಪಾದಿಸುವ ಮನಸ್ಸಿಲ್ಲ. ಹೆಂಗಸಿನ ಹೃದಯಕ್ಕೆ, ಜೀವಕ್ಕೆ ಯಾವರೀತಿ ಉತ್ತೇಜನದ ಮೆರಗು ಕೊಡಬೇಕೆಂಬುದು ನಿಮಗೆ ತಿಳಿದಿಲ್ಲವಲ್ಲಾ! ನನ್ನ ಕಷ್ಟಸುಖದ ಪರಿವೆಯೇ ನಿಮಗಿಲ್ಲವಲ್ಲಾ! ನಿಮಗೇನಾಗಬೇಕು? ಉಡಲಿಕ್ಕೆ ಸ್ವಚ್ಛ ಬಟ್ಟೆ, ಉಣಲಿಕ್ಕೆ ಚೊಕ್ಕ ಭೋಜನ ಒದಗಿಸಿದರಾಯಿತಲ್ಲವೆ? ಎಂದಳು.

ಉಮಾನಾಥ, ರೂಪಕುಮಾರಿಯ ವಾಗ್ಬಾಣವನ್ನು ಒಂದೊಂದನ್ನಾಗಿ ಸಹಿಸಿಕೊಂಡು ಕೇಳುತ್ತ ನಿಂತ. ಅವನಿಗೆ ತಿಳಿದಮಟ್ಟಿಗೆ, ಅವನು ರೂಪಕುಮಾರಿಗೆ ಕಷ್ಟ ಕೊಟ್ಟಿರಲಿಲ್ಲ. ಅವನು ಗಳಿಸುತ್ತಿದ್ದುದು ಅಲ್ಪ ನಿಜ. ಆದರೆ ಅವನಿಗೆ ಉಪಾಯವಿರಲಿಲ್ಲ. ಮೇಲಣ ಅಧಿಕಾರಿ ಮನಮೆಚ್ಚುವಂತೆ ಅವನು ತೃಪ್ತಿಕರವಾಗಿ ಕೆಲಸಮಾಡಿಕೊಂಡು ಹೋಗುತ್ತಿದ್ದ. ಅಲ್ಲದೆ, ಅಧಿಕಾರಿಯ ಪ್ರೀತಿಪಾತ್ರನಾಗಲು, ಅವನ ಕೊನೆಯ ಮಗನಿಗೆ ಆರು ತಿಂಗಳ ಕಾಲ ಫಲಾಪೇಕ್ಷೆಯಿಲ್ಲದೆ ಪಾಠ ಹೇಳಿಕೊಟ್ಟಿದ್ದ. ಗುರುಸೇವಕ ಐನೂರು ಸಂಪಾದಿಸುತ್ತಿದ್ದಾನೆ. ಅಷ್ಟು ಹೆಚ್ಚು ಸಂಪಾದಿಸುವವನು ನಿಜವಾಗಿ ಅದೃಷ್ಟವಂತನೆ. ಒಬ್ಬನು ವಿಶಾಲವಾದ ಹಣೆಯನ್ನು ನೋಡಿ ಅಸೂಯೆಪಟ್ಟು ತನ್ನ ಚಿಕ್ಕ ಹಣೆಯನ್ನು ದೊಡ್ಡದನ್ನಾಗಿ ಮಾಡಿಕೊಳ್ಳಲು ಯತ್ನಿಸುವುದಿಲ್ಲ. ಗುರುಸೇವಕ ಅದೃಷ್ಟಶಾಲಿ. ಎಲ್ಲರೂ ಅವನಂತೆ ಅದೃಷ್ಟಶಾಲಿಗಳಾಗಿರಲು ಹೇಗೆ ಸಾಧ್ಯ? ಎಲ್ಲರಿಗೂ ಲಭ್ಯವಿರುವುದಿಲ್ಲವಲ್ಲಾ! ಉಮಾನಾಥನಿಗೆ, ಗುರುಸೇವಕ ನಿಜವಾಗಿ ಐನೂರು ತರುತ್ತಿದ್ದಾನೆಯೋ ಇಲ್ಲವೆ ಸುಳ್ಳಿನ ಕಂತೆಯೋ ಎಂದು ಕಂಡಿತು.

ಗಳಿಸುವವ ಹೆಚ್ಚು ಗಳಿಸಲಿ ಚಿಂತೆಯಿಲ್ಲ. ರೂಪಕುಮಾರಿಯೇಕೆ ನನ್ನ
ತೆಗಳಬೇಕು? ಅವಳಿಗಿಂತಲೂ ಹೆಚ್ಚು ಸುಂದರಿಯರ ಗುಣವಣ
ಯನ್ನು ನಾನು ಮಾಡಿದುದಾದರೆ, ಅವಳಿಗೆ ಹೇಗೆನಿಸುವುದು? ಪ್ರ
ಗಳಿಸಿ ಮೆಚ್ಚಿಕೊಂಡಿದ್ದ ಅವಳ ಹೃದಯಕ್ಕೆ ಹೇಗಾಗುವುದು? ರೂ
ಕುಮಾರಿಗಿಂತ ಮೀರಿದ ಸಹವರ್ತಿಗಳು, ಸುಂದರಿಯರು, ಸಹನಾವ
ಗಳಿದ್ದಾರೆ. ಹೀಗೆಂದು ನಾನು ಅವಳನ್ನು ಅಲ್ಲಗಳೆಯುತ್ತಿದ್ದೇನೆಯೇ
ಎಂದವನು ಪರ್ಯಾಲೋಚಿಸಿದ.

ಹಿಂದೆ, ತರುಣದಲ್ಲಿ, ರೂಪಕುಮಾರಿಗಿಂತ ಸುಂದರಿಯರು ಬೇ
ಇಲ್ಲವೇ ಇಲ್ಲವೆಂಬ ಭಾವನೆಯೆಂದಿದ್ದ. ಉಮಾನಾಥನ ಈ ಭಾವ
ಕ್ರಮೇಣ ಅಳಿಸಿಹೋಯಿತು. ಕಲ್ಪಿತ ಸೃಷ್ಟಿಯಿಂದವನು ಇಳಿದು ಸಹ
ದೃಷ್ಟಿಗೆ ಬಂದು ಎಷ್ಟೋ ದಿನವಾಗಿತ್ತು. ಸಾಕಷ್ಟು ದಾಂಪತ್ಯಜೀವನ
ಅನುಭವವೂ ಬಂದಿತ್ತು. ದಂಪತಿಗಳು ಪರಸ್ಪರ ಅರ್ಹತೆ, ಅನರ್ಹ
ಗಳನ್ನು ತಿಳಿದುಕೊಂಡಿದ್ದರು. ಸೈರಣೆಯಿಂದ, ಸಹನೆಯಿಂದ, ಒಮ್ಮತ
ದಿಂದ ಸಾಗುವುದರಿಂದಲೇ ಸುಖವಿದೆಯೆಂದು ತಿಳಿದುಕೊಂಡಿದ್ದರು. ಹೀ
ತಿಳಿದು, ಎಚ್ಚೆತ್ತು, ಜೀವನನೌಕೆ ನಡಿಸಿಕೊಂಡು ಹೋಗುತ್ತಿದ್ದ ರೂ
ಕುಮಾರಿಗೆ, ಸಾಧಾರಣ ಜೀವನತತ್ವದ ಸೂತ್ರಗಳು ಪೂರ್ಣವಾ
ಅರ್ಥವಾಗಿರಲಿಲ್ಲ.

ಇನ್ನೂ ಅವಳಿಗೆ ಜೀವನದ ಸಾರಾಸಾರ ವಿಚಾರ ಅರ್ಥವಾಗಿಲ್ಲ
ವೆಂದು ಉಮಾನಾಥ, ಕರುಣೆಯಿಂದಲೇ ಕಾಣುತ್ತಿದ್ದ. ಅವಳ ವಾಗ್ಬಾ
ಣಕ್ಕೆ ಪ್ರತಿಯಾಗಿ ಅವನು ಯಾವುದನ್ನೂ ಎತ್ತಲಿಲ್ಲ. ಗಣಿಸದೆ
ಸಂದೇಹಿಸದೆ, ಎಲ್ಲವನ್ನೂ ನುಂಗಿಕೊಂಡ. ರೂಪಕುಮಾರಿಯು, ತಂಗಿ
ರಾಮದುಲಾರಿ ಕಣ್ಣು ಕುಕ್ಕುವ ವಡವೆ ವಸ್ತ್ರ ಧರಿಸಿ ಬಂದುದನ್ನು
ನೋಡಿ, ತನಗಿಲ್ಲವೆಂದು, ಆ ಭಾಗ್ಯ ತಾನು ಕೇಳಿಕೊಂಡು ಬಂದಿಲ್ಲ
ವೆಂದು, ಗೋಳಾಡಿಕೊಂಡು ಮನೆಗೆ ಹಿಂದಿರುಗಿದ್ದಳು. ರೂಪಕುಮಾರಿ,
ತಾಪಸಿಯಂತೆ ಲೋಕದ ಬೆಡಗನ್ನು ವರ್ಜಿಸಿದವಳಲ್ಲ. ಅವಳ ಬುದ್ಧಿ
ಮಟ್ಟಕ್ಕೆ, ಹೆಚ್ಚು ಕಡಿಮೆಗಳನ್ನು ತೂಗಿಕೊಂಡು ಹೋಗುವಷ್ಟು ಶಕ್ತಿ

ಯಿರಲಿಲ್ಲ. ಹೀಗೆಂದು ಪೂರ್ಣವಾಗಿ ಯೋಚಿಸಿ, ರೂಪಕುಮಾರಿಯ ಉಬ್ಬರವಿಳಿತಕ್ಕೆ ಕಾರಣವೇನೆಂದು ತಿಳಿದುಕೊಂಡ ಉಮಾನಾಥ, ಗುರು ಸೇವಕನ ವಿಚಾರವಾಗಿ ಸ್ಥೂಲ ವಿಷಯಗಳನ್ನು ತಿಳಿದುಕೊಳ್ಳಬೇಕೆಂದು ನಿರ್ಣಯಿಸಿದ.

೨

ಒಂದು ವಾರದವರೆಗೆ ರೂಪಕುಮಾರಿಯ ಮನಸ್ಸು ಹದಗೆಟ್ಟು ಹೋಗಿತ್ತು. ಸಣ್ಣಪುಟ್ಟ ತಪ್ಪಿಗವಳು ಮಕ್ಕಳನ್ನು ಬೆದರಿಸುತ್ತಾ, ಗಂಡ ನೊಡನೆ ಜಗಳವಾಡುತ್ತಾ, ತನ್ನ ವಿಧಿಯನ್ನು ಹಳಿದುಕೊಂಡು, ಕಾಲ ಕಳೆದಳು. ಮನೆಗೆಲಸ ನಿರ್ವಹಿಸಲಿಕ್ಕೆ ಬೇರೆ ಯಾರೂ ಇಲ್ಲದ್ದರಿಂದ ಗೊಣಗುತ್ತಲೇ ಅವಳು ಕೆಲಸಮಾಡತೊಡಗಿದಳು. ಆದರೆ ಕೆಲಸಮಾಡು ತ್ತಿದ್ದವಳಿಗೆ ಮನಸ್ಸು ಮಾತ್ರ ನೆಟ್ಟಗಿರಲಿಲ್ಲ. ಸ್ವಚ್ಛಗೊಳಿಸುವುದರಲ್ಲಿ, ಕ್ರಮವಾಗಿ ಪದಾರ್ಥಗಳನ್ನು ಒಪ್ಪವಾಗಿಡುವುದರಲ್ಲಿ ಸದಾ ಆಸಕ್ತಿಯಿಂದ ತನ್ಮಯಳಾಗುತ್ತಿದ್ದವಳು, ಕೊನೆಕೊನೆಗೆ ಅವುಗಳ ಕಡೆಗೆ ಕಣ್ಣೆತ್ತಿ ನೋಡುವುದನ್ನೂ ಸಹಾ ಬಿಟ್ಟುಬಿಟ್ಟಳು. ಮನೆಯಲ್ಲಿ ಒಬ್ಬ ಸೇವಕನಿದ್ದ. ಒಡತಿ ಕೆಲಸವನ್ನು ನಿರ್ಲಕ್ಷಿಸಿಬಿಟ್ಟಾಗ, ಅವನು ಸೋಮಾರಿತನದಿಂದ ಸ್ವೇಚ್ಛಾವೃತ್ತಿ ಅನುಸರಿಸಿದ. ತಾಯಿಯ ಹತ್ತಿರ ಮಕ್ಕಳು ಬರಲಿಕ್ಕೆ ಅಂಜಿ ಹಿಂಜರಿದವು. ಉಮಾನಾಥ ಹೆಂಡತಿಯ ನೆರಳುಬಿದ್ದರೆ ಸಾಕು ಮರೆ ಯಾಗಿಬಿಡುತ್ತಿದ್ದ. ಕಛೇರಿಗೆ ಹೊರಡುವ ಮೊದಲು ಎಲೆಗೆ ಹಾಕಿದುದನ್ನು ತಿಂದು ಮುಗಿಸಿ, ಮನೆಯಿಂದ ಪಾರಾಗುತ್ತಿದ್ದ. ಅವನು ಹಿಂದಿರುಗು ತ್ತಿದ್ದುದು ಸಂಜೆಯೆ. ಮನೆಗೆ ಬಂದೊಡನೆಯೇ ತನ್ನ ಇಬ್ಬರು ಮಕ್ಕ ಳೊಂದಿಗೆ ಎಲ್ಲಿಯಾದರೂ ದೂರ ವಾಯುಸೇವನೆಗೆ ಹೊರಟುಬಿಡುತ್ತಿದ್ದ. ಅವನು ರೂಪಕುಮಾರಿಯೊಂದಿಗೆ ಮಾತನಾಡುವುದೆಂದರೆ ಸಿಡಿಮದ್ದಿಗೆ ಬೆಂಕಿ ತಗುಲಿದಂತೆಯೇ ಆಗಿತ್ತು. ಉಮಾನಾಥ ಈ ನಡುವೆ, ಗುರು ಸೇವಕನ ಬಗ್ಗೆ ಹೆಚ್ಚು ತಿಳಿಯುವ ಕೆಲಸದಲ್ಲಿ ನಿರತನಾಗಿದ್ದ.

ಒಂದು ದಿನ ಅಕಸ್ಮಿಕವಾಗಿ ಉಮಾನಾಥ ಕಛೇರಿಯಿಂದ ಮನೆಗೆ ಬಂದ. ಸಂಜೆಯ ಸಮಯ. ಅವನೊಂದಿಗೆ ಗುರುಸೇವಕನನ್ನು ಕರೆ

ತಂದಿದ್ದ. ರೂಪಕುಮಾರಿ ಹಿಂದಿನ ರೂಢಿಯಂತೆ ಕುರ್ಚಿಮೇಜುಗಳನ
ಒರೆಸುತ್ತಿದ್ದಳು. ಮುಂದಾಗಿ ಅವನನ್ನು ಕರೆತರುತ್ತೇನೆಂದು ತಿಳಿಸ
ಗಂಡನನ್ನು ನೋಡಿ ಅವಳು ಕೋಪದಿಂದ ಕುದಿಯುತ್ತಿದ್ದಾಗ, ಗುರ
ಸೇವಕ ಅತ್ತಿಗೆಯನ್ನು ನೋಡಿ ವಂದಿಸಿದ. ರೂಪಕುಮಾರಿ ತಾಳಿ
ಕೋಪವನ್ನು ನೋಡಿದ ಉಮಾನಾಥನಿಗೆ ಎಲ್ಲಿ ತನ್ನ ಮುಖವನ್ನು ಪರ
ಬಿಡುವಳೋ ಎಂದು ತೋರಿತು. ಮುಂಚಿತವಾಗಿ ತಿಳಿಸದೆ, ಗುರುಸೇವ
ನನ್ನು ಆಹ್ವಾನಿಸಿದುದು ರೂಪಕುಮಾರಿಯ ದೃಷ್ಟಿಯಲ್ಲಿ ಮಹಾಪರಾ
ವಾಗಿತ್ತು. ಉಮಾನಾಥನಿಗೆ ತಿಳಿವಳಿಕೆ ಇರಲಿಲ್ಲವೇನು? ಅವನು ನ
ವಳಿಕೆಯನ್ನು ತಿಳಿದುಕೊಂಡವನೆ. ಅವನಿಗೆ ಯಾರಲ್ಲಿಯೂ ತನ್ನ ಸರ
ಜೀವನವನ್ನು, ಬಡತನವನ್ನು ಮುಚ್ಚಿಟ್ಟುಕೊಳ್ಳಬೇಕೆಂಬ ಆಸೆಯಿ
ಲ್ಲಿಲ್ಲ. ರೂಪಕುಮಾರಿ, ಬಡತನವನ್ನು ತೋರ್ಪಡಿಸದೆ ಇತರರೊಂದಿ
ಮುಚ್ಚಿಟ್ಟುಕೊಳ್ಳುವ ಸಾಹಸ ಮಾಡುತ್ತಿದ್ದುದರಿಂದ, ಅವನು ಅವಳಿ
ತಿಳಿಸದೆ ಗುರುಸೇವಕನನ್ನು ಮನೆಗೆ ಕರೆದು ಬಂದಿದ್ದ.

ಗುರುಸೇವಕನನ್ನು ಆಶೀರ್ವದಿಸುತ್ತಾ, ಕುಳಿತುಕೊಳ್ಳಲಿಕ್ಕೆ ಕುರ್ಚಿ
ಯನ್ನು ತೆರವು ಮಾಡಿಕೊಟ್ಟ ರೂಪಕುಮಾರಿ "ಮನೆಯಲ್ಲೆಲ್ಲರೂ
ಕ್ಷೇಮವೇ" ಎಂದು ಮಾತನಾಡಿಸಿದಳು. ಗುರುಸೇವಕ ಪ್ರತಿಯಾಗಿ
"ಅವರು ನನ್ನನ್ನು ಮನೆಗೆ ಬರುವಂತೆ ಒತ್ತಾಯ ಪಡಿಸಿದರು. ನಾನ
ಇಲ್ಲಿಗೆ ಬರಲು ಸಮಯವೇ ಇರಲಿಲ್ಲ. ನಿಮ್ಮ ಒತ್ತಾಯದ ಮೇಲ
ಕರೆಯುತ್ತಿದ್ದೇನೆ ಎಂದವರು ತಿಳಿಸಿದಮೇಲೆ ಇಲ್ಲಿಗೆ ಕೂಡಲೇ ಬರಬೇಕಾ
ಯಿತು" ಎಂದ.

ರೂಪಕುಮಾರಿ ವಿಷಯವನ್ನು ಹೊರಳಿಸಿ, ತನಗೂ ಗಂಡನಿಗೂ
ಇರುವ ವೈಮನಸ್ಸನ್ನು ತೋರಗೊಡದೆ "ಆ ದಿನ ನಿಮ್ಮ ಮನೆಗೆ ಬರಲಾಗ
ಲಿಲ್ಲ. ಮಕ್ಕಳನ್ನು ಕಾಣಬೇಕೆಂಬ ಆವಸರದಲ್ಲಿದ್ದೆ" ಎಂದಳು.

ಈ ಮಾತಿಗೆ ಗಮನಿಸದೆ, ಮನೆಯ ಅತ್ತಯಿತ್ತ ನೋಡಿ ಸ್ವಲ್ಪವೂ
ಯೋಚಿಸದೆ "ನೀವು ಈ ಪಂಜರದಲ್ಲಿ ಅತಿ ಕಷ್ಟದಿಂದ ಕಾಲ ಹಾಕು
ತ್ತಿದ್ದೀರಲ್ಲವೆ?" ಎಂದು ಕೇಳಿಯೇಬಿಟ್ಟ.

ಇನ್ನೊಬ್ಬರ ಹೃದಯವನ್ನು ಇರಿಯುವಂಥವನನ್ನು, ಸಮಯ ಸಂದರ್ಭವನ್ನರಿತು ಮಾತನಾಡಲರಿಯದವನನ್ನು ನೋಡಿದ ರೂಪ ಕುಮಾರಿಗೆ ಅತಿ ಸಿಟ್ಟು ಬಂತು.. ಗುರುಸೇವಕನ ಚರ್ಯೆಯನ್ನು ಅತಿ ಸೂಕ್ಷ್ಮಳಾದ ರೂಪಕುಮಾರಿ ಒಡನೆಯೇ ಗ್ರಹಿಸಿಕೊಂಡು, ಎಲ್ಲರೂ ಇವನಂತೆ ಅದೃಷ್ಟಶಾಲಿಗಳಾಗಿರಲು ಸಾಧ್ಯವೆ? ಹತ್ತು ಸಾವಿರದ ಪೈಕಿ ಯಾರಿದರೆ ಒಬ್ಬ ಅದೃಷ್ಟಶಾಲಿಯೆನಿಸಿಯಾನು. ನಿಜಸ್ಥಿತಿ ಹೀಗಿದ್ದರೂ ಮತ್ತೊಬ್ಬರನ್ನು ನೋಯಿಸುವುದು ಯಾವ ನ್ಯಾಯ? ಕೆಲವೇ ಕೆಲವು ಅದೃಷ್ಟಶಾಲಿಗಳಿಂದ ಲೋಕಕ್ಕಾದ ಪ್ರಯೋಜನವೇನು? ಬಲ್ಲಿದರ ಸುಖ ಸಂತೋಷವೆಲ್ಲಾ, ಅವರ ನಿರ್ದಯ, ಪಶುವೃತ್ತಿ, ಲಜ್ಜೆಗೇಡಿತನವನ್ನು ಪ್ರಕಟಿಸುವುದಿಲ್ಲವೆ? ಎಂದುಕೊಂಡಳು.

ಈ ಸೂಚನೆ, ರೂಪಕುಮಾರಿಯ ಮನಸ್ಸಿಗಾದ ನೋವು, ಗುರು ಸೇವಕನಿಗೆ ಗೋಚರಿಸಿದಂತೆ ಕಾಣಲಿಲ್ಲ. ರೂಪಕುಮಾರಿ ತನ್ನ ಭಾವನೆ ಯನ್ನೆಲ್ಲಾ ತೋರ್ಪಡಿಸುತ್ತಾ "ವಿಶಾಲವಾದ ಮನೆಗಿಂತ ಸಣ್ಣ ಪಂಜರವೇ ಮೇಲು. ಪಂಜರದಲ್ಲಿ ಹಕ್ಕಿ ಸಂತೋಷದಿಂದ ನಲಿಯುತ್ತಿರುತ್ತದೆ. ವಿಶಾಲವಾದ ಮನೆಯಲ್ಲಿ ಭಯಂಕರ ಮೃಗಗಳು ಬೀಡುಮಾಡಿಕೊಂಡಿರು ತ್ತದೆ" ಎಂದಳು.

ಗೂಡಾರ್ಥ ತಿಳಿಯದ ಗುರುಸೇವಕ "ಈ ಮನೆಗೆ ಪ್ರವೇಶಿಸಿದೊಡ ನೆಯೇ ಉಸಿರು ಕಟ್ಟಿಹೋದಂತೆ ತೋರಿತು. ನಮ್ಮ ಮನೆಯ ಹತ್ತಿರ ವಿಶಾಲವಾದ ಮನೆಯಿದೆ. ಆ ಮನೆಯನ್ನು ನಿಮಗೆ ಗೊತ್ತುಮಾಡಿ ಕೊಡುವೆ. ನೀವೇನೂ ಅಲ್ಲಿ ಬಾಡಿಗೆ ಕೊಡಬೇಕಾದುದಿಲ್ಲ. ಅದು ನನ್ನ ಒಡತಿಗೆ ಸೇರಿರುವಂತಹ ಸ್ವತ್ತು. ನಾನೂ ಒಡತಿಗೆ ಸೇರಿರುವ ಮನೆ ಯೊಂದರಲ್ಲಿ ವಾಸಿಸುತ್ತಿದ್ದೇನೆ. ಎಲ್ಲಾ ಮನೆಗಳು ನನ್ನ ಸ್ವಾಧೀನದಲ್ಲಿವೆ. ಅವುಗಳನ್ನು ನಾನು ಯಾರಿಗಾದರೂ ಕೊಡಬಹುದು, ಬಾಡಿಗೆ ವಸೂಲು ಮಾಡಬಹುದು. ಅವುಗಳ ಪೈಕಿ ನಿಮಗೆ ಉತ್ತಮವಾದ ಮನೆಯನ್ನು ಗೊತ್ತುಮಾಡಿಕೊಡುವೆ. ಏಕೆಂದರೆ ನಿಮ್ಮಲ್ಲಿ ನನಗೆ ಹೆಚ್ಚು ಗೌರವವಿದೆ" ಎಂದ.

ಇವನು ಕುಡಿದು ಅಮಲೇರಿ ಬಂದವನೆಂದು ರೂಪಕುಮಾ
ತಿಳಿಯಿತು. ಅವನನ್ನು ಪರೀಕ್ಷಿಸಲು ಅವಳು ಹತ್ತಿರ ಬ
ನೋಡಿದಳು. ಗುರುಸೇವಕನ ಕಂದಿದ ಕೆನ್ನೆಗಳು, ಸುರಗಿದ ಕಣ್ಣು ಗ
ಸ್ವಾಧೀನಕ್ಕೆ ಬಾರದ ಅವನ ನಾಲಿಗೆಯನ್ನು ನೋಡಿದ ರೂಪಕುಮ
"ಇವನೆಂತಹ ಸಾದೃಶ ಮನುಷ್ಯ!" ಎಂದುಕೊಂಡಳು. ಅವನಲ್ಲಿಟ್ಟ
ಗೌರವಾದರಗಳು ಅಲ್ಲಿಗೇ ಕರಗಿಹೋಯಿತು. ಸುಂದರನಾಗಿ, ಸ
ಸ್ವಭಾವದವನಂತೆ ಹಿಂದೆ ಕಾಣಿಸಿದ ಗುರುಸೇವಕ, ಚೊಕ್ಕಮನುಷ್ಯನ
ಬೆಸಿಗೆ ಹಾಕಿದ ಪಾತ್ರೆಯ ಹಾಗೆ, ಪಕ್ಕಾ ಬಡಾಯಿಖೋರ ಎಂದವ
ತಿಳಿದು ದ್ವೇಷಿಸಿದಳು.

ತೂಗಾಡುತ್ತಾ ತೊದಲುತ್ತಾ ಅವನು "ನಿಮ್ಮಲ್ಲಿ ನನಗೆ ಗೌರ
ಅಧಿಕ. ನೀವು ದೊಡ್ಡವರು. ನಾನು ಸದಾ ನಿಮ್ಮ ಸೇವೆಯಲ್ಲಿರಲ
ಇಷ್ಟಪಡುತ್ತೇನೆ. ಒಂದು ಮನೆಯೇಕೆ? ನೂರಾರು ಮನೆಗಳನ್ನು
ನಿಮಗೆ ತೆರವು ಮಾಡಿಕೊಡುತ್ತೇನೆ. ನಾನು ಶ್ರೀಮತಿ ಲೋಹಿಯಾ
ರವರ ಪ್ರತಿನಿಧಿ. ನನ್ನ ಯಾವ ಕೆಲಸಕ್ಕೂ ಅವರು ಒಪ್ಪಿಗೆ ಕೊಡುತ್ತಾರೆ
ನನ್ನನ್ನು ಅವರು ತಮ್ಮ ಮಗನೆಂದು ಭಾವಿಸಿರುತ್ತಾರೆ. ಅವರ ಇಡಿ
ಸ್ವತ್ತಿಗೆ ನಾನೇ ಅಧಿಕಾರಿಯಾಗಿದ್ದೇನೆ. ಶ್ರೀ ಲೋಹಿಯಾರವರು
ಶ್ರೀಮಂತರು. ಅವರು ನನ್ನನ್ನು ಮೊದಲು ಇಪ್ಪತ್ತು ರೂಪಾಯಿ
ವೇತನಕ್ಕೆ ನೇಮಿಸಿಕೊಂಡರು. ಅವರಿಗೆ ಇಷ್ಟು ಧನ ಹೇಗೆ ಸಂಪಾದನೆ
ಯಾಯಿತೆಂದು ನನ್ನ ವಿನಹಾ ಯಾರಿಗೂ ತಿಳಿಯದು. ಅವರು ನಿಷಿದ್ಧ
ವಸ್ತುಗಳ ಮಾರಾಟಗಾರರು. ಈ ಸಂಗತಿ ಯಾರಿಗೂ ತಿಳಿಸಬೇಡಿ.
ಅಫೀಮನ್ನು ಮಾರಿ ಅವರು ಸಾವಿರಾರು ರೂಪಾಯಿ ಸಂಪಾದಿಸಿದರು.
ಅವರಿಗೆ ನಾನು ಸಹಾಯಮಾಡುತ್ತಿದ್ದೆ. ನಮ್ಮ ಪರವಾಗಿ ಬೇರೆಬೇರೆ
ಸ್ಥಳದಲ್ಲಿ ವ್ಯಾಪಾರ ನಡೆಸಲು ಗುಪ್ತಜನರಿದ್ದಾರೆ. ಶ್ರೀ ಲೋಹಿಯಾರವರು
ನನ್ನನ್ನು ತಮ್ಮ ವೃತ್ತಿಗೆ ತೆಗೆದುಕೊಂಡು ಚೆನ್ನಾಗಿ ತರಪೇತು ಮಾಡಿ
ದರು. ನಾನೂ ಅವರಿಗೆ ಸರಿಯಾದ ಪ್ರತಿನಿಧಿಯಾಗಿ ವ್ಯಾಪಾರಮಾಡಿದೆ.
ನನ್ನನ್ನು ಬಂಧಿಸಲು ಈಗ ಯಾರಿಂದಲೂ ಸಾಧ್ಯವಿಲ್ಲ ಮುಖ್ಯಾಧಿಕಾರಿ
ಗಳೆಲ್ಲಾ ನನಗೆ ತಿಳಿದವರಾಗಿದ್ದಾರೆ. ನನ್ನ ವ್ಯವಹಾರದಲ್ಲಿ ಇತರರು

ಕೈಹಾಕದಿರಲೆಂದು ಕಂತೆಗಟ್ಟಲೆ ನೋಟುಗಳನ್ನು ಕೊಟ್ಟು ಬಾಯಿ ಮುಚ್ಚಿಸುತ್ತೇನೆ. ಕೈತೋರಿ ಯಾರೂ ನನ್ನ ಬಗ್ಗೆ ಮಾತನಾಡುವುದೇ ಇಲ್ಲ. ಲಂಚ ರೂಪವಾಗಿ ಒಬ್ಬನಿಗೆ ಸಾವಿರ ರೂಪಾಯಿ ತೆತ್ತೆನೆಂದು ಲೆಖ್ಖದಲ್ಲಿ ತೋರಿಸುತ್ತೇನೆ. ಅವನಿಗೆ ಕೊಡುವುದು ಐನೂರೆ, ಉಳಿದ ಹಣ ನನ್ನ ಜೇಬಿಗೆ ಮತ್ತು ನನ್ನ ಸ್ನೇಹಿತರ ಪಾಲಿಗೆ ಸೇರಿಹೋಗುತ್ತದೆ. ನಾನು ಬೇಕಾದಹಾಗೆ ಸಂಪಾದಿಸುತ್ತೇನೆ. ಸೀರಿನಂತೆ ಖರ್ಚುಮಾಡಿ ಬಿಡುತ್ತೇನೆ. ಅನೇಕ ಇಲಿಗಳನ್ನು ನುಂಗಿ ಬೆಕ್ಕು ತೀರ್ಥಯಾತ್ರೆಗೆ ಹೊರಟಂತೆ, ಯಾವ ಯಾವ ರೀತಿಯಿಂದಲೋ ಸಂಪಾದಿಸಿ ಶ್ರೀಮಂತ ಳಾಗಿರುವ ಶ್ರೀಮತಿ ಲೋಹಿಯಾ ಸದಾ ದೇವರ ಧ್ಯಾನ ಮಾಡುತ್ತಾ ಇರುತ್ತಾಳೆ. ನನ್ನ ವ್ಯವಹಾರವನ್ನು ತಡೆಗಟ್ಟುವುದಾಗಲೀ, ಆಧೀನಕ್ಕೆ ಒಳಪಡಿಸಿಕೊಳ್ಳುವುದಾಗಲೀ ಯಾರಿಗೂ ಸಾಧ್ಯವಿಲ್ಲ" ಎಂದು ಹೇಳುತ್ತಾ ಜೇಬಿನಿಂದ ಒಂದು ಕಂತೆ ನೋಟನ್ನು ತೆಗೆದು "ಅತ್ತಿಗೆ ಇದನ್ನು ನಾನು ನಿಮಗೆ ವಿನಯದಿಂದ ಕೊಡುತ್ತಿದ್ದೇನೆ. ನನ್ನ ಮಹತ್ ವ್ಯಾಪಾರ ಹೀಗೆಯೇ ಅಭಿವೃದ್ಧಿ ಹೊಂದುತ್ತಿರಲೆಂದು ಆಶೀರ್ವದಿಸಿ. ನಿಧಿ ಒಡೆಯ ಕುಬೇರ, ಆತ್ಮವನ್ನು ನಂಬಿ ಪ್ರಾಮಾಣಿಕತನದಿಂದ ವರ್ತಿಸುವವರನ್ನು ಒಲಿಯುವುದಿಲ್ಲ; ಒದೆದುಬಿಡುತ್ತಾನೆ. ನಿಧಿದೇವತೆ ಲಕ್ಷ್ಮಿ ತನಗಾಗಿ, ತನ್ನ ಸೇವೆಗಾಗಿ, ಜಾತಿ, ನೀತಿ, ರೀತಿಯನ್ನು ತೊರೆಯಲೊಪ್ಪಿದವರಿಗೆ ಮಾತ್ರ ಒಲಿಯುತ್ತಾಳೆ. ನಾನು ಕೆಟ್ಟವನೆಂದು ತಿಳಿಯಬೇಡಿ. ನಾನು ಶ್ರೀಮಂತನಲ್ಲ. ಶ್ರೀಮಂತನೆಂದು ಹೇಳಿಕೊಳ್ಳುವವರೆಲ್ಲಾ ಕಳ್ಳರು. ನಾನೂ ದೈವವಶಾತ್ ಶ್ರೀಮಂತನಾದರೆ ಧರ್ಮಶಾಲೆಯನ್ನು ಕಟ್ಟಿಸುತ್ತೇನೆ. ನಾನು ಹಾಗೆ ಮಾಡಿದುದಾದರೆ, ಇಡೀ ಜನ ನನ್ನ ಧರ್ಮದ ಕೆಲಸವನ್ನು ಬಾಯಿತುಂಬಾ ಹೊಗಳಿ ಹಾಡುತ್ತಾರೆ. ಹೊಗಳುವವರ ಪೈಕಿ ಒಬ್ಬನಾದರೂ ನನಗೆ ಹಣ ಹೇಗೆ ಸಂಪಾದನೆಯಾಯಿತೆಂದು ತಿಳಿಯುವ ಗೋಜಿಗೆ ಹೋಗುವುದಿಲ್ಲ. ಯಾವನೊಬ್ಬ ಸಾಧುವನ್ನೂ ನನ್ನ ಸ್ತುತಿಪಾಠಕ್ಕೆ ನೇಮಿಸಿಕೊಳ್ಳಬಲ್ಲೆ. ಹೊಟ್ಟೆಹೊರಕರ ಹೊಗಳುವ ಆಟ ಎಲ್ಲಿಗೆ ಮುಗಿಯುತ್ತದೆಯೆಂದು ತಿಳಿಯುತ್ತೀರಿ! ಶ್ರೀ ಲೋಹಿಯಾರವರನ್ನು ಹೊಟ್ಟೆಹೊರಕರು "ಧರ್ಮಾಲಂಕಾರ" ಎಂದು ಹೊಗಳಿ, ಹೆಸರಿ

ನಿಂದ ಕರೆಯುತ್ತಿದ್ದರು. ನೋಡಿದರೆ ಶ್ರೀ ಲೋಹಿಯಾರವರಿಗಿಂತ ಬೇರೊ ಹಾಸಿಯೇ ಇಲ್ಲ. ಎಲ್ಲೆಲ್ಲಿಯೂ ಈ ಬಗೆಯ ಸುಲಿಗೆ ನಡೆಯುತ್ತ ಇದೆ. ವಕೀಲರನ್ನು ನೋಡಿ, ಅರ್ಧಘಂಟೆ ವಾದಮಾಡಲು ಐವ ಐನೂರು ರೂಪಾಯಿ ಸುಲಿದುಬಿಡುತ್ತಾರೆ. ವೈದ್ಯರನ್ನು ನೋಡಿ? ಒಂ ಸಣ್ಣ ಶಸ್ತ್ರಕ್ರಿಯೆಗಾಗಿ ಸಾವಿರರೂಪಾಯಿ ಸೆಳೆದುಬಿಡುತ್ತಾರೆ. ವರ್ತ ಗಳು ಒಂದು ವ್ಯಾಪಾರದಲ್ಲಿ ಸಾವಿರಾರು ಗಿಟ್ಟಿಸಿಬಿಡುತ್ತಾರೆ. ಇವರೆಲ್ಲರ ನಿಸ್ಪೃಹತೆಯಿಂದ ಗಳಿಸುತ್ತಾರೆ ಎನ್ನುವುದಾದರೆ, ನನ್ನ ಸಂಪಾದನೆಯ ಹಾಗೆಯೇ ಎಂದು ಭಾವಿಸಿರಿ. ಸಿರಿವಂತನೆಂದರೆ ಗೌರವವಿಲ್ಲದವನೆಂದರ್ಥ ಸಿರಿವಂತರು ದೊಡ್ಡ ತಂತ್ರಗಾರರು. ಜಾಲತ್ವದಿಂದ ಜನರನ್ನು ಹೊರಳಿಸಿ ಸುಲಿದು ಲಾಭಗಳಿಸುತ್ತಾರೆ. ಬಡವರನ್ನು ಸುಲಿದು ಶ್ರೀಮಂತರಾಗುವ ಬರಸೆ ಹಿಂದಿನಿಂದ ಸಮಾಜಕ್ಕೆ ಬಂದ ಪದ್ಧತಿಯಾಗಿದೆ. ಇತರರು ಅನು ಸರಿಸುತ್ತಿರುವಂತೆ, ನಾನೂ ಅನುಸರಿಸುತ್ತಿದ್ದೇನೆ ಅಷ್ಟೆ. ಜೀವನದಲ್ಲಿ ಸುಖವನ್ನು ಕಾಣುವುದೇ ಮಾನವನ ಹಂಬಲ. ನನ್ನ ಇಚ್ಛೆಯೂ ಇದೇಯೇ. ಹೆಚ್ಚು ಸಂಪಾದಿಸಿ, ಹೆಚ್ಚು ಸುಖಪಡಬೇಕೆಂದು ಬಯಸು ತ್ತೇನೆ. ವಯಸ್ಸಾದ ಮೇಲೆ, ಧರ್ಮಶಾಲೆ ಕಟ್ಟಿಸುವ ಯೋಜನೆ ಇದ್ದೇ ಯಿದೆ. ಒಂದು ದಿನ ಶ್ರೀಮಂತರ ಮುಖ್ಯಸ್ಥನೆಂದೆನಿಸಿಕೊಳ್ಳುತ್ತೇನೆ. ಹೀಗೆ ಸುಲಿಗೆಮಾಡಿ, ಕಪಟಾಚಾರ ನಡಿಸಿ, ಗಳಿಸಿ, ಶ್ರೀಮಂತರಾಗಿರು ವವರ ಹೆಸರನ್ನು ವಿವರಿಸಲೇ?" ಎಂದ.

ಕುಡಿದುಬಂದಿದ್ದ ಗುರುಸೇವಕ ತೋರಗೊಡದೆ, ಎಚ್ಚರ ತಪ್ಪಿರುವು ದನ್ನು ಮರೆತು ಎದ್ದ. ಏಳುತ್ತಲೇ ಅವನ ಕಾಲುಗಳು ಅದುರಿದವು. ತೂಕತಪ್ಪಿ ಅವನು ಬಿದ್ದ. ಎದ್ದು ಚೇತರಿಸಿಕೊಂಡು ಹೆಜ್ಜೆಯಿಡುತ್ತಿದ್ದ. ರೂಪಕುಮಾರಿಯ ಎದುರಿನಿಂದ ಅವನು ಪಾರಾದಮೇಲೆ, ಅವಳಿಗೆ ಹಗುರ ವೆನ್ನಿಸಿತು. ತನ್ನ ಪ್ರಿಯವಾದ ಮನೆಯಲ್ಲಿ ತನಗೇ ಉಸಿರುಕಟ್ಟಿದಂತಾಗಿ ಹೋಗಿದ್ದವಳಿಗೆ ಪುನಃ ಸರಾಗವಾಗಿ ಉಸಿರಾಡಲು ಅವಕಾಶವಾಯಿತು. ಈ ನಡುವೆ ರೂಪಕುಮಾರಿಗೆ, ಶ್ರೀಮಂತಿಕೆಯ ನೈಜಸತ್ವ ಅರಿವಾಯಿತು. ಗುರುಸೇವಕನ ಅಸಂಬದ್ಧ ಪ್ರಲಾಪ, ಘೋರಣೆಯನ್ನು ಕೇಳಿದವಳಿಗೆ, ಶ್ರೀಮಂತಿಕೆಯ ಆಡಂಬರ, ಡಂಬಾಚಾರವೆಲ್ಲಾ ಪ್ರತ್ಯಕ್ಷಪ್ರಮಾಣವಾಗಿ

ತಿಳಿಯಿತು. ಉಮಾನಾಥ, ಗುರುಸೇವಕನನ್ನು ಕಂಡು "ಬನ್ನಿ ಚಹಾ ಆರಿಹೋಗುತ್ತಿದೆ" ಎಂದು ಒಳಗೆ ಕರೆದೊಯ್ದ.

ಸ್ಥಿರವಾಗಿ, ಪ್ರಾಮಾಣಿಕತನದಿಂದ ಜೀವನ ನಡೆಸಿಕೊಂಡು ಹೋಗುತ್ತಿದ್ದ ರೂಪಕುಮಾರಿಗೆ, ಸಿರಿಯ ಪ್ರಭಾವ, ಸಿರಿವಂತರು ನಡೆಸುತ್ತಿರುವ ಜಾಲ ಮತ್ತು ಹಿಂಸೆಗಳ ಅರ್ಥವಾಯಿತು. ಇಂತಹ ಕುಟಿಲ ಪ್ರಪಂಚದ ಬೆಡಗಿನ ಆಸೆಗೆ ಬಲಿಯಾಗಬೇಕೆಂದಿದ್ದೆನಲ್ಲಾ! ಸಮೃದ್ಧಿಯಾಗಿ ಬೆಳೆದು ನಿಂತಿದ್ದ ತೋಟದೊಳಗೆ ಹಿಂಡುದನಗಳು ಪ್ರವೇಶಿಸಿ ಎಲ್ಲವನ್ನೂ ನಾಶಪಡಿಸುವಂತೆ, ಕೀಳುಭಾವನೆಗೆ ಮನಸ್ಸು ಕೊಟ್ಟು ಸನ್ಮಾರ್ಗವನ್ನು ತೊರೆದುಬಿಟ್ಟಿದ್ದೆನಲ್ಲಾ ಎಂದವಳಿಗೆ ವಿಷಾದವಾಯಿತು. ಸದ್ಗುಣ, ಸನ್ಮಾರ್ಗ ತ್ಯಾಗಮಾಡಿ ಸಿರಿವಂತಿಕೆಯ ಸೋಗನ್ನು ಕಾಣಬೇಕೆಂಬ ಹಂಬಲವನ್ನು ತೊರೆದುಬಿಟ್ಟಳು. ಆಗವಳಿಗೆ, ರಾಮದುಲಾರಿಯ ಸ್ಥಿತಿಗತಿಯನ್ನು ನೆನೆದು ಮರುಕ ಬಂತು. ವಿಧಿಯಿಲ್ಲದೆ, ಗುರುಸೇವಕನ ಪ್ರಮೋದಗಳಿಗೆ ಬಲಿಯಾಗಿ ಅವನನ್ನು ಅನುಸರಿಸುತ್ತಿದ್ದಾಳೆ. ಅಂತಹ ಗಂಡನ ಹೆಂಡತಿಯಾದವಳು ಅನುಸರಿಸುವುದು ಸಹಜ. ಇದೆಂತಹ ಸೋಜಿಗ ಎಂದವಳಿಗೆನಿಸಿತು. ಆಧುನಿಕ ಸಮಾಜದಲ್ಲಿ ಜನರು ವರ್ತಿಸುವುದೇ ಹೀಗೆ. ಜನರ ತಿರುಳನ್ನು ನಡೆವಳಿಕೆಯನ್ನು ಅರಿಯುವ ಗೋಜಿಗೆ ಹೋಗಿ ಬೆಲೆ ಕಟ್ಟದೆ, ಅವರು ತೊಡುವ ಉಡುಪು ಮತ್ತು ಗಳಿಸಿ ಕೂಡಿಹಾಕಿರುವ ನಿಧಿಯನ್ನು ನೋಡಿ ಬೆಲೆ ಕಟ್ಟುತ್ತಾರೆ. ಅಸೂಯೆ, ಅನ್ಯಾಯ, ಅತ್ಯಾಚಾರಗಳ ಸುರಿಮಳೆಯಾಗಿಹೋಗಿ, ಸಿರಿವಂತರು ಬಡವರನ್ನು ತುಳಿದುಬಿಡುತ್ತಾರೆ. ರೂಪಕುಮಾರಿ ಹೀಗೆಂದು ಯೋಚಿಸುತ್ತಾ ವಿಮರ್ಶಿಸಿಕೊಳ್ಳುತ್ತಿದ್ದಾಗ, ಉಮಾನಾಥ ಪ್ರವೇಶಿಸಿ "ನಿನ್ನೊಂದಿಗೆ ಗುರುಸೇವಕ ಏನೇನು ಕೊಚ್ಚಿಕೊಳ್ಳುತ್ತಿದ್ದ?" ಎಂದು ಕೇಳಿದ. ರೂಪಕುಮಾರಿ ಅವನು ಬಡಾಯಿ ಕೊಚ್ಚಿಕೊಳ್ಳುತ್ತಿದ್ದುದನ್ನು ತಿಳಿಸುವುದರೊಳಗಾಗಿ "ಇಲ್ಲಿಂದ ಅವನನ್ನು ನಾನಾಗಿಯೇ ಕಳುಹಿಸಿಬಿಟ್ಟೆ. ಕಳ್ಳರಿಗೆ ಆಸ್ಪದವಿತ್ತರೆ ನಾವು ಗುಮಾನಿಗೆ ಕಾರಣರಾಗುತ್ತೇವೆ. ಪೋಲೀಸಿನವರಿಂದ ನಮಗೆ ತೊಂದರೆಯಾದೀತೆಂದು ಹೆದರಿದೆ" ಎಂದ.

ರೂಪಕುಮಾರಿ ಪರಿತಾಪದಿಂದ "ಅವನು ಗುಟ್ಟನಲ್ಲಿ ಮಾಡುತ್ತಿ
ಕಳ್ಳವ್ಯಾಪಾರದ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದ" ಎಂದಳು.

"ಶ್ರೀಮತಿ ಲೋಹಿಯಾರವರನ್ನು ಒಂದು ಬಾರಿ ನಾನು ಭೇ
ಯಾಗಬೇಕೆಂದು ಸೂಚಿಸಿದ್ದಾನೆ" ಎಂದು ಹೇಳಿದ ಉಮಾನಾಥ.

"ನೀವು ನಿಮ್ಮ ಉದ್ಯೋಗವನ್ನು ಅಂಟಿಕೊಂಡಿರಿ. ಹೀಗೆ ಉ
ದಿರುವುದೇ ನಮಗೆ ಮೇಲು" ಎಂದಳು ರೂಪಕುಮಾರಿ.

"ಹೆಚ್ಚಿನ ಲಾಭವಿಲ್ಲದ ಗುಮಾಸ್ತಗಿರಿಯಿಂದೇನು? ಇದರಲ್ಲಿ ಲಾ
ವಿಲ್ಲ, ಆತ್ಮ ಸಂತೋಷವಿಲ್ಲ. ಒಂದು ವರ್ಷಕಾಲ ರಜೆ ಪಡೆದು ಗು
ಸೇವಕನ ಪ್ರಪಂಚದಲ್ಲಿದ್ದುಕೊಂಡು ಸಂತೋಷ ಕಾಣಬೇಕೆಂದಿದ್ದೇನೆ
ಎಂದ ಉಮಾನಾಥ.

"ಬೇಡಿ, ಬೇಡಿ, ಜೀವನದಲ್ಲಿ ಹೆಚ್ಚು ಮೋದಪ್ರಮೋದಗಳನ್ನ
ಕಾಣುವ ಆಸೆಯೇ ಬೇಡಿ. ಅದೆಲ್ಲವನ್ನೂ ತೊರೆದುಬಿಟ್ಟಿದ್ದೇನೆ" ಎಂದಳ
ರೂಪಕುಮಾರಿ.

"ಈ ಮಾತು ಖಂಡಿತವೋ?"

"ಖಂಡಿತ."

ಸ್ವಲ್ಪ ಹೊತ್ತಿನಮೇಲೆ ಉಮಾನಾಥ, "ಮುಂಚೆಯೇ ಗುರುಸೇವ
ಕನ ವೃತ್ತಿ, ಸಂಪಾದನೆಯು ಬಗ್ಗೆ ನಿನಗೆ ತಿಳಿಸುತ್ತಿದ್ದೆ. ಆಗ ನಿಜವಾಗಿ
ನೀನು ನಂಬುತ್ತಿರಲಿಲ್ಲ" ಎಂದ.

"ಅಂತಹ ನೀಚರಿಂದ ಒಳ್ಳೆಯುವರಿಗೂ ಕೇಡು ಸಂಭವಿಸುವುದೆಂದು
ನಾನು ಯೋಚಿಸಲಿಲ್ಲ" ಎಂದಳು ರೂಪಕುಮಾರಿ.

"ಪೋಲಿಸ್ ಅಧಿಕಾರಿಯಿಂದ ನಾನು ಗುರುಸೇವಕನ ವಿಚಾರ
ವನ್ನೆಲ್ಲಾ ಕೇಳಿ ತಿಳಿದುಕೊಂಡೆ. ಮಿತಿಮೀರಿ ಕುಡಿಯುವಂತೆ ಅವನನ್ನು
ಒತ್ತಾಯಪಡಿಸಿದೆ. ಕುಡಿತದ ಅಮಲಿನಲ್ಲಿ ಅವನು ಮನಸ್ಸಿನಲ್ಲಿರುವು
ದನ್ನೆಲ್ಲಾ ಒದರಿಬಿಡಲಿಯೆಂದು ನಾನೇ ಈ ಕೆಲಸಕ್ಕೆ ಕೈಹಾಕಿದೆ."

"ಕುಡಿತ ನಿಮ್ಮನ್ನು ಆಕರ್ಷಿಸಲಿಲ್ಲವಲ್ಲ!"

"ಆಕರ್ಷಿಸಿತು. ಅದು ನನ್ನನ್ನು ಆಕರ್ಷಣೆಮಾಡಿಯೇ ನನ್ನ ಶಕ್ತಿ, ಜಾಣತನವನ್ನು ಈ ದಿನ ತೋರಲಿಕ್ಕೆ ಆಸ್ಪದವಿತ್ತಿತು."

"ದೇವರ ದಯೆಯಿಂದ ಅಂತಹ ದುಶ್ಚಟಗಳಿಗೆ ನಿಮ್ಮ ಮನಸ್ಸು ಪ್ರವೇಶಮಾಡದಿರಲಿ! ಗುರುಸೇವಕನ ಸ್ಥಿತಿಯನ್ನು ನೆನೆದು ವ್ಯಸನ ವಾಗುತ್ತಿದೆ. ಅವನು ಮನೆ ಸೇರಿದನೋ ಇಲ್ಲವೋ?"

"ಸಂದೇಹಿಸಬೇಕಾದುದೇ ಇಲ್ಲ. ಅವನು ತನ್ನ ಮೋಟಾರಿನಲ್ಲಿಯೇ ಹೋದ."

ರೂಪಕುಮಾರಿ ನೆಲದಕಡೆಗೆ ನೋಡುತ್ತಾ "ನಡೆಯಿರಿ, ರಾಮ ದುಲಾರಿಯ ಮನೆಗೆ ಹೋಗೋಣ. ನಮ್ಮಿಂದಾಗುವ ಸಹಾಯವನ್ನು ಮಾಡೋಣ. ಅವಳು ಆನಂದಮಯವಾದ ಸಾಮ್ರಾಜ್ಯದಲ್ಲಿ ಲೋಲಾಡು ತ್ತಿದ್ದಾಳೆಂದು ತಿಳಿದಿರುವಳು. ಸುಖಲೋಲುಪ್ತೆಯಲ್ಲಿರುವ ಅವಳ ಮನೆಯ ಸುತ್ತಲು ಅವಳನ್ನು ಎದುರುನೋಡುತ್ತಾ ಮಾಯಾಶಕ್ತಿ ಭೂತ ಗಳು ಕಾಯುತ್ತಿದೆಯೆಂದವಳಿಗೆ ತೋರದು" ಎಂದಳು.

ರೂಪಕುಮಾರಿ ಭಾವಪರವಶಳಾಗಿ ಮ್ಲಾತನಾಡುತ್ತಿದ್ದುದನ್ನು ಉಮಾನಾಥ ನೋಡಿದ.

*Printed at Bharathi Printing Works, Gollarpet, Bangalore City.*

## ಲೇಖಕರ ಇತರ ಕೃತಿಗಳು

**ಜೀವನ ಚರಿತೆ—**

ಶ್ರೀ ಶಿರ್ಡಿಮಹಾತ್ಮ ಶ್ರೀ ಸಾಯಿಬಾಬಾ.

**ಕವನಸಂಗ್ರಹ—**

ರಾಗಮಿಲನ, ಆಲಾಪನೆ.

**ಕಾದಂಬರಿ—**

ಹುಣ್ಣಿಮೆಯ ರಾತ್ರಿ, ಜ್ಞಾನಪ್ರಭಾ, ಪುನರಾಗಮನ, ಮರೀ
ಅನುರಾಗಿ.

**ಕಥಾಸಂಕಲನ—**

ಪ ... ಳಿಯ ಬಾವಿ.

**ಅಚ್ಚಿ ...**

ಮಹರ್ಷಿ ...